ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಜನವರಿ 10 ಶುಕ್ರವಾರ 2025

₹4

ಸಂಪುಟ: 45 | ಸಂಚಿಕೆ: 264 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಾಳೆ ಮೈಸೂರಲ್ಲಿ ಮಾಜಿ ಸಿಎಂ ಎಸ್.ಎಂ.ಕೃಷ್ಣರಿಗೆ ಶ್ರದ್ಧಾಂಜಲಿ



ಮೈಸೂರು, ಜ.9(ಜಿಎ)–ಮೈಸೂರು ಮಹಾನಗರ ಮತ್ತು ಜಿಲ್ಲಾ ನಾಗರಿಕ ಸಮಿತಿ ಹಾಗೂ ಮಂಡ್ಯ ಜಿಲ್ಲಾ ಬಳಗಗಳ ವತಿಯಿಂದ ಜ.11ರಂದು ಸಂಜೆ 4 ಗಂಟೆಗೆ ಮೈಸೂರಿನ ಗೋಕುಲಂನಲ್ಲಿರುವ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡ ಈ ವಿಷಯ ತಿಳಿಸಿ, ಅಂದಿನ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ವಿಧಾನಪರಿಷತ್ ಮಾಜಿ ಸಭಾಪತಿ ಬಿ.ಎಲ್.ಶಂಕರ್, ಮಾಜಿ ಸಚಿವ ಎಂ.ಶಿವಣ್ಣ ನಿವೃತ್ತ ಪ್ರಾಧ್ಯಾಪಕ ಡಾ.ಹೆಚ್.ಎಂ. ರಾಜಶೇಖರ್ ಹಾಗೂ ಮುಖ್ಯಮಂತ್ರಿಗಳ ಮಾಜಿ ಮಾಧ್ಯಮ ಕಾರ್ಯದರ್ಶಿ ಹೆಚ್.ಬಿ.ದಿನೇಶ್ ಭಾವಹಿಸಲಿದ್ದಾರೆ. ವಾಗ್ಮಿ ಪ್ರೊ.ಕೃಷ್ಣೇಗೌಡ ಕಾರ್ಯಕ್ರಮ ನಿರ್ವಹಿಸಲಿದ್ದಾರೆ ಎಂದರು.

ಮೈಸೂರಿಗೂ ಎಸ್.ಎಂ. ಕೃಷ್ಣ ಅವರಿಗೂ ಅವಿನಾಭಾವ ಸಂಬಂಧವಿದ್ದು, ಅವರ ಆರಂಭದ ಶಿಕ್ಷಣ ಇಲ್ಲಿಯೇ ನಡೆಯಿತು. ರಾಜಕೀಯದಲ್ಲಿ ವಿವಿಧ ಸ್ಥಾನ ಅಲಂಕರಿಸಿ ನಾಡು, ದೇಶಕ್ಕೆ ಅಪಾರ ಕೊಡುಗೆ ನೀಡಿದವರಾಗಿದ್ದಾರೆ. ರಾಜ್ಯದ ಐಟಿ–ಬಿಟಿ ಕ್ಷೇತ್ರಕ್ಕೆ ಉತ್ತೇಜನ ನೀಡಿದ್ದಾರೆ. ವಿದ್ಯಾರ್ಥಿಗಳು, ಮಹಿಳೆಯರು, ರೈತರಿಗಾಗಿ ಶಿಕ್ಷಣ, ಆರೋಗ್ಯಕ್ಕೆ ಸಂಬಂಧಿಸಿದಂತೆ ಅನೇಕ ಉತ್ತಮ ಕಾರ್ಯಕ್ರಮ ಜಾರಿಗೊಳಿಸಿದರು. ಇವರು ಯಾವುದೇ ಜಾತಿ, ವರ್ಗಕ್ಕೆ ಸೀಮಿತರಾದವರಲ್ಲ. ಹೀಗಾಗಿ ಇವರನ್ನು ಸ್ಮರಿಸಿ ಅಂದು ನುಡಿ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ನೀಲಕಂಠ ತಮ್ಮಣ್ಣೇಗೌಡ, ಕೆ.ಟಿ. ವೀರಪ್ಪ, ಪ್ರೊ.ಟಿ.ಕೆ. ಚಂದ್ರಶೇಖರಗೌಡ ಉಪಸ್ಥಿತರಿದ್ದರು.

ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಮಡ್ಡಿಕೆರೆಗೆ ಸನ್ಮಾನ, ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಜ.9(ಜಿಎ)–ಮೈಸೂರಿನ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅವರನ್ನು ಅಭಿನಂದಿಸಿ, ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಈ ವೇಳೆ ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಮಡ್ಡಿಕೆರೆ ಗೋಪಾಲ್ ಅವರು ಮೂಲತಃ ಮಲೆನಾಡಿನವರಾಗಿದ್ದರೂ ಕರ್ಮಭೂಮಿಯನ್ನು ಮೈಸೂರನ್ನಾಗಿಸಿಕೊಂಡು ಕನ್ನಡದ ಸೇವೆ ಮಾಡುತ್ತಿದ್ದಾರೆ. ವಕೀಲಿಕೆ, ಸಹಕಾರಿ ಕ್ಷೇತ್ರ, ಸಾಹಿತ್ಯ ಕ್ಷೇತ್ರಗಳಲ್ಲಿ ಕೃಷಿ ಮಾಡುತ್ತಿದ್ದಾರೆ. ಸದಾ ಹಸನ್ಮುಖಿಯಾಗಿರುವ ಇವರಲ್ಲಿ ಸೇವೆಯ ತುಡಿತ ಹೆಚ್ಚಾಗಿದೆ. ಈಗ ಸಾಹಿತ್ಯ ಪರಿಷತ್ ದ್ವಾರದ ಮೂಲಕ ಹೆಚ್ಚಿನ ರೀತಿಯಲ್ಲಿ ಪಸರಿಸಿಕೊಂಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಜ್ಯೋತಿಷಿ ವಿಷ್ಣು ಸಾಲಿಗ್ರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಚಿತ್ರನಟ ಸುಪ್ರೀತ್ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು. ಪತ್ರಕರ್ತ ರಾಜು ಕಾರ್ಯ, ತನುಜ ಮಹೇಶ್, ಅಂಬಳೆ ಶಿವಣ್ಣ ಪ್ರತಿಷ್ಠಾನದ ಸಂಸ್ಥಾಪಕರಾದ ಬಸವ ರಾಜೇಂದ್ರ ಸ್ವಾಮಿ ಉಪಸ್ಥಿತರಿದ್ದರು.

ಕೇಂದ್ರ ಸಚಿವ ಅಮಿತ್ ಶಾ ವಿರುದ್ಧ ಕ್ರಮ ಜರುಗಿಸದಿದ್ದರೆ ಜಾಗತಿಕ ಮಟ್ಟದಲ್ಲಿ ಹೋರಾಟ

ಮಾಜಿ ಮೇಯರ್ ಪುರುಷೋತ್ತಮ್ ಎಚ್ಚರಿಕೆ



ಪುರುಷೋತ್ತಮ್

ಮೈಸೂರು, ಜ.9(ಜಿಎ)–ಸದನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಲಘುವಾಗಿ ಮಾತನಾಡಿದ ಗೃಹ ಸಚಿವ ಅಮಿತ್ ಶಾ ವಿರುದ್ಧ ರಾಜ್ಯವೂ ಸೇರಿದಂತೆ ರಾಷ್ಟ್ರಾದ್ಯಂತ ಪ್ರತಿಭಟನೆಗಳು ನಡೆದಿವೆ. ಹೀಗಿದ್ದರೂ ಪ್ರಧಾನಿ ಮೋದಿ, ಅಮಿತ್ ಶಾ ಅವರನ್ನು ಸಂಪುಟದಲ್ಲಿಯೇ ಉಳಿಸಿಕೊಂಡಿದ್ದು, ಕ್ರಮ ಕೈಗೊಳ್ಳದಿದ್ದರೆ ಭಾರತದಲ್ಲಿನ ಅಸ್ಪೃಶ್ಯರ ಪರಿಸ್ಥಿತಿ ಬಗ್ಗೆ ಜಾಗತಿಕ ಮಟ್ಟದಲ್ಲಿ ಹೋರಾಟ ನಡೆಸುವ ಮೂಲಕ ಗಮನ ಸೆಳೆಯಲಾಗುವುದು ಎಂದು ಮಾಜಿ ಮೇಯರ್ ಪುರುಷೋತ್ತಮ್ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೃಹ ಸಚಿವ ಅಮಿತ್ ಶಾ ವಿರುದ್ಧ ಇಷ್ಟೆಲ್ಲ ಪ್ರತಿಭಟನೆ ನಡೆಸಿದರೂ ಅವರು ಕ್ಷಮೆ ಯಾಚಿಸಿಲ್ಲ. ಸಂಪುಟದಲ್ಲಿಯೇ ಉಳಿದಿದ್ದಾರೆ. ಹೀಗಾಗಿ ಚಳಿಗಾಲದ ಅಧಿವೇಶನ ಮುಗಿದ ಬಳಿಕ ದೆಹಲಿ ಚಲೋ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದರು.


ಸಚಿವ ಡಾ.ಜಿ.ಪರಮೇಶ್ವರ್ ಅವರು ಎಸ್‌ಸಿ, ಎಸ್‌ಟಿ ಸಮುದಾಯದ ದುಃಖ ದುಮ್ಮಾನ, ಸಮಸ್ಯೆ ಕುರಿತು ಚರ್ಚಿಸಲು ಕರೆದಿದ್ದ ಔತಣಕೂಟಕ್ಕೆ ಕಾಂಗ್ರೆಸ್ ಹೈಕಮಾಂಡ್ ತಡೆಯೊಡ್ಡಿರುವುದು ಸರಿಯಲ್ಲ. ಪರಮೇಶ್ವರ್ ಸಹ ಅದನ್ನು ರದ್ದುಪಡಿಸುವ ಮೂಲಕ ಅಸಹಾಯಕತೆ ಪ್ರದರ್ಶಿಸಬಾರದಾಗಿತ್ತು. ನಾವೆಲ್ಲ ಸದಾ ಕಾಂಗ್ರೆಸ್ ಪರವಾಗಿಯೇ ಇದ್ದೇವೆ. ಹೀಗಿದ್ದರೂ ಇಲ್ಲಿ ಈ ರೀತಿ ನಡೆದಿರುವುದು ಬೇಸರದ ಸಂಗತಿಯಾಗಿದೆ ಎಂದರು. ಎಲ್ಲೆಡೆ ಅಸ್ಪೃಶ್ಯತೆ ಆಚರಣೆ ಮುಂದುವರಿದಿದೆ. ಕ್ಷುಲ್ಲಕ ಕಾರಣಕ್ಕೂ ದಲಿತರ ಮೇಲೆ ಹಲ್ಲೆ ಮಾಡ ಲಾಗುತ್ತಿದೆ. ಹೀಗಾಗಿ ಇದೇ ಪರಿಸ್ಥಿತಿ ಮುಂದುವರಿದರೆ ನಾವೆಲ್ಲ ಪ್ರತ್ಯೇಕತೆಗಾಗಿ ಹೋರಾಟ ಮಾಡಬೇಕಾಗುತ್ತದೆ. ನಮ್ಮ ಆತ್ಮರಕ್ಷಣೆಗಾಗಿ ಜೈಭೀಮ್ ಆರ್ಮಿ ಎಂಬ ಸಂಘಟನೆ ಆರಂಭಿಸಿ, ಆತ್ಮರಕ್ಷಣಾ ಕಲೆ ಕಲಿಸುವ ಚಿಂತನೆ ನಡೆದಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡರಾದ ಹರಿಹರ ಆನಂದಸ್ವಾಮಿ, ಟಿ.ಎಂ. ಮಹೇಶ್, ಸಿದ್ದಸ್ವಾಮಿ ಉಪಸ್ಥಿತರಿದ್ದರು.

ಮೈಸೂರು–ಚಾಮರಾಜನಗರ ಜಿಲ್ಲಾ ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘಕ್ಕೆ ನಿರ್ದೇಶಕರ ಅವಿರೋಧ ಆಯ್ಕೆ

ಮೈಸೂರು: ಮೈಸೂರು–ಚಾಮರಾಜನಗರ ಜಿಲ್ಲಾ ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘದ 2025–2030ನೇ ಸಾಲಿಗೆ ಸಂಘದ ಜಿಲ್ಲಾಧ್ಯಕ್ಷ ಡಾ.ಅರುಣಕುಮಾರ್ ನೇತೃತ್ವದಲ್ಲಿ ಡಾ.ಅರುಣಕುಮಾರ, ಡಿ.ಆನಂದ, ಗೋವಿಂದರಾಜು, ರಘು, ಕೃಷ್ಣಸ್ವಾಮಿ, ಹರೀಶ್, ಮಂಜುನಾಥ್, ಮಂಜೇಗೌಡ, ರಮೇಶ್‌ಕುಮಾರ್, ಮೀನಾಕ್ಷಿ, ಕೋಮಲ, ಬಲರಾಮ, ಗಣೇಶ, ರಮೇಶ್‌ಕುಮಾರ್, ಲೋಕೇಶ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿಧನ

ಸಿ.ಎನ್.ಮಾದೇವ ನಾಯಕ



ನಂಜನಗೂಡು, ಜ.9–ನಂಜನಗೂಡು ತಾಲೂಕು ಚಿಕ್ಕಯ್ಯನ ಛತ್ರದ ನಿವಾಸಿ ನಿವೃತ್ತ ಸಬ್‌ಇನ್ಸ್‌ಪೆಕ್ಟರ್ ಸಿ.ಎನ್.ಮಾದೇವ ನಾಯಕ (70) ಗುರುವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು ಮಧ್ಯಾಹ್ನ 3 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಶಾಂತಮ್ಮ



ಮೈಸೂರು ಎನ್.ಆರ್.ಮೊಹಲ್ಲಾ ನಿವಾಸಿ ಶ್ರೀಮತಿ ಶಾಂತಮ್ಮ (90) ಅವರು ಗುರುವಾರ ನಿಧನರಾದರು. ಮೃತರು ಲೇಟ್ ಮಾದಪ್ಪ ಅವರ ಪತ್ನಿ. ಇವರು ಮಕ್ಕಳು, ಮೊಮ್ಮಕ್ಕಳು, ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಮಧ್ಯಾಹ್ನ ಎಲ್‌ಐಸಿ ಸರ್ಕಲ್ ಬಳಿಯ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನಲ್ಲಿ ಸಿರಿಧಾನ್ಯ ಉತ್ಪಾದಕರು, ಮಾರಾಟಗಾರರ ಕಾರ್ಯಾಗಾರ

ಆರೋಗ್ಯಕ್ಕೆ ಸಮೃದ್ಧ ಸಿರಿಧಾನ್ಯ ಬಳಸಿ, ರೋಗಗಳಿಂದ ಮುಕ್ತರಾಗಿ





ಮೈಸೂರು ವಸ್ತುಪ್ರದರ್ಶನದಲ್ಲಿ ನಡೆದ ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬ ಹಾಗೂ ಸಿರಿಧಾನ್ಯ ಉತ್ಪಾದಕರ, ಮಾರಾಟಗಾರರ ಕಾರ್ಯಾಗಾರವನ್ನು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಉದ್ಘಾಟಿಸಿದರು. (ಎಡಚಿತ್ರ) ಕಾರ್ಯಕ್ರಮಕ್ಕೂ ಮುನ್ನ ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಜಾಥಾಗೆ ಡಿಸಿ ಲಕ್ಷ್ಮಿಕಾಂತ ರೆಡ್ಡಿ ಚಾಲನೆ ನೀಡಿದರು.

- ಸಿರಿಧಾನ್ಯ ಸೇವನೆ ಈಗ ಪ್ರತಿಷ್ಠೆಯಾಗಿದೆ
- ರೈತರನ್ನು ಮರೆಯದಿರಿ, ದೂರ ತಳ್ಳದಿರಿ
- ಅನ್ನ ಕೊಡುವ ರೈತನ ಬಗ್ಗೆ ಅಭಿಮಾನವಿರಲಿ
- ಕೃಷಿಯನ್ನು ಉದ್ಯಮವಾಗಿ ಪರಿಗಣಿಸಬೇಕು

ಮೈಸೂರು, ಜ.9(ಬಿಎಲ್‌ಯು)– ಮೈಸೂರಿನಲ್ಲಿ ಇಂದು ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬ ಹಾಗೂ ಸಿರಿಧಾನ್ಯ ಉತ್ಪಾದಕರ, ಮಾರಾಟಗಾರರ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ನಗರದ ದಸರಾ ವಸ್ತುಪ್ರದರ್ಶನದ ಕಾಳಿಂಗರಾವ್ ಸಭಾಂಗಣದಲ್ಲಿ ನಡೆದ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಪುಷ್ಪ ಅಮರನಾಥ್, ಸಿರಿಯನ್ನು ಶ್ರೀಮಂತಿಕೆ, ಸಮೃದ್ಧಿ ಎಂಬ ಅರ್ಥದಿಂದ ಕರೆಯಲಾಗುತ್ತದೆ. ಇಂತಹ ಸಿರಿತನ ಧಾನ್ಯದ ಆಹಾರ ಸೇವಿಸಿದರೆ ಪೌಷ್ಟಿಕಾಂಶ ಹೆಚ್ಚಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಜಾಗತಿಕ ಬೆಳವಣಿಗೆಯಿಂದ ಕಾಲ ಕ್ರಮೇಣ ಆಹಾರ ಪದ್ಧತಿಯಲ್ಲಿ ಕೂಡ ಬದಲಾವಣೆಗಳಾಯಿತು. ಭಾರತೀಯರು ವಿದೇಶಿ ಆಹಾರ ಪದ್ಧತಿಗೆ ಮಾರು ಹೋದರು. ಈ ವೇಳೆ ಜನರು ಸಿರಿಧಾನ್ಯ ಸೇವಿಸುವುದನ್ನು ಕಡಿಮೆ ಮಾಡಿದರು. ಆದರೆ ಈಗ ಸಿರಿಧಾನ್ಯದ ಮಹತ್ವ ವೇನು ಎಂಬುದು ಎಲ್ಲರಿಗೂ ಮನದಟ್ಟಾಗಿದೆ ಎಂದು ಹೇಳಿದರು.

ಉತ್ತಮ ಬೆಲೆ ಬಂದಾಗ ಧಾನ್ಯ ಮಾರಾಟ ಮಾಡಲು ಹಿಂದೆ ಸಂಸ್ಕರಣಾ ವ್ಯವಸ್ಥೆ ಇರಲಿಲ್ಲ. ಆದರೆ ಇಂದು ಧಾನ್ಯ ಸೇರಿದಂತೆ ಹಲವು ಆಹಾರಗಳನ್ನು ಸಂಸ್ಕರಣೆ ಮಾಡುವ ವ್ಯವಸ್ಥೆ ಇದೆ. ಇದರಿಂದ ಲಾಭದಾಯಕ ಬೆಲೆ ಬಂದಾಗ ಧಾನ್ಯ ಮಾರಾಟ ಮಾಡಲು ರೈತರಿಗೆ ಅವಕಾಶ ವಿದೆ. ಈ ಹಿನ್ನೆಲೆಯಲ್ಲಿ ಸಿರಿಧಾನ್ಯ ಬೆಳೆಯಲು ರೈತರು ಉತ್ಸುಕರಾಗುತ್ತಿದ್ದಾರೆ ಎಂದು ಪುಷ್ಪ ಅಮರನಾಥ್ ಹೇಳಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ದೇಶದ ಬೆಳವಣಿಗೆಯಲ್ಲಿ ರೈತ, ಸೈನಿಕ ಹಾಗೂ ಶಿಕ್ಷಕನ ಪಾತ್ರ ಮುಖ್ಯವಾಗಿದೆ. ಈ ಹಿನ್ನೆಲೆ ಸಮಾಜ ಇವರನ್ನು ಗೌರವ ಭಾವನೆಯಿಂದ ನೋಡಬೇಕು ಎಂದು ಸಲಹೆ ನೀಡಿದರು.

ಇಂದಿನ ತಂತ್ರಜ್ಞಾನದಲ್ಲಿ ಏನು ಬೇಕಾದರೂ ನಕಲಿ ಮಾಡಬಹುದು. ಆದರೆ ಆಹಾರ ಮತ್ತು ರಕ್ತ ನಕಲಿ ಮಾಡಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಅನ್ನ ಕೊಡುವ ರೈತನಿಗೆ ಪ್ರಾಧಾನ್ಯತೆ ನೀಡಬೇಕು. ಬೆವರು ಸುರಿಸಿ ನಮಗೆ ಧಾನ್ಯ ನೀಡುವ ರೈತರನ್ನು ಗೌರವ ಭಾವನೆಯಿಂದ ನೋಡಬೇಕು ಎಂದು ಹೇಳಿದರು.

ಕೃಷಿಯನ್ನು ಸರ್ಕಾರ ಉದ್ಯಮ ವಲಯಕ್ಕೆ ಸೇರಿಸಬೇಕು. ಇದರಿಂದ ತಾವು ಕಷ್ಟಪಟ್ಟು ಬೆಳೆದ ಬೆಳೆಗೆ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ. ರೈತರಿಗೆ ಸಬ್ಸಿಡಿಯಲ್ಲಿ ಸಾಲ ಸೌಲಭ್ಯ ದೊರೆಯುತ್ತದೆ. ಇದರಿಂದ ರೈತರು ಹೆಚ್ಚಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗಲಿದ್ದು, ಹಸಿರು ಕ್ರಾಂತಿಯಾಗಿ ದೇಶ ಬೆಳವಣಿಗೆ ಕಾಣುತ್ತದೆ ಎಂದು ಮಂಜೇಗೌಡ ಅಭಿಪ್ರಾಯಪಟ್ಟರು.


ಕಾರ್ಯಕ್ರಮಕ್ಕೂ ಮುನ್ನ ಮೈಸೂರು ಅರಮನೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಸಿರಿಧಾನ್ಯದ ಬಗ್ಗೆ ಜಾಗೃತಿ ಮೂಡಿಸುವ ಜಾಥಾ ಆರಂಭವಾಯಿತು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಚಾಲನೆ ನೀಡಿದ ಜಾಥಾ ನಗರದ ಆಲ್ಬರ್ಟ್ ವಿಕ್ಟರ್ ರಸ್ತೆ, ಹಾರ್ಡಿಂಗ್ ವೃತ್ತ, ನಂಜನಗೂಡು ರಸ್ತೆ ಮೂಲಕ ಕಾರ್ಯಕ್ರಮ ನಡೆಯಲಿದ್ದ ದಸರಾ ವಸ್ತುಪ್ರದರ್ಶನಕ್ಕೆ ಆಗಮಿಸಿತು. ಈ ಸಂದರ್ಭದಲ್ಲಿ ಜಂಟಿ ಕೃಷಿ ನಿರ್ದೇಶಕ ರವಿ, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಕಲ್ಮಡಿ ಶಿವಕುಮಾರ್, ಮೈಸೂರು–ಚಾಮರಾಜನಗರ ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷ ಶಿವಪ್ರಕಾಶ್, ಶಿವಮಲ್ಲಪ್ಪ, ಲಿಂಗರಾಜು, ಅಣ್ಣೇಗೌಡ, ವೆಂಕಟೇಶ್ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಡವರ ಆಹಾರವಾಗಿದ್ದ ಸಿರಿಧಾನ್ಯ ಈಗ ಶ್ರೀಮಂತರಿಗೆ ಅನಿವಾರ್ಯ

ಒಂದು ಕಾಲದಲ್ಲಿ ಬಡವರ ಆಹಾರವೆಂದು ಕಡೆಗಣಿಸುತ್ತಿದ್ದ ಸಿರಿಧಾನ್ಯ ಇಂದು ಶ್ರೀಮಂತರಿಗೆ ಅನಿವಾರ್ಯ ಆಹಾರವಾಗಿದೆ. ಮಧುಮೇಹ ಸೇರಿದಂತೆ ಇತರೆ ರೋಗಗಳಿಗೆ ಸಿರಿಧಾನ್ಯ ರಾಮಬಾಣವಾಗಿದೆ. ಇದರಿಂದ ಪ್ರತಿಯೊಬ್ಬರು ಈಗ ಸಿರಿಧಾನ್ಯ ಆಹಾರದ ಮೇಲೆ ಅವಲಂಬಿತರಾಗಿದ್ದಾರೆ. ಸಣ್ಣ ಅಳತೆಯ ಏಕದಳ ಧಾನ್ಯವನ್ನು ಕಿರು ಧಾನ್ಯಗಳು ಎನ್ನಲಾಗುತ್ತದೆ. ಈ ಗುಂಪಿಗೆ ಪ್ರಮುಖವಾಗಿ ರಾಗಿ, ಸಜ್ಜೆ, ನವಣೆ, ಸಾಮೆ, ಬರಗು, ಹಾರಕ, ಊದಲು ಹಾಗೂ ಕೊರ್ಲೆ ಸೇರುತ್ತದೆ. ಕಿರು ಧಾನ್ಯದಲ್ಲಿ ಹೆಚ್ಚಿನ ಪೋಷ್ಟಿಕಾಂಶವಿರುತ್ತದೆ. ಶರ್ಕರ ಪಿಷ್ಟದ ಜೊತೆಗೆ ಕಬ್ಬಿಣ, ಕ್ಯಾಲ್ಸಿಯಂ, ಪೊಟ್ಯಾಶಿಯಂ, ಮ್ಯಾಗ್ನೇಶಿಯಂ, ಸತು, ರಂಜಕ, ಸಸಾರಜನಕ, ನಾರಿನಾಂಶ ಇರುತ್ತದೆ. ಜೊತೆಗೆ ಹೊರ ಪದರಿನಲ್ಲಿಯೂ ಜೀವಸತ್ವವಿರುತ್ತದೆ. ಸಜ್ಜೆ, ಸಾಮೆನಂತಹ ಧಾನ್ಯಗಳಲ್ಲಿ ಕೊಬ್ಬಿನಾಂಶ ಹೆಚ್ಚಾಗಿರುತ್ತದೆ. ಈ ಹಿನ್ನೆಲೆ ಇವುಗಳನ್ನು ಸಿರಿಧಾನ್ಯವೆಂದು ಕರೆಯಲಾಗುತ್ತದೆ.

ಸಿರಿಧಾನ್ಯ ಬೆಳೆಗಳು ಅಲ್ಪಾವಧಿ ಬೆಳೆಯಾಗಿದ್ದು, ಅತೀ ಕಡಿಮೆ ನೀರಿನ ಅಗತ್ಯವಿದೆ. ಮಳೆಯಾಶ್ರಯದಲ್ಲಿ ಕಡಿಮೆ ಖರ್ಚು ಹಾಗೂ ಕಡಿಮೆ ಶ್ರಮದಲ್ಲಿ ಬೆಳೆಯಬಹುದು. ರೋಗ ನಿರೋಧಕ ಶಕ್ತಿ ಹೊಂದಿರುವ ಸಿರಿಧಾನ್ಯ ಇಂದು ಪ್ರತಿಯೊಬ್ಬರಿಗೂ ಅತ್ಯವಶ್ಯವಾಗಿದೆ. ಸಿರಿಧಾನ್ಯವನ್ನು ಕೆಲವು ವರ್ಷಗಳ ಹಿಂದೆ ಬಡ ಜನರು ಮಾತ್ರವೇ ಬಳಕೆ ಮಾಡುವ ಆಹಾರ ಎನ್ನಲಾಗುತ್ತಿತ್ತು. ಆದರೆ ಇತ್ತೀಚೆಗೆ ಪೌಷ್ಟಿಕಾಂಶವಿರುವ ಆಹಾರ ದೊರೆಯದ ಕಾರಣ ಜನರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ರೋಗ ನಿರೋಧಕ ಅಂಶವಿರುವ ಸಿರಿಧಾನ್ಯವನ್ನು ಅವಲಂಬಿಸಿದ್ದಾರೆ. ಮಧುಮೇಹ ಸೇರಿದಂತೆ ಇತರೆ ರೋಗಗಳಿಗೆ ಮಿತಿ ಮೀರಿದ ಔಷಧ ತೆಗೆದುಕೊಳ್ಳುವ ಬದಲು. ದಿನಕ್ಕೆ ಇಂತಿಷ್ಟು ಸಿರಿಧಾನ್ಯದ ಆಹಾರ ಸೇವಿಸಿದರೆ ಪ್ರತಿಯೊಂದು ರೋಗವೂ ದೂರವಾಗುತ್ತದೆ. ಇದನ್ನು ಅರಿತಿರುವ ಬಹಳಷ್ಟು ಜನರು ರಾಗಿ ಮುದ್ದೆ, ಜೋಳದ ಮುದ್ದೆ ಸೇರಿದಂತೆ ಇತರೆ ಆಹಾರ ಸೇವಿಸುತ್ತಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.01.2025 ಶುಕ್ರವಾರ, ಮಳೆ ನಕ್ಷತ್ರ: ಪೂಷಾ, 29.12.2024 ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನ** : ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ದರ್ಶನ, ಸ್ಥಳ: ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಬೆಳಗ್ಗೆ 6 ರಿಂದ, ಮಧ್ಯಾಹ್ನ 3 ರಿಂದ 9 ರವರೆಗೆ.

■ **ಶ್ರೀರಾಮ ಮಂದಿರ** : ವೈಕುಂಠ ಏಕಾದಶಿ, ಸಹಸ್ರನಾಮ ಸಾಮೂಹಿಕ ಪಾರಾಯಣ, ಸ್ಥಳ: ಶ್ರೀರಾಮಮಂದಿರ, ಜಯನಗರ, ಬೆಳಗ್ಗೆ 5 ರಿಂದ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ** : ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಕಾವೇರಿ ಆಯುರ್ವೇದ ಆಸ್ಪತ್ರೆ** : ನೆಗಡಿ, ಕೆಮ್ಮು ಮತ್ತು ಅಸ್ತಮಾಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಮೂತ್ರಪಿಂಡ (ಕಿಡ್ನಿ) ಕಾಯಿಲೆ, ಸಂಧಿವಾತ, ಮಂಡಿ ನೋವು, ಕೀಲು ನೋವು ಮತ್ತು ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ** : ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ** : ವಾರ್ಷಿಕೋತ್ಸವ, ದೀಪಾ ಕಲಾ ಸಂಭ್ರಮ, ಉದ್ಘಾಟನೆ : ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಚಲನಚಿತ್ರ ನಟಿ ಶ್ರೀಮತಿ ಪೂಜಾಗಾಂಧಿ, ಉಪಸ್ಥಿತರು : ಕೈಗಾರಿಕೋದ್ಯಮಿ ವಿಜಯ್, ಮುರಳಿ ಕೃಷ್, ಅಧ್ಯಕ್ಷತೆ: ಸಂಸ್ಥೆ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ:ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಶ್ರೀ ಯದುಗಿರಿ ಯತಿರಾಜ ಮಠ, ಶಾಖಾ ಮಠ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ** : ವೈಕುಂಠ ಏಕಾದಶಿ, ಬೆಳಗ್ಗೆ 7 ಗಂಟೆಗೆ ವೈಕುಂಠ ದ್ವಾರ ತೆರೆಯಲಾಗುವುದು, ರಾತ್ರಿ 10 ಗಂಟೆವರೆಗೂ ಭಗವಂತನ ದರ್ಶನ, ವಿಷ್ಣು ಸಹಸ್ರನಾಮ, ಸಾಮೂಹಿಕ ಪಾರಾಯಣ, ಮಹಾಮಂಗಳಾರತಿ, ತೀರ್ಥ ಪ್ರಸಾದ, ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಕಾಳಿದಾಸ ರಸ್ತೆ.

■ **ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ** : ವೈಕುಂಠ ಏಕಾದಶಿ ಪ್ರಯುಕ್ತ ಬೆಳಗ್ಗೆ 6ರಿಂದ ರಾತ್ರಿ 11 ಗಂಟೆವರೆಗೆ ವಿಶೇಷ ಕಾರ್ಯಕ್ರಮ, ದೇವರಿಗೆ ವಿಶೇಷ ಹೂವಿನ ಅಲಂಕಾರ, ಸಂಕಲ್ಪ ಅರ್ಚನೆ, ಕೊಠಾರೋತ್ಸವ, ಅಷ್ಟಾವಧಾನ, ನೈವೇದ್ಯ, ಮಹಾಮಂಗಳಾರತಿ, ಸ್ಥಳ: ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ಹಳೇ ಬಂಡಿಕೇರಿ.

■ **ಮೈಸೂರು ಮಕ್ಕಳ ಕೂಟ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಬಾಲಕಿಯರ ಪದವಿಪೂರ್ವ ಕಾಲೇಜು** : ಕಾಲೇಜು ವಾರ್ಷಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ವಿಶೇಷ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ಗೌರವ ಅತಿಥಿಗಳು : ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ಪ್ರಾಂಶುಪಾಲರಾದ ಪ್ರೊ. ಎನ್. ಭಾರತಿ, ಅಧ್ಯಕ್ಷತೆ : ಎಂಎಂಕೆ ಮತ್ತು ಎಸ್‌ಡಿಎಂ ಬಾಲಕಿಯವ ಪದವಿಪೂರ್ವ ಕಾಲೇಜು ಪ್ರಾಂಶುಪಾಲರಾದ ಶ್ರೀಮತಿ ನಯನಕುಮಾರಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ನವದೆಹಲಿಯ ಕೇಂದ್ರ ಜವಳಿ ಮಂತ್ರಾಲಯದ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ** : 'ಸಿಲ್ಕ್ ಫ್ಯಾಬ್' ರೇಷ್ಮೆ ಸೀರೆಗಳು ಮತ್ತು ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮೇಳ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 11 ರಿಂದ ರಾತ್ರಿ 8.30 ರವರೆಗೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ** : ಹದಿನೈದನೆಯ ಘಟಿಕೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಾ. ಧನಂಜಯ ವೈ ಚಂದ್ರಚೂಡ್, ಉಪಸ್ಥಿತರು : ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸಮಕುಲಾಧಿಪತಿ ಡಾ. ಬಿ. ಸುರೇಶ್, ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಕುಲಸಚಿವ ಡಾ. ಬಿ. ಮಂಜುನಾಥ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ. ಆರ್. ಸುಧೀಂದ್ರ ಭಟ್, ಸ್ಥಳ: ಅಕಾಡೆಮಿ ಆವರಣ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು– ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ಆರ್. ಸುಧಾ, ಎಂ.ಎಸ್. ಲಕ್ಷ್ಮೀಶ, ಡಾ. ಪ್ರದೀಪ್‌ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 KABHI–ಕರ್ನಾಟಕ–ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ 'ಚಳಿಗಾಲದಲ್ಲಿ ಮಕ್ಕಳ ಆರೈಕೆ' ಕುರಿತು ಡಾ. ಮಲ್ಲಿಕಾ. ಬಿ ಅವರೊಂದಿಗೆ ಮಾತುಕತೆ ಮತ್ತು 'ಚಳಿಗಾಲ ಮತ್ತು ಚರ್ಮದ ಆರೈಕೆ' ಕುರಿತು ಡಾ. ಜಯದೇವ. ಬಿ. ಬೆಟ್‌ಕೆರೂರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.40 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮಲ್ಲಾಡಿ ಸೂರಿಬಾಬು – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸಂಗೀತ ಸಂಭ್ರಮ ನಾದಲಯ ಸಂಗಮ', ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ.ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್. ಎಸ್., 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಅಟಲ್ ಭೂಜಲ್ ಯೋಜನೆ ಕುರಿತು ಎನ್. ವಿ. ಫಣೀಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಜಾಂಪಣ್ಣ ಆಶೀಹಾಳ್, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ನಿಲಯದ ಕಲಾವಿದರಿಂದ ವಾದ್ಯವೃಂದ 4.00 ಮಹಿಳಾರಂಗ–ಜೀವನ್ಮುಖಿ–ನಮ್ಮ ಲೇಖನಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದು ಹೇಗೆ? ಭಾಗವಹಿಸುತ್ತಾರೆ –ಹವ್ಯಾಸಿ ಪತ್ರಕರ್ತೆ ಶೀಲಾಭಟ್, ಪ್ರಸ್ತುತಿ : ಕೀರ್ತನ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ : ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ಪ್ರಾಯೋಜಕರು : ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, 7.20 ಕೃಷಿ ಹಾಡುಗಳು, 7.45 ಕನ್ನಡದಲ್ಲಿ ಭಾಷಣ, 8.00 ಕನ್ನಡ ಭಾರತಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಾ. ಎಸ್. ವಿ. ಸಹನ–ವೀಣಾ ವಾದನ, 10.00 ತತ್ವ ಸಂಚಾರ : ಜನಪದ ಗಾಯಕರ ತತ್ವಾಯನ, ಪ್ರಸ್ತುತಿ : ಡಾ. ಮೈಸೂರು ಉಮೇಶ್, 10.30 ಸವಿನೆನಪು

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು** : ಅಂತರ ಕಾಲೇಜು ರಸಪ್ರಶ್ನೆ ಸ್ಪರ್ಧೆ, ಬಹುಮಾನ ವಿತರಣಾ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಮಾಜಿ ಸಿಂಡಿಕೇಟ್ ಸದಸ್ಯ ಈ.ಸಿ. ನಿಂಗರಾಜ್ ಗೌಡ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಮಧ್ಯಾಹ್ನ 12ಕ್ಕೆ

■ **ಬೇಡನ್ ಪೊವೆಲ್ ಪಬ್ಲಿಕ್ ಸ್ಕೂಲ್** : ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಡಿಡಿಪಿಐ ಜವರೇಗೌಡ, ಅಧ್ಯಕ್ಷತೆ : ಶಾಲೆ ಅಧ್ಯಕ್ಷ ಪಿ. ವಿಶ್ವನಾಥ್, ಸ್ಥಳ: ಕಲಾಮಂದಿರ, ಸಂಜೆ 4ಕ್ಕೆ.

■ **ಭಾನವಿ ಚಾರಿಟಬಲ್ ಟ್ರಸ್ಟ್** : ಭಾನವಿ ಪ್ಯಾಲೇಸ್ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಸಚಿವ ಕೆ. ವೆಂಕಟೇಶ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರಾದ ಜಿ.ಟಿ. ದೇವೇಗೌಡ, ಕೆ. ಹರೀಶ್‌ಗೌಡ, ಡಾ. ಯತೀಂದ್ರ ಸಿದ್ದರಾಮಯ್ಯ, ಸ್ಥಳ: ನಂ. 14, ಲಲಿತಾದ್ರಿನಗರ, ಸಂಜೆ 5ಕ್ಕೆ.

■ **ಶ್ರೀಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್, ಶ್ರೀವಾಣಿ ವಿಲಾಸ ಅರಸು ಬಾಲಿಕಾ ಪದವಿಪೂರ್ವ ಕಾಲೇಜು** : ಕಾಲೇಜು ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಸಾಹಿತಿ ಡಾ. ಸಂತೋಷ್ ಚೊಕ್ಕಾಡಿ, ಅಧ್ಯಕ್ಷತೆ : ಟ್ರಸ್ಟ್ ಕಾರ್ಯದರ್ಶಿ ಮಹೇಶ್ ಎನ್. ಅರಸ್, ಉಪಸ್ಥಿತರು: ಶ್ರೀವಾಣಿ ವಿಲಾಸ ಅರಸು ಶಿಕ್ಷಣ ಸಂಸ್ಥೆ ಅಧ್ಯಕ್ಷ ಸಿದ್ದಪ್ಪ, ಸ್ಥಳ: ಕಾಲೇಜು ಆವರಣ, ಸಂಜೆ 5ಕ್ಕೆ.

■ **ಸ್ವರಾಮೃತ ಮೆಲೋಡಿಸ್ ಮೈಸೂರು:** ಪದ್ಮವಿಭೂಷಣ ಕೆ.ಜೆ.ಯೇಸುದಾಸ್ ಅವರ 85ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳೊಂದಿಗೆ ಅವರು ಹಾಡಿರುವ ಆಯ್ದ ಜನಪ್ರಿಯ ಕನ್ನಡ, ಹಿಂದಿ, ತೆಲುಗು ಹಾಗೂ ತಮಿಳು ಚಿತ್ರಗೀತೆಗಳ ಗಾಯನ ಸಂಜೆ, ಮಲಯ ಮಾರುತ ಗಾನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ನಂಜುಮಳಿಗೆ, ಲಕ್ಷ್ಮೀಪುರಂ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಗಾನಭಾರತೀ** : ವಿದುಷಿ ಮೇಧಾ ಮಂಜುನಾಥ್ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್–ಪಿಟೀಲು, ವಿದ್ವಾನ್ ಎ. ರಾಧೇಶ್–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ವೀಣೆ ಶೇಷಣ್ಣ, ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ** : ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್.ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15 ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ** : ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ.ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

■ **ಇಸ್ಕಾನ್ ಮೈಸೂರು** : ವೈಕುಂಠ ಏಕಾದಶಿ, ಸ್ಥಳ: ಇಸ್ಕಾನ್ ದೇವಾಲಯ, ಜಯನಗರ, ಬೆಳಗ್ಗೆ 7.30 ರಿಂದ.



ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 10 ಶುಕ್ರವಾರ 2025

ಸಂಪುಟ: 45 | ಸಂಚಿಕೆ: 264 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಒಬ್ಬನೇ ಒಬ್ಬ ಅರ್ಹ ಫಲಾನುಭವಿಯ
ಬಿಪಿಎಲ್ ಕಾರ್ಡ್ ರದ್ದಾಗಬಾರದು

ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಖಡಕ್ ಸೂಚನೆ





ಬೆಂಗಳೂರು, ಜ.9- ಕೇಂದ್ರ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳನ್ನು ಪೂರೈಸದ, ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಅನರ್ಹರನ್ನು ಗುರುತಿಸಿ ಹಂತ ಹಂತವಾಗಿ ತೆಗೆದು ಹಾಕಬೇಕು. ಆದರೆ ಒಬ್ಬನೇ ಒಬ್ಬ ಅರ್ಹ ಬಿಪಿಎಲ್ ಕಾರ್ಡುದಾರನ ಬಿಪಿಎಲ್ ಕಾರ್ಡ್ ರದ್ದು ಮಾಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ಇಂದು ಕೃಷ್ಣಾದಲ್ಲಿ ನಡೆದ ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, ಅನರ್ಹ ಬಿಪಿಎಲ್ ಪಡಿತರ ಚೀಟಿದಾರರು ಸ್ವಯಂ ತಮ್ಮ ಬಿಪಿಎಲ್ ಕಾರ್ಡ್‌ಗಳನ್ನು ಹಿಂತಿರುಗಿಸಲು ಕಾಲಾವಕಾಶ ನೀಡಬೇಕು. ಆ ಬಳಿಕ ಅಂತಹವರಿಗೆ ನೋಟೀಸ್ ನೀಡಿ ಕಾರ್ಡುಗಳನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದರು. ಈಗಾಗಲೇ 4 ಸಾವಿರ ಸರ್ಕಾರಿ ನೌಕರರನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದೆ. ಅನ್ನಭಾಗ್ಯ ಯೋಜನೆಯ ನೇರ ನಗದು ವರ್ಗಾವಣೆಯಡಿ ರೂ.4692 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಅಕ್ಟೋಬರ್ ಅಂತ್ಯದವರೆಗೆ ರೂ. 3253 ಕೋಟಿ ವೆಚ್ಚ ಮಾಡಲಾಗಿದೆ. 4,44,48,294 ಫಲಾನುಭವಿಗಳು ಇದರ ಲಾಭ ಪಡೆಯುತ್ತಿದ್ದಾರೆ. ಪಡಿತರ ಹಾಗೂ ಆಹಾರ ಧಾನ್ಯ ವಿತರಣಾ ವ್ಯವಸ್ಥೆಯನ್ನು ತಳಹಂತದಲ್ಲಿ ಬಲಪಡಿಸುವ ಮೂಲಕ ಜಾಗೃತಿ ಸಮಿತಿಗಳಲ್ಲಿ ಜನರ ಸಹಭಾಗಿತ್ವವನ್ನು ಹೆಚ್ಚಿಸಬೇಕು. ಸಮಿತಿ ನಿಯಮಿತವಾಗಿ ಸಭೆ ನಡೆಸುವುದನ್ನು ಖಾತ್ರಿಪಡಿಸಬೇಕು.

ರಾಜ್ಯದಲ್ಲಿ 1,53,69,945 ಪಡಿತರ ಚೀಟಿಗಳಿದ್ದು, 5,30,88,636 ಸದಸ್ಯ ಫಲಾನುಭವಿಗಳಿದ್ದಾರೆ. ಇಲಾಖೆಯಲ್ಲಿ ಒಟ್ಟು 709 ಹುದ್ದೆಗಳು ಖಾಲಿಯಿವೆ. ಒಂದು ರಾಷ್ಟ್ರ ಒಂದು ಪಡಿತರ ಚೀಟಿ ಯೋಜನೆಯಡಿ ಕರ್ನಾಟಕದಲ್ಲಿ ಬೇರೆ ರಾಜ್ಯಗಳ 13,383 ಫಲಾನುಭವಿಗಳು ಪಡಿತರ ಸೌಲಭ್ಯ ಪಡೆಯುತ್ತಿದ್ದಾರೆ. ಕುಟುಂಬದಲ್ಲಿ ಒಬ್ಬರೇ ಇರುವ 80 ವರ್ಷ ದಾಟಿದವರಿಗೆ ಮನೆ ಬಾಗಿಲಿಗೆ ಆಹಾರ ಧಾನ್ಯ ಒದಗಿಸುವ ಅನ್ನ-ಸುವಿಧಾ ಯೋಜನೆಯನ್ನು ಜಾರಿಗೊಳಿಸಲಾಗಿದೆ. 8,500 ಪಡಿತರ ಚೀಟಿದಾರರು ಯೋಜನೆಯಡಿ ಪ್ರಯೋಜನ ಪಡೆಯುತ್ತಿದ್ದಾರೆ.

ಪೆಟ್ರೋಲ್ ಬಂಕ್ ತಪಾಸಣೆ

ರಾಜ್ಯದಲ್ಲಿ ಒಟ್ಟು 4518 ಪೆಟ್ರೋಲ್ ಬಂಕ್‌ಗಳಿದ್ದು, ಡಿಸೆಂಬರ್ ಅಂತ್ಯದವರೆಗೆ 503 ಪೆಟ್ರೋಲ್ ಬಂಕ್‌ಗಳ ತಪಾಸಣೆ ಮಾಡಲಾಗಿದೆ. ಪೆಟ್ರೋಲ್ ಬಂಕ್‌ಗಳ ತಪಾಸಣೆಯನ್ನು ಹೆಚ್ಚಿಸಿ ಅಳತೆ ಮತ್ತು ಗುಣಮಟ್ಟದಲ್ಲಿ ಮೋಸದಂತಹ ಅಕ್ರಮಗಳಿಗೆ ಸಂಪೂರ್ಣ ಕಡಿವಾಣ ಹಾಕಬೇಕು. ಕನಿಷ್ಠ ಬೆಂಬಲ ಬೆಲೆ ಅಡಿ ಆಹಾರ ಧಾನ್ಯ ಸಂಗ್ರಹಿಸಲು ಎಲ್ಲಾ ವ್ಯವಸ್ಥೆ ಮಾಡಬೇಕು. ರೈತರಿಗೆ ಸಮಸ್ಯೆಯಾಗದಂತೆ ತ್ವರಿತವಾಗಿ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯ ಮಂತ್ರಿಗಳು ಸೂಚಿಸಿದರು.

ಶರಣಾದ ನಕ್ಸಲರು ಜ.30ರವರೆಗೆ ನ್ಯಾಯಾಂಗ ಬಂಧನ

ಬೆಂಗಳೂರು, ಜ.9- ಶಸ್ತ್ರಾಸ್ತ್ರ ತ್ಯಜಿಸಿ ಶರಣಾದ 6 ಮಂದಿ ನಕ್ಸಲರಿಗೆ ಜ.30ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ಎನ್‌ಐಎ ಕೋರ್ಟ್ ಆದೇಶ ಹೊರಡಿಸಿದೆ.

ಬುಧವಾರ ಸಿಎಂ ಮುಂದೆ ನಕ್ಸಲರ ಶರಣಾಗತಿ ಪ್ರಕ್ರಿಯೆ ನಡೆಯಿತು. ಮಹಿಳಾ ಸಾಂತ್ವನ ಕೇಂದ್ರದಿಂದ ಶರಣಾದ ನಕ್ಸಲರನ್ನು ಮಡಿವಾಳ ಎಫ್‌ಎಸ್‌ಎಲ್‌ಗೆ ಗುರುವಾರ ಪೊಲೀಸರು ಕರೆತಂದರು. ಡೈರಿ ಸರ್ಕಲ್ ಬಳಿಯ ಮಹಿಳಾ ಸಾಂತ್ವನ ಕೇಂದ್ರದಲ್ಲಿ ನಾಲ್ವರು ಮಹಿಳೆಯರು ಮತ್ತು ಮತ್ತಿಬ್ಬರು ಪುರುಷರನ್ನು ಮಡಿವಾಳದ ಎಫ್‌ಎಸ್‌ಎಲ್ ಸ್ಪೆಷಲ್ ಸೆಲ್‌ನಲ್ಲಿ ಇರಿಸಲಾಗಿತ್ತು. ಬಳಿಕ ಎಲ್ಲರನ್ನೂ ಅಲ್ಲಿಂದ ಮೆಡಿಕಲ್ ಪರೀಕ್ಷೆಗೆ ಕರೆದೊಯ್ಯಲಾಯಿತು. ಶರಣಾದ ನಕ್ಸಲರಾದ ■6ನೇ ಪುಟಕ್ಕೆ



ಕರ್ನಾಟಕ ನಕ್ಸಲ್ ಮುಕ್ತ ರಾಜ್ಯವಾಗಲು ಅಡ್ಡಿಯಾಗಿರುವ ರವೀಂದ್ರ ನಾಯ್ಕ!

ಚಿಕ್ಕಮಗಳೂರು, ಜ.9- ಆರು ಮಂದಿ ಮೋಸ್ಟ್ ವಾಂಟೆಡ್ ನಕ್ಸಲರ ಶರಣಾಗತಿಯೊಂದಿಗೆ ರಾಜ್ಯ ನಕ್ಸಲ್ ಮುಕ್ತವಾಗುತ್ತಿದೆ ಎಂದು ಸರ್ಕಾರ ಬೀಗುತ್ತಿದ್ದರೂ ಇನ್ನೂ ಓರ್ವ ಕುಖ್ಯಾತ ನಕ್ಸಲ್ ಶೃಂಗೇರಿ ಮೂಲದ ರವೀಂದ್ರ ನಾಯ್ಕ ತಲೆ ಮರೆಸಿಕೊಂಡಿರುವುದು ಒಳಗೊಳಗೆ ದುಗುಡ ಹುಟ್ಟಿಸಿದೆ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲೂಕು ಕೊಟೆ ಹೊಂಡದ ಮರಾಠ ಕಾಲೋನಿ ನಿವಾಸಿಯಾಗಿರುವ ರವೀಂದ್ರ ನಾಯ್ಕ ಪೊಲೀಸರಿಗೆ ಬೇಕಾಗಿರುವ ಕೊನೆಯ ನಕ್ಸಲ್ ಮುಖಂಡನಾಗಿದ್ದಾನೆ. ಈತ 2007ರಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯಲ್ಲಿ ನಡೆದ ಎಳ್ಳಮಾವಾಸೆ ಜಾತ್ರೆಯಲ್ಲಿ ಅಂದು ನಕ್ಸಲ್ ಸಂಘಟನೆಯಲ್ಲಿ ಸಕ್ರೀಯಳಾಗಿದ್ದ ಶ್ರೀಮತಿಯೊಂದಿಗೆ ಕಾಣಿಸಿಕೊಂಡಿದ್ದೇ ಕೊನೆ. ನಂತರ ಆತ ಬಹಿರಂಗವಾಗಿ ಕಾಣಿಸಿಕೊಳ್ಳಲೇ ಇಲ್ಲ.

ಶ್ರೀಮತಿ ನಕ್ಸಲ್ ಸಂಘಟನೆ ತೊರೆದು ಜಿಲ್ಲಾಡಳಿತದೆದುರು ಶರಣಾದರೂ ರವೀಂದ್ರ ನಾಯ್ಕ ಮಾತ್ರ ಚಳುವಳಿಯಲ್ಲೇ ಸಕ್ರಿಯನಾಗಿದ್ದ. ಆತನ ವಿರುದ್ಧ ಶೃಂಗೇರಿ ಪೊಲೀಸ್ ಠಾಣೆಯಲ್ಲೇ ಸುಮಾರು 15 ಪ್ರಕರಣಗಳು ದಾಖಲಾಗಿವೆ. ಉಳಿದಂತೆ ಚಿಕ್ಕಮಗಳೂರಿನ ಬೇರೆ ಬೇರೆ ಠಾಣೆಗಳು, ಉಡುಪಿ ಜಿಲ್ಲೆಯ ವಿವಿಧ ಠಾಣೆಗಳಲ್ಲಿ ಒಟ್ಟು ■6ನೇ ಪುಟಕ್ಕೆ

ವಿಮಾನ ನಿಲ್ದಾಣ ವಿಸ್ತರಣೆ, ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಸೇರಿದಂತೆ ಮೈಸೂರು ಅಭಿವೃದ್ಧಿ ಸಂಬಂಧ
ಇಂದು ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ

ಬೆಂಗಳೂರು, ಜ.9(ಕೆಎಂಶಿ)- ಮಂಡಕಳ್ಳಿ ವಿಮಾನ ನಿಲ್ದಾಣ ವಿಸ್ತರಣೆ, ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಭೂಮಿ ನೀಡುವುದೂ ಸೇರಿದಂತೆ ಮೈಸೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಿದ್ದಾರೆ. ಮೈಸೂರು ನಗರಾಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಲು ಮುಖ್ಯಮಂತ್ರಿ ಅವರು ನಾಳೆ ಗೃಹ ಕಚೇರಿ ಕೃಷ್ಣಾದಲ್ಲಿ ಹಿರಿಯ ಅಧಿಕಾರಿಗಳ ಸಭೆ ಕರೆದಿದ್ದಾರೆ.

ಹಣಕಾಸು, ಕಂದಾಯ, ನಗರಾಭಿವೃದ್ಧಿ, ಸಾರಿಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖಾ ಪ್ರಧಾನ ಕಾರ್ಯದರ್ಶಿಗಳು ಮತ್ತು ಜಿಲ್ಲಾಡಳಿತದ ಅಧಿಕಾರಿಗಳನ್ನೂ ಸಭೆಗೆ ಆಹ್ವಾನಿಸಲಾಗಿದೆ.

ಭೂಸ್ವಾಧೀನವಾಗಿದ್ದರೂ ಪರಿಹಾರ ನೀಡದೆ, ಸಂಬಂಧಿತ ಅಭಿವೃದ್ಧಿ ಕಾರ್ಯಗಳಿಗೆ ಅಗತ್ಯ ಜಾಗವನ್ನು ವಶಕ್ಕೆ ಪಡೆದುಕೊಳ್ಳಲಾಗಿರಲಿಲ್ಲ. ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ ಸಮೀಪದಲ್ಲೇ ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಹೊಸ ಬಸ್ ನಿಲ್ದಾಣ ಸ್ಥಾಪನೆಗಾಗಿ 120 ಕೋಟಿ ರೂ.ಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ನಿಲ್ದಾಣ ಸ್ಥಾಪನೆಗೆ ಸಂಬಂಧಿಸಿದಂತೆಯೂ ಮುಖ್ಯಮಂತ್ರಿಗಳು ನಾಳೆ ಪ್ರಮುಖ ತೀರ್ಮಾನಗಳನ್ನು ಕೈಗೊಳ್ಳಲಿದ್ದಾರೆ. ಸ್ಥಳೀಯ ಸಂಸದ ಯದುವೀರ್ ಒಡೆಯರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಇತ್ತೀಚೆಗೆ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ, ಮೈಸೂರು ಅಭಿವೃದ್ಧಿಗೆ ಆಗಬೇಕಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿಕೊಡುವಂತೆ ಮನವಿ ಮಾಡಿದ್ದರು.

ವಿಮಾನ ನಿಲ್ದಾಣದ ವಿಸ್ತರಣೆಗೆ ಭೂಸ್ವಾಧೀನ ಮಾಡಿದ್ದು, ಭೂ ಮಾಲೀಕರಿಗೆ ಪರಿಹಾರ ನೀಡುವುದು, ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕೆ ಚಾಲನೆ ನೀಡುವಂತೆಯೂ ಕೋರಿದ್ದರು. ಇದರ ಬೆನ್ನಲ್ಲೇ ಸಿಎಂ ಅವರು ನಾಳೆ ಬೆಳಗ್ಗೆ ಉನ್ನತ ಮಟ್ಟದ ಸಭೆ ಕರೆದಿದ್ದಾರೆ.









ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ದಿನಾ ಹೋಟ್ಲಲ್ಲಿ ತಿನ್ನಬೇಡಿ, ಅಲ್ಸರ್ ಆಗುತ್ತೆ.
ಗುಂಡ : ಹಾಗಾದ್ರೆ ದಿನಾ ಪಾರ್ಸೆಲ್ ತಂದು ಮನೆಲೇ ತಿನ್ಲಾ

ಮೈಸೂರು ಮಿತ್ರ

ಶುಕ್ರವಾರ, 10 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಸ್ನೇಹ , ಸೌಜನ್ಯದಿಂದ ಮನುಷ್ಯನನ್ನು ಗೆಲ್ಲಬಹುದೇ ಹೊರತು ಬರಿಯ ಶಕ್ತಿಯಿಂದಲ್ಲ. –ಅರಿಸ್ಟಾಟಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾಡಿ ಉಣ್ಣು ಬೇಡಿದಷ್ಟು, ತಗಾದೆ ಮಾಡದೇ ಉಣ್ಣು ನೀಡಿದಷ್ಟು.

ನಿಮ್ಮ ಪತ್ರಗಳು

ನರಕಸದೃಶ ಯಾದವಗಿರಿ ರೈಲ್ವೆ ಕೆಳಸೇತುವೆ



ಮಾನ್ಯರೆ,

ನರಕ ಎಂದರೇನು ಎಂದು ನೋಡಬೇಕೇ, ಅನುಭವಿಸಬೇಕೇ, ಹಾಗಿದ್ದಲ್ಲಿ ಮೈಸೂರಿನ ಯಾದವಗಿರಿಯ ರೈಲ್ವೆ ಕೆಳಸೇತುವೆ ರಸ್ತೆಯಲ್ಲಿ ಒಮ್ಮೆ ವಾಹನದಲ್ಲಿ ಸಾಗಿರಿ. ಅಬ್ಬಾ, ಸುರಂಗ ಮಾರ್ಗದಂತಿರುವ ಕತ್ತಲೆಯ ಕೆಳ ಸೇತುವೆ. ಜಾವಾ ಇಳಿಜಾರಿನಿಂದ ಬಂದು ಬನ್ನಿಮಂಟಪದ ಕಡೆಗೆ ಹೋಗುವಾಗ ಒಳಗಡೆ ಜಾಗ್ರತೆಯಿಂದ ವಾಹನ ಚಾಲನೆ ಮಾಡಬೇಕು. ಕೆಲವೇ ತಿಂಗಳ ಹಿಂದೆ ಹೊಸದಾಗಿ ನಿರ್ಮಿಸಿದ್ದ ರಸ್ತೆಯಲ್ಲಿ ದೊಡ್ಡ ಗುಂಡಿಗಳಿವೆ. ದ್ವಿಚಕ್ರ ವಾಹನ ಸವಾರರು ಇಲ್ಲಿ ಸರ್ಕಸ್ ಮಾಡಿಕೊಂಡೇ ಸಾಗಬೇಕು. ಇನ್ನು ಕಾರು ಮತ್ತಿತರ ವಾಹನಗಳ ಕಥೆ ದೇವರೇ ಕಾಪಾಡಬೇಕು. ಪಾಲಿಕೆಯ ಎಷ್ಟೋ ಮಂದಿ ಇಂಜಿನಿಯರ್‌ಗಳು ಅಥವಾ ಪಾಲಿಕೆ ಸದಸ್ಯರಿಗೆ ಇಲ್ಲಿಯ ಕತ್ತಲೆಯಲ್ಲಿ ಹಳ್ಳ ಕೊಳ್ಳಗಳು ಕಾಣುತ್ತಿಲ್ಲವೇನೋ. ತಕ್ಷಣವೇ ಸಂಬಂಧಿಸಿದವರು ಈ ಗುಂಡಿಗಳನ್ನು ತಕ್ಷಣವೇ ಮುಚ್ಚಲಿ, ತೇಪೆ ಬೇಡವೇ ಬೇಡ.ಇಲ್ಲವೇ, ಈ ರಸ್ತೆಯನ್ನು ಮುಚ್ಚಿ ಮಗ್ಗುಲಿನ ಮತ್ತೊಂದು ಬದಿಯಲ್ಲಿಯೇ ವಾಹನಗಳು ಸಾಗಲು ಅನುವು ಮಾಡಿ, ನರಕಯಾತನೆಯಿಂದ ಮುಕ್ತಿಗೊಳಿಸಲಿ ಎಂಬುದೇ ಇಲ್ಲಿ ದಿನನಿತ್ಯ ಸಾಗುವವರ ಆಶಯ.

–ವಿಜಯ್ ಹೆಮ್ಮಿಗೆ, ಮೈಸೂರು

ಮಳೆ ನೀರಿನ ಬಚ್ಚಲು ಸೇರುತ್ತಿರುವ ಯುಜಿಡಿ ನೀರು

ಮಾನ್ಯರೆ,



ಮೈಸೂರಿನ ಶಾರದಾದೇವಿ ನಗರದ ಒಂದನೆ ಕ್ರಾಸ್‌ನಲ್ಲಿ ಯು.ಜಿ.ಡಿ ಕೊಳವೆಯನ್ನು ಮಳೆ ನೀರಿನ ಚರಂಡಿಗೆ ಹರಿಯಲು ಬಿಡಲಾಗಿದ್ದು, ಈ ಬಗ್ಗೆ ನಗರಪಾಲಿಕೆಗೆ ದೂರಿದರೂ ಪಾಲಿಕೆಯ ಕಿವಿಗೆ ಅದು ಬೀಳದೇ ಇಲ್ಲಿನ ನಿವಾಸಿಗಳು ಮೂಗು ಮುಚ್ಚಿಕೊಂಡೇ ಜೀವಿಸುವ ಪರಿಸ್ಥಿತಿ ಎದುರಾಗಿದೆ. ನಗರದ ಸೌಂದರ್ಯದ ಬಗ್ಗೆ, ಶುಚಿತ್ವದ ಬಗ್ಗೆ ಪುಟಗಟ್ಟಲೇ ಜಾಹೀರಾತು ನೀಡುವ ಪಾಲಿಕೆಯ ಕಚೇರಿ ಸನಿಹದಲ್ಲೇ ಇಂತಹ ವ್ಯವಸ್ಥೆ ಇದೆ. ವಾರ್ಡ್ ಸಂಖ್ಯೆ 45ಕ್ಕೆ ಸೇರುವ ಈ ಸ್ಥಳದ ಬಗ್ಗೆ ಪಾಲಿಕೆಯು ನಿರ್ಲಕ್ಷ್ಯತನ ತೋರುತ್ತಿದೆ. ಕೂಡಲೇ ಮಳೆ ನೀರು ಬಚ್ಚಲು ಸೇರುತ್ತಿರುವ ಯುಜಿಡಿ ನೀರನ್ನು ನಿಲ್ಲಿಸಬೇಕೆಂದು ಈ ಮೂಲಕ ಮನವಿ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು

ನಕ್ಸಲರ ಶರಣಾಗತಿ: ಸ್ವಾಗತಾರ್ಹ ನಿರ್ಧಾರ

ಮಾನ್ಯರೆ,

ಎಡ ಪಂಥೀಯ ಧೋರಣೆ ಹೊಂದಿದ್ದ ರಾಜ್ಯದ ಆರು ಪ್ರಮುಖ ನಕ್ಸಲರು ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮುಂದೆ ಬೆಂಗಳೂರಿನಲ್ಲಿ ಶರಣಾಗಿ ಹೊಸ ಬದುಕಿಗೆ ಪ್ರವೇಶಿಸಿರುವುದು ಸಂತೋಷದಾಯಕ ವಿಚಾರ. ಸಮಾಜದ ಮುಖ್ಯವಾಹಿನಿಯಿಂದ ಬೇರ್ಪಟ್ಟು ತಮ್ಮದೇ ಆದ ರೀತಿಯಲ್ಲಿ ಬದುಕುವ ನಕ್ಸಲರು ಅಂಗೈನಲ್ಲಿ ಜೀವವಿಟ್ಟುಕೊಂಡು ಬದುಕುವ ಪರಿಸ್ಥಿತಿ. ನಿಲ್ಲಲು ನೆಲೆಯಿಲ್ಲ, ತಿನ್ನಲು ಆಹಾರವಿಲ್ಲ, ದಿಕ್ಕೆಟ್ಟ ಪರದೇಶಿಗಳಂತೆ ಊರಿಂದೂರಿಗೆ ಸಂಚರಿಸುತ್ತಾ, ಸಿಕ್ಕ ಆಹಾರವನ್ನೇ ತಿನ್ನುತ್ತಾ, ಹಿಂಸಾಮಾರ್ಗದಲ್ಲಿ ಸಂಚರಿಸುತ್ತಿದ್ದ ಇವರಿಗೆ ಈಗಲಾದರೂ ಜ್ಞಾನೋದಯವಾಗಿರುವುದು ಮೆಚ್ಚತಕ್ಕ ಸಂಗತಿ.

ದೇಶದ ಹಲವಾರು ರಾಜ್ಯಗಳಲ್ಲಿ ಈಗಾಗಲೇ ನೂರಾರು ನಕ್ಸಲರು ಶರಣಾಗಿ ಹೊಸ ಬದುಕಿಗೆ ಅಡಿಯಿಟ್ಟಿದ್ದಾರೆ. ಅತಂತ್ರ ಬದುಕನ್ನು ಎದುರಿಸಬೇಕಾಗಿರುವ ಇವರಲ್ಲಿ ಅನೇಕರು ಉತ್ತಮ ಕೌಟುಂಬಿಕ ಹಿನ್ನೆಲೆ ಹೊಂದಿದ್ದು ಉನ್ನತ ಶಿಕ್ಷಣವನ್ನು ಸಹ ಪಡೆದಿರುತ್ತಾರೆ. ಸಮಾಜದಲ್ಲಿ ಆಳವಾಗಿ ಬೇರೂರಿರುವ ಜಾತೀಯತೆ, ಸ್ವಜನ ಪಕ್ಷಪಾತ, ಲಂಚ ರುಷುವತ್ತು, ಭ್ರಷ್ಟಾಚಾರ, ಜಾತೀಯತೆ, ಲಿಂಗ ತಾರತಮ್ಯ ನಿರುದ್ಯೋಗ ಮುಂತಾದವುಗಳಿಂದ ಭ್ರಮನಿರಸನಗೊಂಡು ಹಿಂಸಾ ಮಾರ್ಗದಲ್ಲಿ ಸಾಗುತ್ತಿದ್ದಾರೆ. ವಿಶ್ವದ ಹಲವಾರು ರಾಷ್ಟ್ರಗಳಲ್ಲಿ ಸಹ, ನಕ್ಸಲರು ಬೇರೆ ಬೇರೆ ಹೆಸರಿನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದು, ಅವರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಶರಣಾಗಿರುವ ನಕ್ಸಲರು ಮುಖ್ಯಮಂತ್ರಿಗಳಿಗೆ ಒಂದು ಮನವಿ ಪತ್ರವನ್ನು ಸಲ್ಲಿಸಿದ್ದಾರೆಂದು ವರದಿಯಾಗಿದ್ದು, ಮುಖ್ಯಮಂತ್ರಿಗಳು ಇದರ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚಿಸುವ ಭರವಸೆ ನೀಡಿದ್ದಾರೆನ್ನಲಾಗಿದೆ. ಇದರಿಂದಾಗಿ ನಕ್ಸಲರು, ಸಮಾಜದಲ್ಲಿ ಎಲ್ಲರೊಂದಿಗೆ ಬೆರೆತು, ಕಲೆತು, ಹೊಸ ಜೀವನ ಕಟ್ಟಿಕೊಳ್ಳುವಂತಾಗಲಿ ಎಂದು ಹಾರೈಸೋಣ.

–ಕೆ.ವಿ.ವಾಸು, ವಕೀಲರು, ವಿವೇಕಾನಂದ ನಗರ, ಮೈಸೂರು

ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಅಗತ್ಯ



ಮಾನ್ಯರೆ,

ಮೈಸೂರಿನ ಕುವೆಂಪುನಗರ, ಅರವಿಂದನಗರ, ಶ್ರೀರಾಂಪುರ, ಶಾರದಾದೇವಿ ನಗರ ಸೇರಿದಂತೆ ಹಲವು ಬಡಾವಣೆಗಳಲ್ಲಿ ಬೀದಿನಾಯಿಗಳ ಕಾಟ ಹೆಚ್ಚಾಗಿದೆ. ರಾತ್ರಿ 8 ಗಂಟೆಯ ನಂತರ ಮನೆಯಿಂದ ಹೊರಗೆ ಕಾಲಿಟ್ಟರೆ ಸಾಕು ಬೀದಿನಾಯಿಗಳು ಕಚ್ಚಲು ಬರುತ್ತವೆ. ಕೆಲವು ವೇಳೆ ಸ್ಕೂಟರ್ ಮತ್ತು ಕಾರಿನಲ್ಲಿ ಹೋಗುತ್ತಿದ್ದರೂ ಸ್ಕೂಟರ್ ಸವಾರರನ್ನು ಕಚ್ಚಲು ಹಿಂಬಾಲಿಸಿಕೊಂಡು ಬರುತ್ತವೆ. ಇವುಗಳಿಂದ ತಪ್ಪಿಸಿಕೊಳ್ಳುವುದೇ ದೊಡ್ಡ ಸಾಹಸ ಎನಿಸುತ್ತದೆ.

ಈ ರೀತಿಯ ಬೀದಿನಾಯಿಗಳ ಸಂಖ್ಯೆ ಹೆಚ್ಚಾಗಲು ನಗರಪಾಲಿಕೆಯ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡುತ್ತಿಲ್ಲವೇನೋ? ಎನಿಸುತ್ತಿದೆ ಹಾಗೂ ಮೈಸೂರು ನಗರದ ಹಲವು ಕಡೆ ಮಾಂಸ ಮಾರಾಟ ಮತ್ತು ಮೀನು ಮಾರಾಟ ಮಾಡುವವರು ಸರಿಯಾದ ರೀತಿಯಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡದೇ ಎಲ್ಲೆಂದರಲ್ಲಿ ಬಿಸಾಕಿದ ಮಾಂಸಾಹಾರ ತಿನ್ನುವುದರಿಂದ ಬೀದಿನಾಯಿಗಳು ಹೆಚ್ಚು ಆಕ್ರಮಣಭರಿತವಾಗುತ್ತಿವೆ.

ಕೆ.ಆರ್. ಆಸ್ಪತ್ರೆಯ ನನ್ನ ವೈದ್ಯ ಮಿತ್ರರು ಹೇಳುವಂತೆ ಪ್ರತಿದಿನ 20 ರಿಂದ 30 ಜನರು ನಾಯಿಯಿಂದ ಕಚ್ಚಿಸಿಕೊಂಡು ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಬರುತ್ತಾರೆ ಎಂದರು. ಪಾಲಿಕೆಯ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಬೀದಿನಾಯಿಗಳಿಗೆ ವ್ಯವಸ್ಥಿತವಾಗಿ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿ, ಬೀದಿನಾಯಿಗಳ ಕಾಟ ಹೆಚ್ಚಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಗರಪಾಲಿಕೆಯವರದು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಇತಿಹಾಸ ಗೊತ್ತಿಲ್ಲದೆ ಇತಿಹಾಸ ಸೃಷ್ಟಿಸಲಾದೀತೆ...

ಇತ್ತೀಚೆಗೆ ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದಾಗ ಒಂದು ದೇಶ ಹೇಗೆ ಸಾಗಬಾರದೋ ಅದಕ್ಕೆ ಉದಾಹರಣೆಯಂತಿದೆ. ಭಾರತದ ಕೃಪೆಯಿಂದ ಜನನ ತಳೆದ ಆ ದೇಶ ಈಗ ಭಾರತೀಯರ ವಿರುದ್ಧ ಸೆಟೆದು ನಿಲ್ಲುತ್ತಿದೆ. ಹಿಂದಿನ ಉಪಕಾರ ಸ್ಮರಣೆಯನ್ನು ಮಾಡದ ಅಲ್ಲಿನ ತಾತ್ಕಾಲಿಕ ಸರ್ಕಾರ ಅಲ್ಲಿನ ಜನರ ಮನಸ್ಸಿನಲ್ಲಿ ದ್ವೇಷದ ಭಾವನೆ ಹುಟ್ಟುಹಾಕುತ್ತಿದೆ. ಅದರಲ್ಲೂ ಅಲ್ಲಿನ ಅಲ್ಪಸಂಖ್ಯಾತ ಭಾರತೀಯರ ಮೇಲೆ ಅನಾಚಾರ ನಡೆಸಲಾಗುತ್ತಿದೆ. ಪೂಜಾ ಮಂದಿರಗಳನ್ನು ಧ್ವಂಸ ಮಾಡಲಾಗುತ್ತಿದೆ. ಇಷ್ಟಾದರೂ ಭಾರತ ಏಕೆ ಪ್ರತಿರೋಧದ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂಬ ಪ್ರಶ್ನೆ ಜನರನ್ನು ಸಹಜವಾಗಿ ಕಾಡುತ್ತಿದೆ.

ಆದರೆ ಒಂದು ದೇಶದ ವಿರುದ್ಧ ಯುದ್ಧ ಹೂಡಲು ಇದು ಸಕಾರಣವಾಗುವುದಿಲ್ಲ. ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಭಾರತದ ಓರ್ವ ಮಿಲಿಟರಿ ಅಧಿಕಾರಿ, ಸರ್ಕಾರ ಒಂದು ಸೂಚನೆ ನೀಡಿದರೆ ಸಾಕು, ಕೆಲವೇ ದಿನಗಳಲ್ಲಿ ಬಾಂಗ್ಲಾದೇಶವನ್ನು ನಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಕಷ್ಟದ ವಿಷಯವಲ್ಲ ಎಂದು ಹೇಳಿದರು. ಇದು ನಿಜವೂ ಹೌದು. ನಮ್ಮ ಸೇನೆ ಸಶಕ್ತವಾಗಿದೆ. ಅದಕ್ಕೆ ಒಂದೆರಡು ದಿನಗಳಲ್ಲಿ ಯುದ್ಧ ಪೂರೈಸುವುದು ಕಷ್ಟದ ಕೆಲಸವಲ್ಲ. ಆದರೆ ಇತ್ತೀಚೆಗೆ ರಷ್ಯಾ ಹಾಗೂ ಯುಕ್ರೇನ್ ನಡುವೆ ಆರಂಭವಾದ ಯುದ್ಧ ಎರಡೂ ದೇಶಗಳಿಗೂ ಸಂಕಷ್ಟವನ್ನು ತಂದಿಟ್ಟಿದೆ. ಯುದ್ಧ ಬೇಡವೆನಿಸಿದರೂ, ನಿಲ್ಲಿಸಲಾಗದ ಸ್ಥಿತಿಗೆ ಅವು ತಲುಪಿವೆ. ಯುದ್ಧ ಆರಂಭಿಸುವುದು ಸುಲಭ, ಆದರೆ ನಂತರ ಅದು ಆರಂಭಿಸಿದವರ ಹಿಡಿತದಲ್ಲಿ ಇರುವುದಿಲ್ಲ. ಯುದ್ಧನಿರತ ಎರಡೂ ರಾಷ್ಟ್ರಗಳನ್ನು ಬೆಂಬಲಿಸಿ ಹಲವು ರಾಷ್ಟ್ರಗಳು ಹೇಳಿಕೆ ನೀಡಿವೆ. ಯುದ್ಧ ಮುಂದುವರೆದರೆ ಆ ದೇಶಗಳು ಎದುರು ಬದಿರಾಗುತ್ತವೆ. ಅವಕ್ಕೆ ಮತ್ತಷ್ಟು ದೇಶಗಳು ಬೆಂಬಲ ನೀಡಿದರೆ ಮತ್ತೊಂದು ವಿಶ್ವಯುದ್ಧಕ್ಕೆ ಅನುವು ಮಾಡಿಕೊಟ್ಟಂತೆ ಆಗುತ್ತದೆ. ಅದಾಗಬಾರದು. ಈಗಲೇ ವಿಶ್ವವು ಹಲವು ಸಮಸ್ಯೆಗಳಿಂದ ಬಳಲುತ್ತಿದೆ. ಹೀಗಿರುವಾಗ ಅದಕ್ಕೆ ಯುದ್ಧವೂ ಸೇರಿದರೆ ವಿಶ್ವ ಮತ್ತಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈಗಿನ ಆಧುನಿಕ ಯುದ್ಧ ಉಪಕರಣಗಳು ದೇಶದೇಶಗಳನ್ನೇ ಧ್ವಂಸ ಮಾಡಬಹುದಾದ ಸಾಮರ್ಥ್ಯ ಹೊಂದಿವೆ. ಅವು ಅಸಹಾಯಕ ಜನರ ಬಲಿ ಪಡೆಯಬಹುದು. ಆಗ ಕೆಲವು ದೇಶಗಳೇ ಇಲ್ಲದಂತೆ ಆಗಿಬಿಡಬಹುದು.

ಇದಕ್ಕೆ ಇನ್ನೂ ನಡೆಯುತ್ತಿರುವ ಇಸ್ರೇಲ್ ಹಾಗೂ ಪ್ಯಾಲೆಸ್ಟೇನ್ ಯುದ್ಧವೇ ಸಾಕ್ಷಿ. ಇಂದು ಈ ಯುದ್ಧ ಆ ಎರಡು ದೇಶಗಳಿಗೆ ಸೀಮಿತವಾಗಿಲ್ಲ. ಇಂತಹ ಯುದ್ಧಗಳನ್ನು ಆನಂದಿಸುವಂತಹ ಒಂದಷ್ಟು ದೇಶಗಳಿರುತ್ತವೆ. ಅವು ಯುದ್ಧ ಮುಂದುವರೆಯಲು ಬಯಸುತ್ತವೆ. ಯುದ್ಧ ಆರಂಭ ಮಾಡಿದವರ ಉದ್ದೇಶ ಈಡೇರುತ್ತದೋ ಇಲ್ಲವೋ, ಆದರೆ ಇತರರು ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಾರೆ. ಯುದ್ಧ ಆರಂಭಿಸುವವರಿಗೆ ಮುಂದಾಗಬಹುದಾದ ಪರಿಣಾಮಗಳ ವಿವೇಚನೆ ಇರಬೇಕಾಗುತ್ತದೆ.

ಬಹುಶಃ ಈ ಕಾರಣದಿಂದಲೇ ನಮ್ಮ ದೇಶ ಬಾಂಗ್ಲಾ ವಿರುದ್ಧ ಯುದ್ಧದ ಘೋಷಣೆ ಮಾಡುತ್ತಿಲ್ಲ ಎನ್ನಿಸುತ್ತದೆ. ಬಹುಶಃ ಅಮೇರಿಕಾದ ನೂತನ ಅಧ್ಯಕ್ಷರ ಪದಗ್ರಹಣ ಒಂದಷ್ಟು ಬದಲಾವಣೆ ತರಬಹುದು ಎನ್ನಿಸುತ್ತದೆ. ಆದರೂ ಯುದ್ಧ ಬೇಡ ಎಂಬುದು ಶಾಂತಿಪ್ರಿಯರ ಬಯಕೆ. ಅದರಿಂದ ಕಂಗಾಲಾಗುವವರು ಶ್ರೀಸಾಮಾನ್ಯರು. ಮೊದಲ ಹೊಡೆತ ಬೆಲೆ ಏರಿಕೆಯಾಗುತ್ತದೆ. ಇದು ನಾಗರಿಕರನ್ನು ನೆಮ್ಮದಿಯಾಗಿರಲು ಬಿಡುವುದಿಲ್ಲ. ನಂತರ ಪರಿಸರ ಮಾಲಿನ್ಯವೂ ಸೇರಿ ಹಲವು ಸಮಸ್ಯೆಗಳು ಉದ್ಭವಿಸಿದರೆ ಅದರಿಂದ ಚೇತರಿಸಿಕೊಳ್ಳಲು ದಶಕಗಳೇ ಬೇಕಾಗಬಹುದು.

ಈಗಿನ ಬಾಂಗ್ಲಾದಲ್ಲಿ ನಡೆಯುತ್ತಿರುವುದು ಎಲ್ಲವೂ ಸರಿ ಇಲ್ಲ ಎಂಬಂತೆ ಕಂಡುಬರುತ್ತದೆ. ಅದಕ್ಕೆ ಪೂರಕವಾದ ಒಂದು ವಿಷಯ ಕಳೆದ ವಾರ ಪತ್ರಿಕೆಯಲ್ಲಿ ಸಣ್ಣದಾಗಿ ಪ್ರಕಟವಾಗಿದೆ. ಸುಮ್ಮನೆ ನೋಡಿದರೆ ಅದೊಂದು ಸಣ್ಣ ಹಾಗೂ ಆ ದೇಶಕ್ಕೆ ಸಂಬಂಧಿಸಿದ ಆಂತರಿಕ ವಿಷಯ. ಆದರೆ ಅದು ಅಲ್ಲಿನ ಜನರ ಮಾನಸಿಕ ಸ್ಥಿತಿಯನ್ನು ಮತ್ತಷ್ಟು ಹಾಳು ಮಾಡಲಿದೆಯೇನೋ ಎನ್ನಿಸುತ್ತದೆ. ಅಲ್ಲಿ ಈಗ ಯುವಕರೇ ಪ್ರಧಾನವಾಗಿ ಎಲ್ಲೆಡೆ ಕಂಡುಬರುತ್ತಾರೆ. ಅವರನ್ನು ಉದ್ರೇಕಗೊಳಿಸುವುದು ಬಹಳ ಸುಲಭ. ಹಾಗಾಗಿ ಅಲ್ಲಿ ಇಂದು ಜನಾಂಗೀಯ ಕಲಹದ ಜೊತೆಗೆ ಕಷ್ಟದ ಸರಮಾಲೆ ಎದ್ದು ಕಾಣುತ್ತಿದೆ.

ಪತ್ರಿಕೆಯಲ್ಲಿ ಬಂದ ಸುದ್ದಿ ಏನೆಂದರೆ 'ಬಾಂಗ್ಲಾದಲ್ಲಿ ಪಠ್ಯ ಪರಿಷ್ಕರಣೆ ಮಾಡಲಾಗುತ್ತಿದೆ. ಅಲ್ಲಿನ ಸರ್ಕಾರ ಶಾಲಾ ಪಠ್ಯಪುಸ್ತಕಗಳನ್ನು ಪರಿಷ್ಕರಣೆ ಮಾಡಿದ್ದು, ಇತಿಹಾಸದ ಬಗ್ಗೆ ಹಲವು ಮಹತ್ವದ ಬದಲಾವಣೆಗಳನ್ನು ಮಾಡಿದೆ. ಈವರೆಗೆ ಬಾಂಗ್ಲಾದೇಶದ



ಫೈಲ್ ಚಿತ್ರ

> ❝ ಸತ್ಯವನ್ನು ಹೆಚ್ಚು ಕಾಲ ಮರೆಮಾಚಲಾಗುವುದಿಲ್ಲ. ನಮ್ಮ ದೇಶದ ನೈಜ ಇತಿಹಾಸವನ್ನು ತಿಳಿದುಕೊಳ್ಳುವುದು ದೇಶದ ನಾಗರಿಕರ ಹಕ್ಕು ಹಾಗೂ ಅದನ್ನು ಜನರ ಮುಂದೆ ಇಡಬೇಕಾದುದು ಸರ್ಕಾರಗಳ ಕರ್ತವ್ಯವೂ ಹೌದು. ಆದರೆ ಜನರು ನಮ್ಮ ಬಗ್ಗೆ ಮಾತ್ರ ಒಳ್ಳೆಯ ಭಾವನೆ ಬೆಳೆಸಿಕೊಳ್ಳುವಂತಾಗಬೇಕು ಎಂಬುದು ಸ್ವಾರ್ಥ ಎನಿಸುತ್ತದೆ.

ಪಿತಾಮಹ ಎಂದು ಕರೆಯಲಾಗುತ್ತಿದ್ದ ಬಂಗಬಂಧು ಶೇಖ್ ಮುಜಿಬುರ್ ರೆಹಮಾನ್ ಅವರ ಕುರಿತ ವಿವರವನ್ನು ಕೈಬಿಡಲಾಗಿದೆ. ಇದರ ಬದಲಾಗಿ 1971ರಲ್ಲಿ ಜಿಯಾವುರ್ ರೆಹಮಾನ್ ಅವರು ದೇಶದ ಸ್ವಾತಂತ್ರ್ಯವನ್ನು ಘೋಷಿಸಿದರು ಎಂದು ಪಠ್ಯದಲ್ಲಿ ಉಲ್ಲೇಖ ಮಾಡಲಾಗಿದೆ. 2025ರ ಶೈಕ್ಷಣಿಕ ವರ್ಷಕ್ಕೆ ಹೊಸ ಪಠ್ಯ ಪುಸ್ತಕಗಳು ಅನ್ವಯವಾಗಲಿದೆ' ಎಂದು ಆ ವರದಿ ಹೇಳುತ್ತದೆ. ನೋಡಲು ಇದೊಂದು ಸಣ್ಣದಾದ ಹಾಗೂ ಆ ದೇಶದ ಆಂತರ್ಯದ ವಿಷಯ ಎನಿಸುತ್ತದೆ. ಆದರೆ ಅದು ಯುವಜನರ ಮೇಲೆ ಯಾವ ಪರಿಣಾಮ ಬೀರಬಹುದು ಎಂಬುದನ್ನು ಗಮನಿಸಬೇಕು. ಈವರೆಗೆ ಅಲ್ಲಿನ ಪಠ್ಯಗಳಲ್ಲಿ ಶೇಖ್ ಮುಜಿಬುರ್ ರೆಹಮಾನ್ ಅವರನ್ನು ದೇಶದ ಪಿತಾಮಹ ಎಂದು ಕರೆಯುತ್ತಿದ್ದುದು ಈಗ ಅವರಲ್ಲ ಎಂದರೆ, ಯುವ ಜನತೆಯ ಮನಸ್ಸಿನ ಮೇಲೆ ಯಾವ ಪರಿಣಾಮ ಬೀರಬಹುದು? ಈಗಾಗಲೇ ಅಲ್ಲಿ ಈ ಹಿಂದೆ ಸ್ಥಾಪಿಸಲಾದ ಅವರ ಪ್ರತಿಮೆಗಳನ್ನು ಧ್ವಂಸ ಮಾಡುತ್ತಿದ್ದ ವಿಡಿಯೋಗಳನ್ನು ನಾವು ಕಂಡಿದ್ದೇವೆ. ಒಂದು ಘಟನೆಯಿಂದ ದೇಶದ ಪಿತಾಮಹ ಎಂದು ಕರೆಸಿಕೊಳ್ಳುತ್ತಿದ್ದವರನ್ನು ದೇಶದ್ರೋಹಿ ಎಂಬಂತೆ ಬಿಂಬಿಸಿದರೆ ಅದು ಅಲ್ಲಿನ ಇತಿಹಾಸ ಓದುವವರಿಗೆ ಏನೆನಿಸಬಹುದು ಎಂಬುದನ್ನು ಯೋಚಿಸಬೇಕಾಗುತ್ತದೆ.

ನಮ್ಮ ದೇಶದಲ್ಲೂ ಇದೇ ರೀತಿ ಮನಬಂದಂತೆ ನಮ್ಮ ಚರಿತ್ರೆ ಬರೆಯಲಾಗಿದೆ ಎಂಬುದು ಈಗೀಗ ಬಯಲಾಗುತ್ತಿದೆ. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುತ್ತಿರುವ ಹಲವು ವಿಷಯಗಳು ನಮ್ಮ ಪಠ್ಯಗಳಲ್ಲಿ ಈವರೆಗೆ ಕಂಡುಬಂದಿಲ್ಲ. ದೇಶದ ಹೋರಾಟದಲ್ಲಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ಲಕ್ಷಾಂತರ ಜನರ ಬಗ್ಗೆ ಉಲ್ಲೇಖಗಳೇ ಇಲ್ಲ. ಕೇವಲ ಕೆಲವರನ್ನು ಮಾತ್ರ ಚಿತ್ರಿಸಿ ನಮ್ಮ ಚರಿತ್ರೆಯನ್ನು ಅಪೂರ್ಣಗೊಳಿಸಲಾಗಿದೆ ಎಂಬಂತೆ ಕಂಡುಬರುತ್ತಿದೆ. ಆದರೆ ಒಂದಂತೂ ಸತ್ಯ. ಸತ್ಯವನ್ನು ಹೆಚ್ಚು ಕಾಲ ಮರೆಮಾಚಲಾಗುವುದಿಲ್ಲ. ನಮ್ಮ ದೇಶದ ನೈಜ ಇತಿಹಾಸವನ್ನು ತಿಳಿದುಕೊಳ್ಳುವುದು ದೇಶದ ನಾಗರಿಕರ ಹಕ್ಕು ಹಾಗೂ ಅದನ್ನು ಜನರ ಮುಂದೆ ಇಡಬೇಕಾದುದು ಸರ್ಕಾರಗಳ ಕರ್ತವ್ಯವೂ ಹೌದು. ಆದರೆ ಜನರು ನಮ್ಮ ಬಗ್ಗೆ ಮಾತ್ರ ಒಳ್ಳೆಯ ಭಾವನೆ ಬೆಳೆಸಿಕೊಳ್ಳುವಂತಾಗಬೇಕು ಎಂಬುದು ಸ್ವಾರ್ಥ ಎನ್ನಿಸುತ್ತದೆ.

ಹಾಗೆ ನೋಡಿದರೆ ನಮ್ಮ ಸ್ವಾತಂತ್ರ್ಯ ಹೋರಾಟ ಕೇವಲ ಬ್ರಿಟಿಷರ ವಿರುದ್ಧ ಮಾತ್ರ ಮಾಡಿದ ಹೋರಾಟವಲ್ಲ. ಅದಕ್ಕೂ ಹಿಂದೆ ಏಳೆಂಟು ಶತಮಾನಗಳ ಕಾಲ ಈ ದೇಶದ ಮೇಲೆ ದಂಡೆತ್ತಿ ಬಂದ ವಿದೇಶಿಗರು ಇಲ್ಲಿ ದೌರ್ಜನ್ಯ ಮೆರೆದು ಹೋಗಿದ್ದಾರೆ. ಇಲ್ಲಿನ ಸಂಪತ್ತು ಅಷ್ಟು ಅಗಾಧವಾಗಿತ್ತು. ಅದನ್ನು ಕೊಳ್ಳೆ ಹೊಡೆಯಲು ಬಂದವರು ಈ ದೇಶದಲ್ಲಿನ ಪರಸ್ಪರ ಅಸೂಯಾ ಮನೋಭಾವವನ್ನು ಉಪಯೋಗಿಸಿಕೊಂಡು ಈ ದೇಶದ ಆಡಳಿತದ ಚುಕ್ಕಾಣಿಯನ್ನೇ ಕೈಗೆ ತೆಗೆದುಕೊಂಡರು. ಒಂದು ದೇಶದವರು ಹೋದಾಗ ಮತ್ತೊಂದು ದೇಶದವರು ಇಲ್ಲಿಗೆ ಬಂದರು. ನಿರಂತರ ಗುಲಾಮಗಿರಿ ಈ ದೇಶದ್ದಾಗಿತ್ತು. ಅಷ್ಟಾದರೂ ಅವರ್‍ಯಾರೂ ಇಲ್ಲಿ ಶಾಶ್ವತವಾಗಿ ಇರಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ಆಯಾ ಸಮಯದಲ್ಲಿ ಅವರನ್ನು, ಅವರ ದೌರ್ಜನ್ಯವನ್ನು ಕಂಡು ರೋಸಿಹೋಗಿ ಅವರ ವಿರುದ್ಧ ಹೋರಾಡಿದ ಹಾಗೂ ಅದಕ್ಕಾಗಿ ತಮ್ಮ ಪ್ರಾಣವನ್ನೇ ಬಲಿ ನೀಡಿದ ಸಹಸ್ರಾರು ದೇಶಪ್ರೇಮಿಗಳು. ಈ ವಿದೇಶಿ ಶಕ್ತಿಗಳ ವಿರುದ್ಧ ತಮ್ಮದೇ ಆದ ರೀತಿಯಲ್ಲಿ ಹೋರಾಟ ನಡೆಸಿದರು. ದೇಶಕ್ಕಾಗಿ ಹೋರಾಡಿ ಪ್ರಾಣ ಬಿಡುವುದು ತಮ್ಮ ಕರ್ತವ್ಯ ಎಂದು ಅವರು ಭಾವಿಸಿದರು. ಇಂತಹ ಹೋರಾಟಗಾರರಿಂದ ಅಂತಹ ವಿದೇಶಿ ಶಕ್ತಿಗಳು ದೇಶದಿಂದ ಪಲಾಯನ ಮಾಡಬೇಕಾಯಿತು. ಆ ಸರತಿಯಲ್ಲಿ ಕೊನೆಗೆ ಬಂದವರು ಬ್ರಿಟಿಷರು. ಅವರು ಇನ್ನಷ್ಟು ವರ್ಷಗಳು ಇಲ್ಲಿ ರಾಜ್ಯಭಾರ ಮಾಡಬಹುದಾಗಿತ್ತೇನೋ, ಆದರೆ ಈ ದೇಶದ ಸ್ವಾತಂತ್ರ್ಯ ಹೋರಾಟಗಾರರು ಅದಕ್ಕೆ ಅವಕಾಶ ನೀಡಲಿಲ್ಲ. ಇಲ್ಲಿ ಶಾಂತಿಯ, ಸತ್ಯಾಗ್ರಹದ ಹೋರಾಟದ ಜೊತೆಗೆ ಕ್ರಾಂತಿಕಾರಿಗಳು, ಸಾಹಿತಿಗಳು, ಸಮಾಜ ಸುಧಾರಕರೂ ಹೋರಾಟ ಮಾಡಿದರು. ಜೊತೆಗೆ ನಡೆದ ವಿಶ್ವ ಯುದ್ಧದಲ್ಲಿ ಸೋಲು ಕಂಡ ಬ್ರಿಟಿಷರು ಇಲ್ಲಿ ಮುಂದುವರೆಯುವುದು ಕಷ್ಟಸಾಧ್ಯವಾದ್ದರಿಂದ ಅವರು ದೇಶ ಬಿಟ್ಟು ಹೋಗಲೇಬೇಕಾಯಿತು. ಇದು ನಮ್ಮ ಇತಿಹಾಸ.

ಆದರೆ ನಮ್ಮ ಪಠ್ಯಗಳಲ್ಲಿ ಇಂತಹ ಎಷ್ಟು ಹೋರಾಟಗಾರರ ವಿವರ ಲಭ್ಯವಿದೆ ಎಂದು ಹುಡುಕಿದರೆ, ಅಂತಹ ತ್ಯಾಗಮಯಿ ಹೋರಾಟಗಾರರಿಗೆ ಅವಮಾನವಾಗುವಂತೆ ಅವರ ವಿವರವನ್ನೇ ನಮ್ಮ ಪಠ್ಯಗಳಲ್ಲಿ ನೀಡದಿರುವುದು ಕಂಡುಬರುತ್ತದೆ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಾತು, ದೇಶದ ಇತಿಹಾಸ ಗೊತ್ತಿಲ್ಲದವರು ದೇಶದ ಇತಿಹಾಸ ಹೇಗೆ ನಿರ್ಮಿಸುತ್ತಾರೆ? ಎಂಬುದೇ ಆಗಿದೆ. ನಮ್ಮ ದೇಶದ ನಿಜವಾದ ಇತಿಹಾಸ ನಮಗೆ ಗೊತ್ತಾಗಬೇಕು. ಆಗಲೇ ನಾವು ಅದರಿಂದ ಪಾಠ ಕಲಿತು, ಮುಂದೆ ಹೇಗೆ ಸಾಗಬೇಕು ಎಂಬುದು ಗೊತ್ತಾಗಬೇಕು.

ಇತ್ತೀಚೆಗೆ ರಾಣಿ ದುರ್ಗಾವತಿಯವರ ಐದು ನೂರನೇ ಜನ್ಮ ಶತಾಬ್ದಿಯನ್ನು ಆಚರಿಸಲಾಯಿತು. ಆಕೆ ಜನಿಸಿದ್ದು 05.10.1524ರಲ್ಲಿ. ಅನೇಕ ಕಡೆ ಆಕೆಯ ಐದು ನೂರನೇ ಜನ್ಮದಿನ ಆಚರಿಸಲಾಯಿತು. ಒಬ್ಬ ಮಹಿಳೆಯಾಗಿ ಆಕೆ ತೋರಿದ ಸಾಹಸ ಮೈಜುಮ್ಮೆನಿಸುವಂತಹುದು. ರೋಮಾಂಚನಕಾರಿಯಾದುದು. ಆಕೆಯ ಚರಿತ್ರೆ ಓದಿದರೆ ಇಂದಿನ ಹೆಣ್ಣು ಮಕ್ಕಳಲ್ಲಿ ಶೌರ್ಯ ಮರುಕಳಿಸಬಹುದು. ತಾನು ಶತ್ರುವಿಗೆ ಸೆರೆ ಸಿಕ್ಕಿ ಅವನಿಂದ ಹತಳಾಗಬಾರದು ಎಂದು ತಾನೇ ತನ್ನ ಕಠಾರಿಯಿಂದ ಇರಿದುಕೊಂಡು ಪ್ರಾಣಬಿಟ್ಟ ಸ್ವಾಭಿಮಾನಿ, ಸಾಹಸಿ ಮಹಿಳೆ ಆಕೆ. ಆದರೆ ಆಕೆಯ ಬಗ್ಗೆ ನಾವು ಶಾಲೆಗಳಲ್ಲಿ ವಿವರ ಓದಲೇ ಇಲ್ಲ. ಏಕೆಂದರೆ ಅದು ನಮ್ಮ ಪಠ್ಯಗಳಲ್ಲಿ ಬರಲೇ ಇಲ್ಲ.

ಮತ್ತೋರ್ವ ಧೀರ ಮಹಿಳೆ ಅಹಲ್ಯಾ ಬಾಯಿ ಹೋಳ್ಕರ್ ಅವರ ತ್ರಿಶತಮಾನೋತ್ಸವವೂ ಈಗ ದೇಶದೆಲ್ಲೆಡೆ ನಡೆಯುತ್ತಿದೆ. ಆಕೆ ಜನಿಸಿದ್ದು 31.5.1725ರಲ್ಲಿ. ಆಕೆಯೂ ಒಬ್ಬ ಹೆಣ್ಣು ಮಗಳಾಗಿ, ತನ್ನ ಜೀವನದಲ್ಲೇ ಆಪ್ತರ ಸರಣಿ ಸಾವುಗಳನ್ನು ಕಂಡರೂ ದೇಶಕ್ಕಾಗಿ ಬದುಕಬೇಕು ಎಂದು ತನ್ನ ಜೀವನವನ್ನು ವೈರಾಗ್ಯ ಮೂರ್ತಿಯಾಗಿ ಕಳೆದಳು. ರಾಣಿಯಾದರೂ ರಾಜ್ಯದ ಹಣ ಬಳಸದೆ ತನ್ನ ಸ್ವಂತ ಹಣದಿಂದ ಸಾವಿರಾರು ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿದ್ದೇ ಅಲ್ಲದೆ, ಮೊದಲ ಬಾರಿಗೆ ರಸ್ತೆ ಹೆದ್ದಾರಿಯ, ಅಂಚೆಯ ಪರಿಕಲ್ಪನೆ ಮೂಡಿಸಿದವಳು ಆಕೆ. ರಾಣಿಯಾದರೂ ಸನ್ಯಾಸಿನಿಯಂತೆ ಬದುಕಿದ ಆಕೆ ಶೌರ್ಯ ಮೆರೆದವಳು. ಈಕೆಯ ಬಗ್ಗೆಯೂ ನಾವು ಹೆಚ್ಚು ಓದಲಿಲ್ಲ.

ವನವಾಸಿಯಾದ ಬಿರ್ಸಾಮುಂಡ ಬದುಕಿದ್ದು ಕೇವಲ 25 ವರ್ಷಗಳು ಮಾತ್ರ. ತನ್ನ ಜನರಿಗೆ ಆಗುತ್ತಿದ್ದ ಅನ್ಯಾಯ ಕಂಡು ಬ್ರಿಟಿಷರ ವಿರುದ್ಧ ಗೋರಿಲ್ಲಾ ಮಾದರಿ ಹೋರಾಟ ನಡೆಸಿದವನು. ಆತನನ್ನು ಜನರು ಭಕ್ತಿ–ಭಾವ ಹಾಗೂ ಗೌರವದಿಂದ ಭಗವಾನ್ ಬಿರ್ಸಾ ಮುಂಡ ಎಂದು ಕರೆಯುತ್ತಿದ್ದರು. ಆತ ಜನಿಸಿದ್ದು 15.11.1875ರಲ್ಲಿ. ಇದೀಗ ಆತನ 150ನೇ ವರ್ಷಾಚರಣೆ ಮಾಡಲಾಯಿತು. ದೇಶದ ಗೌರವಾನ್ವಿತ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರ 150ನೇ ವರ್ಷಾಚರಣೆಯ ಸಂಬಂಧ ಬರೆದ ಲೇಖನ ಅಂದು ದೇಶದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಈತನ ಬಗ್ಗೆಯೂ ನಾವು ಪಠ್ಯಗಳಲ್ಲಿ ಓದಿದ್ದು ನೆನಪಿಲ್ಲ.

ನಮ್ಮ ಇತಿಹಾಸ ನಮಗೆ ಅರಿವಾಗಬೇಕು. ಆಗ ನಮ್ಮಲ್ಲಿ ಸ್ವಾಭಿಮಾನ ಹಾಗೂ ದೇಶಭಕ್ತಿ ಮೂಡಲು ಸಾಧ್ಯವಾಗುತ್ತದೆ. ಇಂತಹ ಇತಿಹಾಸ ತಿದ್ದುವ, ತಮಗೆ ಬೇಕಾದಂತೆ ಬರೆಸುವ ಬಾಂಗ್ಲಾದೇಶದ ರೀತಿ ಸರಿ ಎನಿಸುವುದಿಲ್ಲ. ನಾವು ಮುಂದಿನ ಪೀಳಿಗೆಯ ಬಗ್ಗೆಯೂ ಯೋಚಿಸಬೇಕಲ್ಲವೇ?.

ಮಾವೋವಾದಿಗಳು ಸಿಎಂ ಕಚೇರಿಯಲ್ಲಿ ಶರಣಾಗುವುದರಲ್ಲಿ ತಪ್ಪೇನಿಲ್ಲ

ರಾಜ್ಯಕ್ಕೆ ಸಂದೇಶ ಕಳಿಸುವ ಅನಿವಾರ್ಯತೆ ಇತ್ತು



ಬೆಂಗಳೂರು, ಜ.9 – ಕರ್ನಾಟಕದಲ್ಲಿ ನಕ್ಸಲಿಸಂ ಹೆಚ್ಚು ಕಡಿಮೆ ಅಂತ್ಯಗೊಂಡಿದೆ. ಮುಖ್ಯಮಂತ್ರಿ ಕಚೇರಿಯಲ್ಲಿ ಮಾವೋವಾದಿಗಳು ಶರಣಾಗುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಗೃಹ ಸಚಿವ ಜಿ ಪರಮೇಶ್ವರ್ ಗುರುವಾರ ಹೇಳಿದ್ದಾರೆ.

ರಾಜ್ಯದಲ್ಲಿ 6 ಮಂದಿ ನಕ್ಸಲರಿಗೆ ಸರ್ಕಾರ ಶರಣಾಗತಿ ಪ್ಯಾಕೇಜ್ ನೀಡಿದೆ. ಬಂದೂಕಿನ ಮೊರೆತ ಕೇಳಿಸಿದ ನಕ್ಸಲರನ್ನು ಕ್ಷಮಿಸಿ ಅವರನ್ನು ನಗರ ನಕ್ಸಲರನ್ನಾಗಿಸುತ್ತಿದೆ ಎಂಬ ಬಿಜೆಪಿ ಪ್ರಧಾನ ಕಾರ್ಯದರ್ಶಿ ಹಾಗೂ ಶಾಸಕ ವಿ.ಸುನೀಲ್‌ಕುಮಾರ್ ಟೀಕೆಗೆ ಪ್ರತಿಕ್ರಿಯಿಸಿದ ಅವರು, ಯಾರೊಬ್ಬರೂ ನಕ್ಸಲ್ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬಾರದು ಎಂಬ ಸಂದೇಶವನ್ನು ಸಮಾಜಕ್ಕೆ ರವಾನಿಸಬೇಕು. ನಕ್ಸಲರು ಮುಖ್ಯಮಂತ್ರಿಗಳ ಮುಂದೆ ಶರಣಾದಾಗ ಅದು ರಾಜ್ಯದ ಎಲ್ಲರಿಗೂ ಗೊತ್ತಾಗುತ್ತದೆ. ನಕ್ಸಲರ ಪರಿವರ್ತನೆಗೆ ಸರ್ಕಾರ ಅವಕಾಶ ಕಲ್ಪಿಸಿದೆ. ಅದರಲ್ಲಿ ತಪ್ಪೇನು ಎಂದು ಪ್ರಶ್ನಿಸಿದರು.

ಮಾವೋವಾದಿಗಳ ಚಟುವಟಿಕೆ ಹೆಚ್ಚಿರುವ ಕಾರ್ಕಳ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸುತ್ತಿರುವ ಶಾಸಕ ಸುನೀಲ್‌ಕುಮಾರ್, ಕಾಡುಗಳಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಮಾವೋವಾದಿಗಳನ್ನು ನಗರ ನಕ್ಸಲರನ್ನಾಗಿಸುವ ಪ್ರಯತ್ನ ಇದಾಗಿದೆ. ಹಲವು ವರ್ಷಗಳಿಂದ ನಕ್ಸಲ್ ನಿಗ್ರಹ ಪಡೆ (ಎಎನ್‌ಎಫ್) ನಕ್ಸಲರ ವಿರುದ್ಧ ಹಗಲಿರುಳು ಕಾರ್ಯಾಚರಣೆ ನಡೆಸಿದ್ದು, ಈ ಬೆಳವಣಿಗೆ ಅವರ ನೈತಿಕ ಸ್ಥೈರ್ಯವನ್ನು ಕುಗ್ಗಿಸುತ್ತದೆ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದ್ದರು. ಇದಕ್ಕೆ ತಿರುಗೇಟು ನೀಡಿರುವ ಪರಮೇಶ್ವರ್, ಬಿಜೆಪಿ ಶಾಸಕ ಸುನೀಲ್‌ಕುಮಾರ್ ಅವರ ಕ್ಷೇತ್ರದಲ್ಲಿಯೇ ಗಮನಾರ್ಹ ನಕ್ಸಲ್ ಚಟುವಟಿಕೆ ಇದೆ. ಹಾಗಿದ್ದರೆ, ಕಾರ್ಕಳದಲ್ಲಿ ಎಎನ್‌ಎಫ್ (ನಕ್ಸಲ್ ನಿಗ್ರಹ ಪಡೆ) ಇಲ್ಲವೇ ಎಂದು ಪ್ರಶ್ನಿಸಿದ್ದಾರೆ.

ನಕ್ಸಲರು ಸಿಎಂ ಮುಂದೆ ಶರಣಾಗುವುದು ಸೂಕ್ತವಲ್ಲ ಎಂದು ಯಾರು ಹೇಳುತ್ತಿದ್ದಾರೆಯೋ ಅವರು ಏನು ತಪ್ಪು ಮತ್ತು ಅದು ಏಕೆ ತಪ್ಪೆಂದು ಭಾವಿಸುತ್ತಿದ್ದಾರೆ ಎಂಬುದನ್ನು ವಿವರಿಸಬೇಕು. ನಕ್ಸಲ್ ಚಟುವಟಿಕೆಗೆ ನಮ್ಮಲ್ಲಿ ಅವಕಾಶವಿಲ್ಲ ಎಂಬ ಸಂದೇಶವನ್ನು ಸಮಾಜಕ್ಕೆ ನೀಡಲು ಬಯಸಿದ್ದೇವೆ. ಮುಖ್ಯಮಂತ್ರಿ ಮುಂದೆ ನಕ್ಸಲರು ಶರಣಾದಾಗ ಇಡೀ ರಾಜ್ಯ ಜಾಗೃತಗೊಳ್ಳುತ್ತದೆ ಮತ್ತು ನಕ್ಸಲಿಸಂನಲ್ಲಿ ನಂಬಿಕೆ ಇರುವವರು ಮರುಚಿಂತನೆ ಮಾಡಿಕೊಳ್ಳಬಹುದು ಎಂದು ಬಿಜೆಪಿ ಟೀಕೆಗೆ ಸಚಿವ ಪರಮೇಶ್ವರ್ ಪ್ರತಿಕ್ರಿಯಿಸಿದರು.

ನಕ್ಸಲರಲ್ಲಿ ಸುಧಾರಣೆ ತರಲು ಸರ್ಕಾರ ಮತ್ತು ಸಿಎಂ ಬದ್ಧರಾಗಿದ್ದಾರೆ. ಅದರಲ್ಲಿ ತಪ್ಪೇನಿದೆ ಎಂಬುದನ್ನು ಟೀಕಾಕಾರರು ವಿವರಿಸಲಿ. ಸಿಎಂ ಮುಂದೆ ಶರಣಾಗತಿ ಆಗಬಾರದಿತ್ತು ಎಂದು ಸರಳವಾಗಿ ಹೇಳುವುದು ಸರಿಯಲ್ಲ. ಅವರು ತಮ್ಮ ಆಕ್ಷೇಪಣೆಗಳಿಗೆ ಸೂಕ್ತ ಕಾರಣಗಳನ್ನು ಒದಗಿಸಬೇಕು. ಮುಖ್ಯವಾಹಿನಿಗೆ ಮರಳಲು ಬಯಸುವ ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿರುವ ಎಲ್ಲರಿಗೂ ನಾವು ಪ್ಯಾಕೇಜ್ ಅನ್ನು ವಿಸ್ತರಿಸುತ್ತೇವೆ. ಅದರಲ್ಲಿ ತಪ್ಪೇನು. ಅವರು ಇಂತಹ ಮಾತುಗಳನ್ನು ಹೇಳುತ್ತಾರೆ. ಆದರೆ, ಅವರ ಕ್ಷೇತ್ರದಲ್ಲಿಯೇ ನಕ್ಸಲ್ ಚಟುವಟಿಕೆಗಳು ಹೆಚ್ಚುತ್ತಿವೆ ಎಂದರು.

ಮಾವೋವಾದಿಗಳು ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನಕ್ಸಲರು ಶರಣಾಗುವಾಗ ಅವರು ನಿರಾಯುಧರಾಗಿದ್ದರು. ಅವರು ತಮ್ಮ ಶಸ್ತ್ರಾಸ್ತ್ರಗಳನ್ನು ತ್ಯಜಿಸಿದ್ದಾರೆ ಮತ್ತು ಅವರು ಅವುಗಳನ್ನು ಎಲ್ಲಿಟ್ಟಿದ್ದಾರೆ ಎಂಬುದರ ಕುರಿತು ಪೊಲೀಸರು ತನಿಖೆ ಮಾಡುತ್ತಾರೆ. ಕರ್ನಾಟಕದಲ್ಲಿ ನಕ್ಸಲಿಸಂ ಅಧಿಕೃತವಾಗಿ ಅಂತ್ಯಗೊಂಡಿದೆಯೇ ಎಂಬ ಬಗ್ಗೆ ಸಚಿವರು, ಹೌದು, ಹೆಚ್ಚು ಕಡಿಮೆ ಶೇ.99ರಷ್ಟು ಕೊನೆಗೊಂಡಿದೆ ಎಂದು ನಾವು ನಂಬುತ್ತೇವೆ ಎಂದರು. ಶರಣಾದ ನಕ್ಸಲರಲ್ಲಿ ಕೆಲವರು ತಮಿಳುನಾಡು ಮತ್ತು ಕೇರಳದವರು ಇದ್ದಾರೆ. ಹೀಗಾಗಿ, ನಮ್ಮ ಸಿಎಂ ಆಯಾ ರಾಜ್ಯಗಳ ಸಿಎಂಗಳೊಂದಿಗೆ ಮಾತನಾಡುವುದಾಗಿ ತಿಳಿಸಿದ್ದಾರೆ. ಶರಣಾದ ನಕ್ಸಲರ ವಿರುದ್ಧ ಬೇರೆ ರಾಜ್ಯಗಳಲ್ಲಿ ಪ್ರಕರಣಗಳಿದ್ದು, ಆ ರಾಜ್ಯ ಸರ್ಕಾರಗಳೂ ನಿರ್ಧಾರ ಕೈಗೊಳ್ಳಬೇಕು ಎಂದರು. ಬುಧವಾರ ಶರಣಾದ 6 ನಕ್ಸಲರ ಗುಂಪಿನಲ್ಲಿ ಕರ್ನಾಟಕದ ಮುಂಡಗಾರು ಲತಾ, ಕಳಸದ ವನಜಾಕ್ಷಿ ಬಾಳೆಹೊಳೆ, ದಕ್ಷಿಣಕನ್ನಡದ ಸುಂದರಿ ಕುತ್ಲೂರು, ರಾಯಚೂರಿನ ಮರೆಪ್ಪ ಅರೋಲಿ ಸೇರಿದ್ದಾರೆ. ಉಳಿದಿಬ್ಬರು ತಮಿಳುನಾಡಿನ ವೆಲ್ಲೂರಿನ ವಸಂತ, ಕೇರಳದ ವಯನಾಡಿನ ಎನ್ ಜೀಶಾ ಆಗಿದ್ದಾರೆ.

ಬರಗೂರು ರಾಮಚಂದ್ರಪ್ಪರಿಗೆ ಅಭಿನಂದನೆ...



ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ಆಯೋಜಿಸಿದ್ದ ವಿಶ್ವ ಮಾನವ ದಿನಾಚರಣೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಖ್ಯಾತ ಸಾಹಿತಿ, ಚಲನಚಿತ್ರ ನಿರ್ದೇಶಕರೂ ಆದ ನಾಡೋಜ ಡಾ.ಬರಗೂರು ರಾಮಚಂದ್ರಪ್ಪ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಸಿಂಡಿಕೇಟ್ ಸದಸ್ಯರಾದ ಕ್ಯಾತನಹಳ್ಳಿ ನಾಗರಾಜು, ಕೆ.ಗೋಕುಲ್ ಗೋವರ್ಧನ್, ಡಾ. ನಟರಾಜು, ಶಿವಣ್ಣ, ಗಿರಿಧರ್ ಉಪಸ್ಥಿತರಿದ್ದರು.

ಬಾಡಿಗೆಗೆ ಮನೆ ನೀಡಿದವರಿಗೆ ಬಹಿಷ್ಕಾರ

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ನಾಯಕರ ಹಿತರಕ್ಷಣಾ ವೇದಿಕೆ ಆಗ್ರಹ

ಮೈಸೂರು, ಜ.9(ಜಿಎ)–ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಅಗರ ಗ್ರಾಮದಲ್ಲಿ ಎಸ್‌ಸಿ ಸಮುದಾಯಕ್ಕೆ ಸೇರಿದವರಿಗೆ ವಾಸಿಸಲು ಬಾಡಿಗೆಗೆ ಮನೆ ನೀಡಿದ ಕುಟುಂಬಕ್ಕೆ ಲಿಂಗಾಯತ ಸಮುದಾಯದವರು ಸಾಮಾಜಿಕ ಬಹಿಷ್ಕಾರ ಹಾಕಿರುವುದು ಖಂಡನೀಯ. ಹೀಗಾಗಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ ಮಾತನಾಡಿ, ಲಿಂಗಾಯತ ಬಡಾವಣೆಯ ಮಠದ ಬೀದಿಯಲ್ಲಿ ವಾಸಿಸುವ ವಿ.ಸುರೇಶ್ ಎಂಬುವವರು ನಾಯಕ ಸಮುದಾಯದವರಿಗೆ ಮನೆ ಬಾಡಿಗೆಗೆ ನೀಡಿದ್ದರು. ಇದನ್ನು ಪ್ರಶ್ನಿಸಿ ನ್ಯಾಯ ಪಂಚಾಯಿತಿ ಮಾಡಿ ಕುಟುಂಬಕ್ಕೆ ಬಹಿಷ್ಕಾರ ಹಾಕಲಾಗಿದೆ. ಈ ಬಳಿಕ ಸುರೇಶ್ ಅವರು ಠಾಣೆಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ. ಇದು ಪರಿಶಿಷ್ಟ ಪಂಗಡದವರ ವಿರುದ್ಧದ ಅಸ್ಪೃಶ್ಯತಾ ಆಚರಣೆಯೂ ಆಗಿದೆ. ಹೀಗಾಗಿ ಕೂಡಲೇ ಅಗರ ಗ್ರಾಮದ ಯಜಮಾನರು ಹಾಗೂ ಮುಖಂಡರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಭಾಕರ್ ಹುಣಸೂರು, ರಾಜು ಮಾರ್ಕೆಟ್, ಮಯೂರ ಕಲ್ಲುಣಿಕೆ, ಮೂರ್ತಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

'ಕ್ರೀಡಾ ಮಿತ್ರ'

23ರಿಂದ ದಕ್ಷಿಣ ವಲಯ ಅಂತರ ವಿವಿ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ

ಯಾವುದೇ ಲೋಪ ಆಗದಂತೆ ನಡೆಸಲು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸೂಚನೆ



ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆಯಲ್ಲಿ ದಕ್ಷಿಣ ವಲಯ ಅಂತರ ವಿವಿ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಯ ಸಂಘಟನಾ ಸಮಿತಿ ಸಭೆ ನಡೆಯಿತು. ಕುಲಸಚಿವರಾದ ವಿ.ಆರ್. ಶೈಲಜಾ, ಪ್ರೊ.ನಾಗರಾಜ, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ.ವೆಂಕಟೇಶ್ ಇತರರು ಇದ್ದಾರೆ.

ಮೈಸೂರು,ಜ.9–ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯದ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಯು ಜ.23ರಿಂದ 29ರವರೆಗೆ ಮೈಸೂರು ವಿವಿಯ ಪ್ರಾಯೋಜಕತ್ವದಲ್ಲಿ ನಡೆಯಲಿದೆ.

ಈ ಹಿನ್ನೆಲೆಯಲ್ಲಿ ಪಂದ್ಯಾವಳಿಯ ಸಂಘಟನಾ ಸಮಿತಿಯ ಸಭೆಯು ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅವರ ಅಧ್ಯಕ್ಷತೆಯಲ್ಲಿ ಕ್ರಾಫರ್ಡ್ ಭವನದಲ್ಲಿ ಜರುಗಿತ್ತು.

ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ ಆಗಿರುವುದರಿಂದ ಸುರಕ್ಷತೆಗೆ ಹೆಚ್ಚಿನ ಗಮನ ನೀಡಬೇಕು. ಯಾವುದೇ ಗೊಂದಲಗಳಾಗದಂತೆ ವ್ಯವಸ್ಥೆ ಮಾಡಬೇಕು ಎಂದು ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಸೂಚಿಸಿದರು.

ಪಂದ್ಯಾವಳಿಯನ್ನು ಪ್ರಾಯೋಜಕತ್ವದಲ್ಲಿ ನಡೆಸಿ ಕ್ರೀಡಾಧಿಕಾರಿಗಳು ಹಾಗೂ ಚೆಂಡುಗಳ ಶುಲ್ಕವನ್ನು ಕೂಡ ಪಂದ್ಯಾವಳಿಗೆ ಬಳಸಿಕೊಳ್ಳಿ. ಇದನ್ನು ಮೀರಿ ವೆಚ್ಚ ತಗುಲಿದಲ್ಲಿ ವಿವಿ ವತಿಯಿಂದ ಭರಿಸುವ ಬಗ್ಗೆ ಪರಿಶೀಲಿಸುವುದಾಗಿ ಭರವಸೆ ನೀಡಿದರು.

ದಕ್ಷಿಣ ವಲಯದ 43 ವಿವಿಗಳ ತಂಡಗಳು ಭಾಗಹಿಸಲಿದ್ದು, ಪಂದ್ಯಾವಳಿಗಳು ಸ್ಪೋರ್ಟ್ಸ್ ಪೆವಿಲಿಯನ್, ಗಂಗೋತ್ರಿ ಗ್ಲೇಡ್ಸ್ ಹಾಗೂ ಕಾಫಿ ಬೋರ್ಡ್ ಮೈದಾನದಲ್ಲಿ ನಡೆಯಲಿವೆ. ಕ್ರೀಡಾಪಟುಗಳಿಗೆ ಮೈಸೂರು ವಿವಿ, ಕರ್ನಾಟಕ ರಾಜ್ಯ ಮುಕ್ತ ವಿವಿ, ಮತ್ತಿತರ ಕಡೆ ವಸತಿ ಸೌಲಭ್ಯ ಕಲ್ಪಿಸಲಾಗುವುದು ಎಂದು ಮೈವಿವಿ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ.ವೆಂಕಟೇಶ್ ತಿಳಿಸಿದರು.

ಕುಲಸಚಿವೆ ವಿ.ಆರ್.ಶೈಲಜಾ, ಪರೀಕ್ಷಾಂಗ ಕುಲಸಚಿವ ಪ್ರೊ.ಎನ್. ನಾಗರಾಜ, ಹಣಕಾಸು ಅಧಿಕಾರಿ ಕೆ.ಎಸ್. ರೇಖಾ, ಸಿಂಡಿಕೇಟ್ ಸದಸ್ಯರಾದ ಮಹದೇಶ್, ಡಾ.ಜೆ.ಶಿಲ್ಪಾ, ಮೈವಿವಿ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಂ.ಚಂದ್ರಕುಮಾರ್, ಉಪ ನಿರ್ದೇಶಕ ಡಾ.ಪಿ. ಕೃಷ್ಣಯ್ಯ, ನಿವೃತ್ತ ಕುಲಸಚಿವ ಪ್ರೊ.ಎಸ್. ಆರ್.ವಿಶ್ವನಾಥ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ದೈಹಿಕ ಶಿಕ್ಷಣ ಶಿಕ್ಷಕ ಡಾ.ಕೃಷ್ಣಕುಮಾರ್, ನಿವೃತ್ತ ಕ್ರಿಕೆಟ್ ತರ ಬೇತುದಾರ ಡಾ.ಮನ್ಸೂರ್ ಅಹಮದ್, ಕೆಎಸ್‌ಸಿಎ ಸಂಚಾಲಕ ಹರೀಶ್ ಕುಮಾರ್ ಮಾತನಾಡಿ, ಸಲಹೆ– ಸೂಚನೆ ನೀಡಿದರು. ಸಿ. ರೇವಣ್ಣ, ಯೋಗೀಶ್ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಮಹಿಳಾ ಕುಸ್ತಿಗೆ ಆಯ್ಕೆ



2024–25ನೇ ಸಾಲಿನ ಅಖಿಲ ಭಾರತ ಅಂತರ ವಿವಿ ಮಹಿಳಾ ಕುಸ್ತಿ ಸ್ಪರ್ಧೆಯು ಜ.14ರಿಂದ 17ರವರಗೆ ಪಂಜಾಬ್‌ನ ಗುರು ಕಾಶಿ ವಿವಿ ಬತಿಂಡಾದಲ್ಲಿ ನಡೆಯಲಿದೆ. ಪಂದ್ಯಾವಳಿಯಲ್ಲಿ ಮೈಸೂರು ವಿವಿ ಮಹಿಳಾ ಕುಸ್ತಿ ತಂಡ ಭಾಗವಹಿಸಲಿದೆ. ಚಿತ್ರದಲ್ಲಿ (ನಿಂತಿರುವವರು ಎಡದಿಂದ ಬಲಕ್ಕೆ): ಪ್ರಣತಿ, ಪುಷ್ಪ ರಾಧಿಕಾ, ಶ್ರೀರಕ್ಷಾ, ಮೇರಿನಾ ಜೇನಿಫರ್, (ಕುಳಿತಿರುವವರು ಎಡದಿಂದ ಬಲಕ್ಕೆ): ಮಲ್ಲುಸ್ವಾಮಿ (ಮ್ಯಾನೇಜರ್) ಡಾ.ಸಿ.ವೆಂಕಟೇಶ್ (ನಿರ್ದೇಶಕರು), ಸುಲ್ತಾನ್ (ನಾಯಕಿ) ಅವರನ್ನು ಕಾಣಬಹುದು.

ಒತ್ತಡದ ನಡುವೆ ಪಿಡಿಓಗಳ ಕಾರ್ಯನಿರ್ವಹಣೆ

ತಾಪಂ ಇಓ ಸಿ.ಕೃಷ್ಣ ಶ್ಲಾಘನೆ



ಕರ್ನಾಟಕ ರಾಜ್ಯ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ(ಪಿಡಿಓ) ಗಳ ಕ್ಷೇಮಾಭಿವೃದ್ಧಿ ಸಂಘ ಜಿಲ್ಲಾ ಘಟಕದ ಸರ್ವ ಸದಸ್ಯರ ವಾರ್ಷಿಕ ಜಿಲ್ಲಾ ಪರಿಷತ್ ಸಭೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲೆ ಹಾಗೂ ತಾಲೂಕು ಘಟಕದ ನಿರ್ದೇಶಕರಾಗಿ ಆಯ್ಕೆಯಾದ ಪಿಡಿಓಗಳನ್ನು ಅಭಿನಂದಿಸಲಾಯಿತು.

ಮೈಸೂರು, ಜ.9(ಎಸ್‌ಬಿಡಿ)– ಗ್ರಾಮ ಪಂಚಾಯ್ತಿ ಅಧಿಕಾರಿ(ಪಿಡಿಓ)ಗಳು ಕಾರ್ಯದೊತ್ತಡ ಸಹಿಸಿಕೊಂಡು ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ ಎಂದು ಮೈಸೂರು ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಸಿ.ಕೃಷ್ಣ ಹೇಳಿದರು.

ಕರ್ನಾಟಕ ರಾಜ್ಯ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಜಿಲ್ಲಾ ಘಟಕದ ವತಿಯಿಂದ ತಾಲೂಕು ಪಂಚಾಯ್ತಿ ಸಭಾಂಗಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಜಿಲ್ಲಾ ಪರಿಷತ್ ಸಭೆಯಲ್ಲಿ ಮಾತನಾಡಿದ ಅವರು, ನ್ಯಾಯಯುತ ಬೇಡಿಕೆಗೆಗಳ ಈಡೇರಿಕೆಗೆ ಸಂಘಟನೆ ಅಗತ್ಯ. ಒಗ್ಗಟ್ಟಿದ್ದರೆ ಮಾತ್ರ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯ. ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಅಧಿಕಾರಿಗಳು ಬಹಳ ಒತ್ತಡದಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಜನರಿಗೆ ತಲುಪಿಸಲು ಎಲ್ಲಾ ಒತ್ತಡಗಳನ್ನು ನಿಭಾಯಿಸಬೇಕಿದೆ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಅರುಣ್ ಕುಮಾರ್ ಮಾತನಾಡಿ, ಸರ್ಕಾರದ ಯೋಜನೆಗಳು, ಸವಲತ್ತುಗಳನ್ನು ನೇರವಾಗಿ ಜನರಿಗೆ ತಲುಪಿಸುವುದಕ್ಕಾಗಿ ಪಿಡಿಓಗಳು ಶ್ರಮಿಸುತ್ತಿದ್ದಾರೆ. ಹೀಗೆಯೇ ಆತ್ಮವಿಶ್ವಾಸದಿಂದ ಕೆಲಸ ನಿರ್ವಹಿಸಿ. ರಾಜ್ಯ ಸರ್ಕಾರಿ ನೌಕರರ ಸಂಘ ನಿಮ್ಮೊಂದಿಗಿದ್ದು ಅಗತ್ಯ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದರು. ಕರ್ನಾಟಕ ರಾಜ್ಯ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಕೆ.ರುಕ್ಮಾಂಗದ ಮಾತನಾಡಿ, ಸಂಘಟನೆ ವಿಚಾರದಲ್ಲಿ ನಾವೆಲ್ಲರೂ ಒಮ್ಮತದಿಂದ ನಿರ್ಧಾರ ಕೈಗೊಳ್ಳಬೇಕು. ವೈಯಕ್ತಿಕ ಹಿತಾಸಕ್ತಿ ಯಾರಲ್ಲೂ ಇರಬಾರದು. ಕರ್ತವ್ಯ ನಿರ್ವಹಿಸುವ ಜೊತೆಗೆ ಸಹೋದ್ಯೋಗಿಗಳ ಸಮಸ್ಯೆಗಳಿಗೆ ಸ್ಪಂದಿಸಬೇಕು. ಉತ್ತಮ ವಿಚಾರಗಳನ್ನು ಎಲ್ಲರೂ ವಿನಿಮಯ ಮಾಡಿಕೊಂಡು ಗ್ರಾಮೀಣ ಭಾಗದ ಅಭಿವೃದ್ಧಿಗೆ ಶ್ರಮಿಸೋಣ ಎಂದರು.

ಇದೇ ಸಂದರ್ಭದಲ್ಲಿ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ, ನಿವೃತ್ತ ಪಿಡಿಓಗಳು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲೆ ಹಾಗೂ ತಾಲೂಕು ನಿರ್ದೇಶಕರ ಸ್ಥಾನಕ್ಕೆ ಆಯ್ಕೆಯಾದ ಪಿಡಿಓಗಳನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಜಿಲ್ಲಾ ಗೌರವಾಧ್ಯಕ್ಷ ಬಿ.ಎಸ್.ರೂಪೇಶ್, ಖಜಾಂಚಿ ಸಿ.ಪ್ರಕಾಶ್, ರಾಜ್ಯ ಪರಿಷತ್ ಸದಸ್ಯ ಟಿ.ಎನ್. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಎಂ.ಎಚ್.ಮೋಹನ್ ಕುಮಾರ್, ಉಪಾಧ್ಯಕ್ಷರಾದ ಮೊಹಮ್ಮದ್ ಇಸ್ಹಾಕ್, ಎಸ್.ವಿ.ಸೌಮ್ಯ, ಸಂಘಟನಾ ಕಾರ್ಯದರ್ಶಿ ವಿ.ಎನ್. ಪೂರ್ಣಿಮಾ, ಕ್ರೀಡಾ ಕಾರ್ಯದರ್ಶಿ ರಾಘವೇಂದ್ರ ಪ್ರಸನ್ನ, ಸಾಂಸ್ಕೃತಿಕ ಕಾರ್ಯದರ್ಶಿ ಟಿ.ಸೌಮ್ಯಲತಾ, ತಾಲೂಕು ಅಧ್ಯಕ್ಷರುಗಳಾದ ಬಸವರಾಜು, ಲಿಂಗರಾಜು, ಪ್ರಭಾಕರ, ಮಂಜುನಾಥ, ಭಾಸ್ಕರ್ ಮತ್ತಿತರರ ಪದಾಧಿಕಾರಿಗಳು ಉಪಸ್ಥಿತರಿದ್ದರು.




ಆರೈಕೆ ಕೇಂದ್ರದಲ್ಲಿದ್ದ ವೃದ್ಧೆ ನಾಪತ್ತೆ

ಮೈಸೂರು, ಜ.9– ಸ್ವಯಂ ಸೇವಾ ಸಂಸ್ಥೆಯೊಂದರ ಆರೈಕೆ ಕೇಂದ್ರದಲ್ಲಿದ್ದ ವೃದ್ಧೆಯೊಬ್ಬರು ಕಾಣೆಯಾಗಿರುವ ಬಗ್ಗೆ ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರದ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದ ಶಿವನಗರದಲ್ಲಿ ಜನಸೇವಾ ಟ್ರಸ್ಟ್ ನಿರ್ವಹಣೆ ಮಾಡುತ್ತಿರುವ ಮಹಿಳೆಯರ ವಸತಿಯುತ ಹಾಗೂ ಹಗಲು ಆರೈಕೆ ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಜಯನಗರದ ಗೌರಾಬಾಯಿ(67) ಅವರು ಜ.6ರಿಂದ ಕಾಣೆಯಾಗಿದ್ದಾರೆ. ಮರೆಗುಳಿತನ ಸಮಸ್ಯೆ ಇರುವ ಗೌರಾಬಾಯಿ ಅವರನ್ನು ಎಲ್ಲಾ ಕಡೆ ಹುಡುಕಾಡಿದರೂ ಪತ್ತೆಯಾಗಿಲ್ಲ ಎಂದು ಆರೈಕೆ ಕೇಂದ್ರದ ಸುಷ್ಮಾ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಗೌರಾಬಾಯಿ ಅವರ ಬಗ್ಗೆ ಸುಳಿವು ಸಿಕ್ಕರೆ ನಗರ ಪೊಲೀಸ್ ಕಂಟ್ರೋಲ್ ರೂಂ(0821–2418339) ಅಥವಾ ವಿಜಯನಗರ ಠಾಣೆ(2418317) ಸಂಪರ್ಕಿಸುವಂತೆ ಕೋರಲಾಗಿದೆ.



ಗೌರಾಬಾಯಿ





ಖದೀಮನ ಬಂಧನ; 7 ಲಕ್ಷ ಮೌಲ್ಯದ 11 ವಾಹನ ವಶಕ್ಕೆ



ನಜರ್‌ಬಾದ್ ಠಾಣೆ ಪೊಲೀಸರು ಖದೀಮನಿಂದ ವಶಪಡಿಸಿಕೊಂಡ ದ್ವಿಚಕ್ರ ವಾಹನಗಳು.

ಮೈಸೂರು, ಜ.9(ಎಸ್‌ಬಿಡಿ)– ಮೈಸೂರಿನ ನಜರ್‌ಬಾದ್ ಠಾಣೆ ಪೊಲೀಸರು ದ್ವಿಚಕ್ರ ವಾಹನ ಕಳ್ಳನನ್ನು ಬಂಧಿಸಿ, ಸುಮಾರು 7 ಲಕ್ಷ ಮೌಲ್ಯದ 11 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳ ಪತ್ತೆಗಾಗಿ ಪೊಲೀಸ್ ಸಿಬ್ಬಂದಿ ವಿಶೇಷ ಗಸ್ತು ನಡೆಸುತ್ತಿದ್ದ ವೇಳೆ ಲಾರಿ ಟರ್ಮಿನಲ್ ಬಳಿ, ಕಳವು ಮಾಡಿದ್ದ ಬೈಕ್ ಸಮೇತ ಖದೀಮ ಸಿಕ್ಕಿ ಬಿದ್ದಿದ್ದಾನೆ. ಬಳಿಕ ಆತನನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆ ನಡೆಸಿದಾಗ ಮೈಸೂರು ನಗರ ಹಾಗೂ ನಂಜನಗೂಡಿನಲ್ಲಿ ದ್ವಿಚಕ್ರ ವಾಹನ ಕಳ್ಳತನ ಮಾಡಿರುವುದಾಗಿ ತಿಳಿಸಿದ್ದಾನೆ.

ಈ ಮೂಲಕ ನಜರ್‌ಬಾದ್ ಠಾಣೆಯ 5, ಆಲನಹಳ್ಳಿ ಠಾಣೆಯ 4, ಕೃಷ್ಣರಾಜ ಠಾಣೆ ಹಾಗೂ ನಂಜನಗೂಡು ಟೌನ್ ಠಾಣೆಯ ತಲಾ 1 ಪ್ರಕರಣಗಳು ಪತ್ತೆಯಾಗಿವೆ. ಆರೋಪಿ ನೀಡಿದ ಮಾಹಿತಿ ಮೇರೆಗೆ ಕಳವು ಮಾಡಿದ್ದ 11 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ. ಹಿರಿಯ ಅಧಿಕಾರಿಗಳ ಮಾರ್ಗದರ್ಶನ ಹಾಗೂ ದೇವರಾಜ ವಿಭಾಗದ ಎಸಿಪಿ ಶಾಂತಮಲ್ಲಪ್ಪ ನವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಜರ್‌ಬಾದ್ ಠಾಣೆಯ ಇನ್ಸ್‌ಪೆಕ್ಟರ್ ಎಂ.ಮಹದೇವಸ್ವಾಮಿ, ಸಬ್‌ಇನ್ಸ್‌ಪೆಕ್ಟರ್‌ಗಳಾದ ಶ್ರೀನಿವಾಸ್ ಪಾಟೀಲ್, ನಟರಾಜು, ಸಿಬ್ಬಂದಿ ಬಿ.ವಿ.ಪ್ರಕಾಶ್, ಸತೀಶ್‌ಕುಮಾರ್, ಪಿ.ಎಸ್.ರಮೇಶ್, ಎಂ.ಸಂಜು, ಆರ್.ವೆಂಕಟೇಶ್, ಮೊಹಮ್ಮದ್ ಇಸ್ಮಾಹಿಲ್, ಅಟೋಮೇಷನ್ ಸೆಂಟರ್‌ನ ಎಸ್‌ಐಗಳಾದ ಚಂದ್ರಶೇಖರ್ ರಾವ್, ಪ್ರದೀಪ್ ಹಾಗೂ ತಾಂತ್ರಿಕ ವಿಭಾಗದ ಕುಮಾರ್ ಭಾಗವಹಿಸಿದ್ದರು.

ತಿರುಪತಿ ಕಾಲ್ತುಳಿತದಲ್ಲಿ ಸತ್ತವರ ಕುಟುಂಬಕ್ಕೆ ತಲಾ 25 ಲಕ್ಷ ಪರಿಹಾರ

● ನ್ಯಾಯಾಂಗ ತನಿಖೆಗೆ ಆದೇಶ ● 2 ಎಫ್‌ಐಆರ್ ● ಇಬ್ಬರ ಅಮಾನತು ● ಮೂವರ ವರ್ಗಾವಣೆ



ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿದ ನಾಯ್ಡು.

ಬೆಂಗಳೂರು, ಜ.9– ಆಂಧ್ರ ಪ್ರದೇಶದ ತಿರುಪತಿ ತಿರುಮಲ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬುಧವಾರ ರಾತ್ರಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟ 6 ಮಂದಿಯ ಪೈಕಿ ಒಬ್ಬರು ಬಳ್ಳಾರಿ ಮೂಲದ ಮಹಿಳೆ ಎಂದು ಗುರುತಿಸಲಾಗಿದೆ.

ಮೃತರನ್ನು ಬಳ್ಳಾರಿ ಮೂಲದ ನಿರ್ಮಲಾ (50), ವೈಜಾಗ್‌ನ ರಜನಿ(47), ಲಾವಣ್ಯ (40), ಶಾಂತಿ(30), ಸೇಲಂನ ಮಲ್ಲಿಕಾ (49) ಹಾಗೂ ನರಸಿಪಟ್ಟಣದ ನಾಯ್ಡು ಬಾಬು(59) ಎಂದು ಗುರುತಿಸಲಾಗಿದೆ. ದುರ್ಘಟನೆಯಲ್ಲಿ 60ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದು, ಗಾಯಾಳುಗಳಿಗೆ ಚಿಕಿತ್ಸೆ ಮುಂದುವರದಿದೆ.

ದುರಂತದಲ್ಲಿ ಸತ್ತವರ ಕುಟುಂಬಕ್ಕೆ ತಲಾ 25 ಲಕ್ಷ ಪರಿಹಾರ ಹಾಗೂ ಒಬ್ಬರಿಗೆ ಅರೆಕಾಲಿಕ ಉದ್ಯೋಗ ಕಲ್ಪಿಸುವುದಾಗಿ ಘೋಷಿಸಿದರು. ಇತ್ತ ಟಿಟಿಡಿಯೂ ತಲಾ 2 ಲಕ್ಷ ಪರಿಹಾರ ಘೋಷಿಸಿದೆ. ಆಸ್ಪತ್ರೆಗೂ ಭೇಟಿ ನೀಡಿ ಗಾಯಾಳುಗಳ ಭೇಟಿಯಾದ ನಾಯ್ಡು, ಗಾಯಾಳುಗಳಿಗೂ ತಲಾ ಒಂದು ಲಕ್ಷ ಪರಿಹಾರದೊಂದಿಗೆ ಅವರಿಗೆ ನೇರವಾಗಿ ದೇವರ ದರ್ಶನಕ್ಕೆ ವ್ಯವಸ್ಥೆ ಮಾಡುವ ಭರವಸೆ ನೀಡಿದರೆ, ಇವರ ಭೇಟಿ ನಂತರ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಸಹ ತಿರುಪತಿಗೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ನೆರವು ನೀಡುವಂತೆ ರಾಹುಲ್ ಗಾಂಧಿ ಆಗ್ರಹ: ಈ ನಡುವೆ ತಿರುಪತಿ ದೇವಸ್ಥಾನದಲ್ಲಿ ಸಂಭವಿಸಿದ ಕಾಲ್ತುಳಿತ ತೀವ್ರ ದುಃಖ ತಂದಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿಷಾದ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ತಿರುಪತಿಯಲ್ಲಿ ಸಂಭವಿಸಿದ ದುರಂತ ತೀವ್ರ ದುಃಖವನ್ನುಂಟುಮಾಡಿದೆ. ದುಃಖತಪ್ತ ಕುಟುಂಬಗಳಿಗೆ ಸಂತಾಪಗಳು. ಗಾಯಗೊಂಡ ಎಲ್ಲರೂ ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸುತ್ತೇನೆ. ಈ ಕಷ್ಟದ ಸಮಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಾಧ್ಯವಿರುವ ಎಲ್ಲಾ ನೆರವು ನೀಡಿ ಎಂದು ಹೇಳಿದ್ದಾರೆ.

ತಲಾ 25 ಲಕ್ಷ ಪರಿಹಾರ: ತಿರುಪತಿಯಲ್ಲಿ ಜನವರಿ 8ರಂದು ಬುಧವಾರ ನಡೆದ ಭೀಕರ ಕಾಲ್ತುಳಿತ ಪ್ರಕರಣದಲ್ಲಿ ಸಾವಿಗೀಡಾದವರ ಕುಟುಂಬಸ್ಥರಿಗೆ ರಾಜ್ಯ ಸರ್ಕಾರದ ಮುಜುರಾಯಿ ಇಲಾಖೆ ತಲಾ 25 ಲಕ್ಷ ರೂಪಾಯಿ ಪರಿಹಾರ ಘೋಷಿಸಿದೆ. ತಿರುಪತಿ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡಿರುವ ಕಂದಾಯ ಸಚಿವ ಅನಗಣಿ ಸತ್ಯ ಪ್ರಸಾದ್, ತಮ್ಮ ಸಂಪುಟ ಸಹೋದ್ಯೋಗಿ ಮತ್ತು ಆಂಧ್ರಪ್ರದೇಶ ಗೃಹ ಸಚಿವೆ ವಂಗಲಪುಡಿ ಅನಿತಾ, ದತ್ತಿ ಇಲಾಖೆ ಸಚಿವ ಅನಮ್ ರಾಮನಾರಾಯಣ ರೆಡ್ಡಿ, ನೀರಾವರಿ ಸಚಿವರಾದ ನಿಮ್ಮಲ ರಾಮ ನಾಯ್ಡು ಮತ್ತು ಕೆ. ಪಾರ್ಥಸಾರಥಿ (ಐ&ಪಿಆರ್) ಅವರೊಂದಿಗೆ SVIMS ಆಸ್ಪತ್ರೆಗೆ ಭೇಟಿ ನೀಡಿ ಸರ್ಕಾರದ ಪರವಾಗಿ ಈ ಘೋಷಣೆ ಮಾಡಿದರು.

2ಎಫ್‌ಐಆರ್, ಇಬ್ಬರ ಅಮಾನತು, ಮೂವರ ವರ್ಗಾವಣೆ: ತಿರುಪತಿ ದೇವಸ್ಥಾನದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಆರು ಮಂದಿ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಎಫ್‌ಐಆರ್ ದಾಖಲಾಗಿದೆ. ನಡೆದಿರುವ ದುರಂತಕ್ಕೆ ಸೇರಿದ್ದ ಜನರನ್ನು ಬಲಿಪಶು ಮಾಡಲಾಗಿದೆ ಎಂಬ ಆರೋಪ ವ್ಯಕ್ತವಾಗುತ್ತಿದೆ. ಈ ಮಧ್ಯೆ ಸಿಎಂ ಚಂದ್ರಬಾಬು ನಾಯ್ಡು ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆ ಘೋಷಿಸಿದ್ದಾರೆ. ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ವಿಫಲರಾದ ಇಬ್ಬರು ಅಧಿಕಾರಿಗಳನ್ನು ಅಮಾನತು ಮಾಡಿ ಶಿಸ್ತು ಕ್ರಮ ಕೈಗೊಂಡಿದ್ದಾರೆ.

ಘಟನೆಗೆ ಸಂಬಂಧಿಸಿ ತಿರುಪತಿ ಪೂರ್ವ ವಿಭಾಗದ ಪೊಲೀಸರು ಎರಡು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. ಮೊದಲ ಪ್ರಕರಣದಲ್ಲಿ ತಮಿಳುನಾಡಿನ ಮೆಟ್ಟೂರು ಸೇಲಂ ಜಿಲ್ಲೆಯ ನಿವಾಸಿ ಆರ್.ಮಲ್ಲಿಗಾ(50) ವಿಷ್ಣು ನಿವಾಸಂನಲ್ಲಿ ಟೋಕನ್‌ಗಾಗಿ ಸರತಿ ಸಾಲಿನಲ್ಲಿ ನಿಂತಿದ್ದಾಗ ಕುಸಿದು ಬಿದ್ದಿದ್ದಾರೆ. ಭಕ್ತರ ನೂಕುನುಗ್ಗಲು ಉಂಟಾದಾಗ ಪ್ರಜ್ಞೆ ತಪ್ಪಿದ್ದಾರೆ ಎಂದು ಬಾಲಯ್ಯಪಲ್ಲಿ ಮಂಡಲದ ತಹಶೀಲ್ದಾರ್ ಪಿ.ಶ್ರೀನಿವಾಸುಲು ದೂರು ದಾಖಲಿಸಿದ್ದಾರೆ. ಪ್ರಜ್ಞೆ ತಪ್ಪಿದ ಅವರನ್ನು ಕೂಡಲೇ ವೆಂಕಟೇಶ್ವರ ರಾಮನಾರಾಯಣ್ ರುಯಿಯಾ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ ದಾರಿ ಮಧ್ಯೆ ಮೃತಪಟ್ಟಿದ್ದಾರೆ. ಸಾವಿಗೆ ಜನದಟ್ಟಣೆ ಹಾಗೂ ಸಂತ್ರಸ್ತೆಯ ಆರೋಗ್ಯ ಸ್ಥಿತಿ ಕಾರಣ ಎಂದು ದೂರಿನಲ್ಲಿ ಉಲ್ಲೇಖವಾಗಿದೆ ಎಂದು ವರದಿಯಾಗಿದೆ.

ನಾರಾಯಣವನಂ ಮಂಡಲದ ತಹಶೀಲ್ದಾರ್ ಎಂ.ಜಯರಾಮುಲು ದಾಖಲಿಸಿರುವ ದೂರಿನಲ್ಲಿ ಐದು ಜನರು ಸಾವನ್ನಪ್ಪಿರುವ ಬಗ್ಗೆ ಉಲ್ಲೇಖವಾಗಿದೆ. ಎರಡನೇ ಎಫ್‌ಐಆರ್‌ನಲ್ಲಿ ಮೃತಪಟ್ಟಿರುವ ಎಸ್.ಲಾವಣ್ಯ (38), ಗುದ್ದಲ ರಜಿನಿ (45), ಸಂತಿ (35), ಬೊಡ್ಡೆಟಿ ನಾಯ್ಡು ಬಾಬು (55) ಹಾಗೂ ನಿರ್ಮಲಾ ಹೆಸರು ದಾಖಲಾಗಿದೆ. ಇವರೆಲ್ಲ ರಾಮನಾಯ್ಡು ಶಾಲೆಯ ಬಳಿಯ ಪದ್ಮಾವತಿ ಪಾರ್ಕ್‌ನಲ್ಲಿ ವೈಕುಂಟ ದ್ವಾರ ದರ್ಶನ ಟೋಕನ್‌ಗಳಿಗಾಗಿ ಸರತಿ ಸಾಲಿನಲ್ಲಿ ನಿಂತಿದ್ದರು. ಆಗ ಜನದಟ್ಟಣೆ ಹೆಚ್ಚಿದ್ದು, ಕಾಲ್ತುಳಿತ ಸಂಭವಿಸಿದೆ ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

ಅರೆಕಾಲಿಕ ಉದ್ಯೋಗ: ಘಟನಾ ಸ್ಥಳಕ್ಕೆ ಭೇಟಿ ನೀಡಿ ಗಾಯಾಳುಗಳನ್ನು ಭೇಟಿ ಮಾಡಿದ ನಂತರ ಸಂಜೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿಎಂ ಚಂದ್ರಬಾಬು ನಾಯ್ಡು, ತಿರುಪತಿಯಲ್ಲಿನ ಮೇಲ್ವಿಚಾರಣಾ ವ್ಯವಸ್ಥೆಯಲ್ಲಿ ಕೆಲವು ಲೋಪ–ದೋಷಗಳನ್ನು ಗಮನಿಸಿದ್ದೇನೆ. ಪರಿಸ್ಥಿತಿ ನಿಭಾಯಿಸುವಲ್ಲಿ ವಿಫಲರಾದ ಇಬ್ಬರು ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ. ತಿರುಪತಿ ಎಸ್‌ಪಿ ಹಾಗೂ ಟಿಟಿಡಿ ಜಂಟಿ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಇನ್ನೊಬ್ಬ ಅಧಿಕಾರಿಯನ್ನು ವರ್ಗಾವಣೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಮೂರನೇ ಪುಟದಿಂದ

ಜ.30ರವರೆಗೆ ನ್ಯಾಯಾಂಗ ಬಂಧನ

ಮುಂಡಗಾರು ಲತಾ, ಸುಂದರಿ ಕುತ್ಲೂರು, ವನಜಾಕ್ಷಿ ಬಾಳೆಹೊಳೆ, ಮಾರೆಪ್ಪ ಅರೋಲಿ, ವಸಂತ ಟಿ.ಎನ್, ಜಿಶಾ ಎಲ್ಲರನ್ನೂ ಎನ್‌ಐಎ ಕೋರ್ಟ್ ಮುಂದೆ ಹಾಜರು ಪಡಿಸಲಾಯಿತು. ಕೋರ್ಟ್‌ಗೆ ಹಾಜರು ಪಡಿಸುವ ಮೊದಲು ನಕ್ಸಲ್ ನಿಗ್ರಹ ದಳ ಆರೋಪಿಗಳಿಂದ ಹೇಳಿಕೆ ದಾಖಲಿಸಿಕೊಳ್ಳಲಾಯಿತು. ಶಸ್ತ್ರಾಸ್ತ್ರಗಳ ಬಗ್ಗೆಯೂ ಸಾಕ್ಷ್ಯ ಕಲೆ ಹಾಕಿತು. ಕೊನೆಗೆ ನಕ್ಸಲರನ್ನು ಕೋರ್ಟ್‌ಗೆ ಚಿಕ್ಕಮಗಳೂರು ಪೊಲೀಸರು ಹಾಜರು ಪಡಿಸಿದರು. ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿರುವ ಎನ್‌ಐಎ ಕೋರ್ಟ್‌ನ ನ್ಯಾಯಾಧೀಶ ಗಂಗಾಧರ್ ಅವರ ಮುಂದೆ ಎಲ್ಲರನ್ನೂ ಹಾಜರು ಪಡಿಸಲಾಯಿತು. ನ್ಯಾಯಾಧೀಶರ ಮುಂದೆ ಒಬ್ಬೊಬ್ಬರಾಗಿ ತಮ್ಮ ಕುರಿತು ಮಾಹಿತಿ ನೀಡಿದರು. ಕೋರ್ಟ್‌ನಲ್ಲಿ ನಕ್ಸಲರಿಂದ ವಕಾಲತು ಪ್ರತಿಗೆ ವಕೀಲರು ಸಹಿ ಪಡೆದರು. ತಮ್ಮ ಕೇಸ್ ನಡೆಸಲು ನಕ್ಸಲರು ವಕೀಲರನ್ನು ನೇಮಕ ಮಾಡಿಕೊಂಡರು. ಅಂತಿಮವಾಗಿ ಕೋರ್ಟ್ ಎಲ್ಲ ನಕ್ಸಲರಿಗೂ ಜ.30 ರವರೆಗೆ ನ್ಯಾಯಾಂಗ ಬಂಧನ ವಿಧಿಸಿ, ಆದೇಶ ಹೊರಡಿಸಿದೆ.

ಅಡ್ಡಿಯಾಗಿರುವ ರವೀಂದ್ರ ನಾಯ್ಕ!

ಸುಮಾರು 38 ಪ್ರಕರಣಗಳು ದಾಖಲಾಗಿವೆ. ಇದಲ್ಲದೆ ಹೊರ ರಾಜ್ಯಗಳಲ್ಲೂ ಪ್ರಕರಣಗಳಿವೆ ಎನ್ನಲಾಗಿದೆ.


ನಕ್ಸಲ್ ಮುಕ್ತ ರಾಜ್ಯ ಎನ್ನುವ ಅಧಿಕೃತ ಘೋಷಣೆ ಹೊರಬೀಳಲು ಅಡ್ಡಿಯಾಗಿರುವ ಕೊನೆಯ ಹೆಸರು ಈಗ ರವೀಂದ್ರ ನಾಯ್ಕನದ್ದಾಗಿದ್ದು, ಆತನನ್ನು ಹೇಗಾದರೂ ಮಾಡಿ ಮನವೊಲಿಸಬೇಕು ಎಂಬ ಶಾಂತಿಗಾಗಿ ನಾಗರೀಕ ವೇದಿಕೆಯ ಪ್ರಯತ್ನಗಳು ಫಲ ನೀಡಲಿಲ್ಲ. ಆತ ಬೇರಾವುದೋ ರಾಜ್ಯದಲ್ಲಿ ಭೂಗತನಾಗಿದ್ದಾನೆ ಎಂದು ಕೆಲವರು ಹೇಳಿದರೆ, ಆತ ವೇದಿಕೆಯ ಸಂಪರ್ಕದಲ್ಲೇ ಇದ್ದಾನೆ ಸದ್ಯದಲ್ಲೇ ಮನವೊಲಿಸಲಾಗುವುದು ಎಂದು ಮತ್ತೇ ಕೆಲವರು ಹೇಳುತ್ತಿದ್ದಾರೆ.

ಕಳೆದ 18 ವರ್ಷಗಳ ಹಿಂದೆ ನಕ್ಸಲ್ ಸಂಘಟನೆ ಸೇರಿಕೊಂಡಿದ್ದ ರವೀಂದ್ರ ನಾಯ್ಕ ಈಗ ಶರಣಾಗತಿ ಹೊಂದಿರುವ ಆರು ಜನರಿಗಿಂತಲೂ ಕಿರಿಯ ಎನ್ನಲಾಗುತ್ತಿದೆ. ಇನ್ನೂ ಹೋರಾಟದ ಕಿಚ್ಚು ಇರುವುದರಿಂದ ಆತ ಶರಣಾಗತಿಗೆ ಒಪ್ಪುತ್ತಿಲ್ಲ ಎಂದು ಮೂಲವೊಂದು ತಿಳಿಸಿದೆ. ಅಳಿದುಳಿದ ಒಬ್ಬನೇ ನಕ್ಸಲ್‌ನನ್ನು ಪತ್ತೆಹಚ್ಚಿ ಸಂಪೂರ್ಣ ನಕ್ಸಲ್ ಮುಕ್ತರಾಜ್ಯ ಎಂಬ ಗರಿಮೆ ಪಡೆದುಕೊಳ್ಳಬೇಕಾಗಿರುವುದರಿಂದ ಪೊಲೀಸ್ ಅಧಿಕಾರಿಗಳು, ಗುಪ್ತಚರ ಇಲಾಖೆ ಸಿಬ್ಬಂದಿಗಳ ಮೇಲೆ ಈಗ ಸಹಜವಾಗಿ ಒತ್ತಡ ಹೆಚ್ಚಾಗಿದೆ.

ನಾವೀಗ ಸತ್ಯಕ್ಕೆ ಸಾಕ್ಷಿ ಕೇಳುವ ಕಾಲದಲ್ಲಿದ್ದೇವೆ

● ನಾಡಿನ ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ವಿಷಾದ ● ಕುವೆಂಪು 121ನೇ ಜನ್ಮ ದಿನೋತ್ಸವ ವಿಶ್ವ ಮಾನವ ದಿನಾಚರಣೆ
● ತಂತ್ರಜ್ಞಾನ ತತ್ವಜ್ಞಾನವನ್ನೇ; ವಿವೇಕವನ್ನು ಅವಿವೇಕ; ಸತ್ಯವನ್ನು ಅಸತ್ಯ ನುಂಗುತ್ತಿವೆ! ● ಆಧುನಿಕ ಬಿಕ್ಕಟ್ಟಿಗೆ ಕುವೆಂಪು ಸಾಹಿತ್ಯದಲ್ಲಿ ಪರಿಹಾರವಿದೆ

ಮೈಸೂರು, ಜ.9(ಎಂಟಿವೈ)– ಪ್ರಸ್ತುತ ಸಂದರ್ಭದಲ್ಲಿ ತಂತ್ರಜ್ಞಾನ ತತ್ವಜ್ಞಾನವನ್ನು ನುಂಗಿ ಹಾಕುತ್ತಿರುವಂತೆ ವಿವೇಕದ ಜಾಗವನ್ನು ಅವಿವೇಕ, ಸತ್ಯದ ಜಾಗವನ್ನು ಅಸತ್ಯ ಆವರಿಸುತ್ತಿದೆ ಎಂದು ನಾಡಿನ ಹಿರಿಯ ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪ ವಿಷಾದಿಸಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಗುರುವಾರ ಆಯೋಜಿಸಿದ್ದ ಕುವೆಂಪು ಅವರ 121ನೇ ಜನ್ಮದಿನೋತ್ಸವ ಹಾಗೂ ವಿಶ್ವಮಾನವ ದಿನಾಚರಣೆಯನ್ನು ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪ ಉದ್ಘಾಟಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಗುರುವಾರ ಆಯೋಜಿಸಿದ್ದ ಕುವೆಂಪು ಅವರ 121ನೇ ಜನ್ಮದಿನೋತ್ಸವ ವಿಶ್ವಮಾನವ ದಿನಾಚರಣೆ ಉದ್ಘಾಟಿಸಿ, ಕುವೆಂಪು ಸಾಹಿತ್ಯ ಸಾಂಸ್ಕೃತಿಕ ಬಹುತ್ವ ವಿಷಯ ಕುರಿತು ಮಾತನಾಡಿದ ಅವರು, ಇಂದು ಸತ್ಯಕ್ಕೆ ಸಾಕ್ಷಿ ಕೇಳುವ ಕಾಲದಲ್ಲಿರುವುದು ಅತ್ಯಂತ ದಾರುಣ ಸಂಗತಿ. ತಂತ್ರಜ್ಞಾನವೇ ತತ್ವಜ್ಞಾನ ನುಂಗಿಹಾಕಬಾರದು. ಇಂದು ತಂತ್ರವು ಜ್ಞಾನವನ್ನು ಕಳೆದು ಹಾಕಿದೆ. ನಾವು ಸಾಮಾಜಿಕ ತತ್ವಜ್ಞಾನ ಎಷ್ಟರ ಮಟ್ಟಿಗೆ ಅನುಷ್ಠಾನಗೊಳಿಸಿದ್ದೇವೆ ಎಂದು ಆಲೋಚಿಸಬೇಕಾಗಿದೆ. ವಿವೇಕದ ಜಾಗವನ್ನು ಅವಿವೇಕ, ಸತ್ಯದ ಜಾಗವನ್ನು ಅಸತ್ಯ, ಮಾನವೀಯತೆ ಜಾಗವನ್ನು ಮತೀಯತೆ, ನಂಬಿಕೆಯ ಜಾಗವನ್ನು ಮೂಢನಂಬಿಕೆ ಆವರಿಸುತ್ತಿರುವುದು ತಲೆ ತಗ್ಗಿಸುವ ಸಂಗತಿ. ಇದರಿಂದ ನಿಜ ವ್ಯಾಖ್ಯಾನ ಅಪವ್ಯಾಖ್ಯಾನವಾಗುತ್ತಿದೆ. ಪ್ರಜಾಸತ್ತಾತ್ಮಕ ಬಿಕ್ಕಟ್ಟು ಎದುರಿಸುವಂತ ಸ್ಥಿತಿ ನಿರ್ಮಾಣವಾಗಿದೆ ಎಂದರು.

ಭಯೋತ್ಪಾದನೆ, ಯುದ್ಧೋತ್ಪಾದನೆ, ಮಕ್ಕಳ ಹತ್ಯೆ, ದ್ವೇಷ ಉತ್ಪಾದನೆಯ ಕಾಲದಲ್ಲಿದ್ದೇವೆ. ಕುವೆಂಪು ಅವರ ಸರ್ವಜನಾಂಗದ ಶಾಂತಿಯ ತೋಟ ಇಲ್ಲದಿರುವುದು ದುರಂತ. ಭಾವಾತಿರೇಕವಾದರೆ ದುರುಪಯೋಗವಾಗುತ್ತದೆ. ವರ್ತಮಾನದಲ್ಲಿ ಎರಡು ಶಕ್ತಿಗಳಾದ ಪುರೋಹಿತಶಾಹಿ ಮತ್ತು ಬಂಡವಾಳಶಾಹಿಗಳು ಜಾಗೃತವಾಗಿವೆ. ಸರ್ವರಿಗೂ ಸಮಬಾಳು ಆಶಯಕೊಟ್ಟ ಕುವೆಂಪು ಅವರು ನಮಗೇ ಮುಖ್ಯರಾಗುತ್ತಾರೆ. ಪ್ರಸ್ತುತ ಸಮಾಜದಲ್ಲಿ ಬದಲಾಗದ ಸಾಧ್ಯತೆಗಳು, ಅನೇಕ ಬಿಕ್ಕಟ್ಟು ಎದುರಿಸುತ್ತಿದೆ. ಶತಮಾನಗಳ ದಾಟಿದರೂ ಮುನ್ನಡೆ ಹಿನ್ನಡೆಯಲ್ಲಿರುವಾಗ ನಮಗೇ ಕುವೆಂಪು ಪ್ರಸ್ತುತರಾಗುತ್ತಾರೆ. ಅವರ ಸಾಹಿತ್ಯದಲ್ಲಿ ವರ್ತಮಾನದ ಅನೇಕ ವೈರುಧ್ಯಗಳಿಗೆ ಉತ್ತರವಿದೆ ಎಂದರು.

ಕುವೆಂಪು ಅವರಿಗೆ ರಾಷ್ಟ್ರಕವಿ ಮನ್ನಣೆ ಸರ್ಕಾರ ಕೊಟ್ಟಿದ್ದು, ನಾವು ವಿಶ್ವಕವಿ ಎಂದು ಕರೆಯುತ್ತೇವೆ. ಅವರ ಇಡೀ ಸಾಹಿತ್ಯ ಓದಿದರೆ ಸ್ಥಳೀಯತೆ, ರಾಷ್ಟ್ರೀಯತೆ, ಅಂತಾರಾಷ್ಟ್ರೀಯತೆ ಇದೆ. ಏಕಕಾಲಕ್ಕೆ ರಾಷ್ಟ್ರೀಯ ಅಂತಾರಾಷ್ಟ್ರೀಯ ಆಗಬಹುದಾದ ವಿಚಾರ ಕೊಟ್ಟವರು ಕುವೆಂಪು. ಈಗ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಧಾರವಾಡದಲ್ಲಿ 1957ರಲ್ಲಿ ನಡೆದ 37ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕುವೆಂಪು ಒಕ್ಕೂಟ ವ್ಯವಸ್ಥೆಯನ್ನು ತಾಯಿ–ಮಗಳ ಸಂಬಂಧಕ್ಕೆ ಹೋಲಿಸುತ್ತಾರೆ. ಭಾರತೀಯರಾಗದೇ ಕನ್ನಡಿಗರಾಗುವುದಿಲ್ಲ ಎನ್ನುವ ಕುವೆಂಪು ಅವರು, ಕರ್ನಾಟಕದ ಮುನ್ನಡೆಯಾಗದೇ ಭಾರತ ಮುನ್ನಡೆಯಾಗದು ಎಂದು ಎಚ್ಚರಿಸುತ್ತಾರೆ.

ಕುವೆಂಪು ಅವರನ್ನು ಬ್ರಾಹ್ಮಣ ದ್ವೇಷಿ ಎನ್ನುತ್ತಾರೆ. ಆದರೆ, ಕುವೆಂಪು ಯಾವ ಧರ್ಮ, ಜಾತಿಯ ಬಗೆಗೂ ದ್ವೇಷ ಇರಲಿಲ್ಲ. ಬ್ರಾಹ್ಮಣರಾದ ರಾಮಕೃಷ್ಣ ಪರಮಹಂಸರನ್ನು ತಮ್ಮ ಗುರುಗಳಾಗಿ ಸ್ವೀಕರಿಸಿದ್ದರು. ಶ್ರೀರಾಮಾಯಣ ದರ್ಶನಂ ಕೃತಿಯನ್ನು ಗುರುಗಳಾದ ವೆಂಕಣ್ಣಯ್ಯ ಅವರಿಗೆ ಅರ್ಪಿಸಿದ್ದಾರೆ. ವರಕವಿ ಬೇಂದ್ರೆ ಅವರು ಕುವೆಂಪು ಜಗದ ಕವಿ ಯುಗದ ಕವಿ ಎಂದು ಕರೆದಿದ್ದಾರೆ ಎಂದರು.

ಸಭೆಯ ಆರಂಭದಲ್ಲಿ ಕುವೆಂಪು ಚಿತ್ರಕೂಟ ಉದ್ಘಾಟನೆ, ಮತ್ತೆ ಮತ್ತೆ ಕುವೆಂಪು ಪುಸ್ತಕ ಲೋಕಾರ್ಪಣೆ, ನಾಡಗೀತೆ ಶತಮಾನೋತ್ಸವ ಸಂಭ್ರಮ: ರೂಪಕ ಪ್ರದರ್ಶನ, ಕೂಡಲಿ ಚಿದಂಬರಂ ಸ್ಮರಣಾರ್ಥ: ಕುವೆಂಪು ಪುಸ್ತಕಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ ಲೋಕನಾಥ್ ವಹಿಸಿದ್ದರು. ವಿಶ್ರಾಂತ ಕುಲಪತಿ ಪ್ರೊ.ಚಿದಾನಂದ ಗೌಡ, ಕುವೆಂಪು ಅವರ ಪುತ್ರಿ ತಾರಿಣಿ ಚಿದಾನಂದ ಗೌಡ, ಬೆಂಗಳೂರಿನ ಎಂ.ಚಂದ್ರಶೇಖರ ಪ್ರತಿಷ್ಠಾನದ ಸದಸ್ಯ ಕಾರ್ಯದರ್ಶಿ ಎಂ.ಸಿ. ನರೇಂದ್ರ, ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ. ಲೋಲಾಕ್ಷಿ ಉಪಸ್ಥಿತರಿದ್ದರು. ಪ್ರಸಾರಾಂಗದ ನಿರ್ದೇಶಕ ಡಾ.ನಂಜಯ್ಯ ಹೊಂಗನೂರು ಸ್ವಾಗತಿಸಿದರು. ಡಾ.ಯೋಗೇಶ, ಪೂಜಿತಾ ಪಿ.ಎಲ್. ನಿರೂಪಿಸಿದರು. ಶೇಷಣ್ಣ ಮತ್ತು ತಂಡದವರು ಕುವೆಂಪು ಗೀತ ಗಾಯನ ಪ್ರಸ್ತುತಪಡಿಸಿದರು.

ನಾಮಪತ್ರ ಸಲ್ಲಿಕೆ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಗೆ ಹಿಂದುಳಿದ ವರ್ಗದಿಂದ ಎಸ್.ಆರ್. ರವಿಕುಮಾರ್ ನಾಮಪತ್ರ ಸಲ್ಲಿಸಿದರು. ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಎಸ್‌ಬಿಎಂ ಮಂಜು, ಸಿಟಿ ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಪಡುವಾರಹಳ್ಳಿ ಶಿವು, ಚಿಕ್ಕಾಳ, ರಾಮಚುದ್ರಣ್ಣ ಕೃಷ್ಣಕುಮಾರ್, ಶಿವಾಂ, ವಸಂತ ಮುನೀಶ್, ಛಾಯಮ್ಮ ನಾಗರಾಜು, ಅಭಿ, ಅರುಣಾ ಇದ್ದರು.

'ಮುದುಕನ ಮದುವೆ' ಹಾಸ್ಯ ನಾಟಕ



'ಮುದುಕನ ಮದುವೆ' ನಾಟಕ ಪ್ರದರ್ಶನ ವೇಳೆ ಕಲಾವಿದ ವಿ.ಮಂಜು ಅವರನ್ನು ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ಸನ್ಮಾನಿಸಿದರು.

ಮೈಸೂರು, ಜ.9(ಎಂಕೆ)– ನಗರದ ಪುರಭವನದಲ್ಲಿ ದಿವಂಗತ ಪಿ.ಬಿ.ರೈ ಬೆಳ್ಳಾರೆ ಸ್ಮರಣಾರ್ಥ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಮಂಗಳೂರಿನ ಶ್ರೀ ನಂದಿಕೇಶ್ವರ ನಾಟಕ ಸಂಘದ ವತಿಯಿಂದ 'ಮುದುಕನ ಮದುವೆ' ಹಾಸ್ಯ ನಾಟಕ ಪ್ರದರ್ಶನಗೊಂಡಿತು.

ಕಲಾವಿದರಾದ ಬಿ.ಮಲ್ಲಿಕಾರ್ಜುನ (ಹೊಸದುರ್ಗ), ಯಶಸ್ವಿನಿ ಲೋಕೇಶ್ವರ(ಮಂಡ್ಯ), ಶರತ್ ತಾಲೂರು (ಬಳ್ಳಾರಿ), ಜಯರಾಮ್ (ಮಂಡ್ಯ), ಮಂಗಳೂರು ಮೀನನಾಥ್ (ರಾಘವೇಂದ್ರ ರೈ), ಮಹೇಶ್ವರಿ ಗಣೇಶ್ (ಬೆಂಗಳೂರು), ಚೈತ್ರ(ಮೈಸೂರು), ಹೆಲನ್(ಮೈಸೂರು) ಮತ್ತು ಶೋಭಾ ರೈ(ಮಂಗಳೂರು) ಉತ್ತಮ ಪ್ರದರ್ಶನ ನೀಡಿ, ನಾಟಕ ಪ್ರಿಯರ ಮನತಣಿಸಿದರು.

ಇದಕ್ಕೂ ಮುನ್ನ ಶ್ರೀ ಯೋಗನರಸಿಂಹ ಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ನಾಟಕ ಪ್ರದರ್ಶನ ಉದ್ಘಾಟಿಸಿ, ಕಲಾವಿದರನ್ನು ಅಭಿನಂದಿಸಿದರು. ನಂತರ ರಂಗಭೂಮಿ ಕಲಾವಿದ ವಿ.ಮಂಜು ಅವರನ್ನು ಸನ್ಮಾನಿಸಲಾಯಿತು. ಹಿರಿಯ ಕಲಾವಿದ ರಾಮೇಗೌಡ, ಎಸ್.ಎಸ್.ಪುಟ್ಟೇಗೌಡ ಮತ್ತಿತರರಿದ್ದರು.

ಸಾವಿತ್ರಿಬಾಯಿ ಫುಲೆ ಜನ್ಮದಿನದ ಹಿನ್ನೆಲೆ

ಮಹಿಳಾ ಶಿಕ್ಷಣ, ಉದ್ಯೋಗ, ಆರೋಗ್ಯ ಕುರಿತು ಜಾಗೃತಿ ಅಭಿಯಾನ

ಮೈಸೂರು, ಜ.9(ಎಂಕೆ)– ನಗರದ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎಐಎಂಎಸ್‌ಎಸ್) ವತಿಯಿಂದ ಸಾವಿತ್ರಿಬಾಯಿ ಫುಲೆ ಜನ್ಮದಿನದ ಅಂಗವಾಗಿ ಜ.18ರವರೆಗೆ ಹಮ್ಮಿಕೊಂಡಿರುವ ಮಹಿಳಾ ಶಿಕ್ಷಣ, ಉದ್ಯೋಗ, ಆರೋಗ್ಯ, ಭದ್ರತೆ ಕುರಿತ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಲಾಯಿತು.



ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಎಐಎಂಎಸ್‌ಎಸ್ ವತಿಯಿಂದ ಸಾವಿತ್ರಿಬಾಯಿ ಫುಲೆ ಜನ್ಮದಿನ ಆಚರಿಸಲಾಯಿತು.

ಎಐಎಂಎಸ್‌ಎಸ್‌ನ ಜಿಲ್ಲಾಧ್ಯಕ್ಷೆ ನಳಿನಾ, ಸಾವಿತ್ರಿಬಾಯಿ ಫುಲೆ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿ, ಸ್ವಶಿಕ್ಷಣದಿಂದ ಮಾತ್ರ ಅರಿವು ಸಾಧ್ಯ, ಅರಿವಿನಿಂದ ಮಾತ್ರ ಕ್ರಿಯೆ ಸಾಧ್ಯ, ಕ್ರಿಯೆಯಿಂದ ಮಾತ್ರ ಬದಲಾವಣೆ ಸಾಧ್ಯ ಎಂದು ಭಾರತದಲ್ಲಿ ಮಹಿಳಾ ಶಿಕ್ಷಣದ ರೂವಾರಿಯಾದ ಧೀಮಂತ ಮಹಿಳೆ ಸಾವಿತ್ರಿಬಾಯಿ ಫುಲೆ ಅವರ ಆದರ್ಶಗಳನ್ನು ಇವತ್ತಿನ ಮಹಿಳಾ ಸಮೂಹ ಮೈಗೂಡಿಸಿಕೊಳ್ಳಬೇಕಿದೆ ಎಂದರು.

ಕಾರ್ಯದರ್ಶಿ ಆಸಿಯಾ ಬೇಗಂ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಹೆಣ್ಣು ಮಕ್ಕಳಲ್ಲಿ ಸಾಂಸ್ಕೃತಿಕ ಮನೋಭಾವ, ಧೈರ್ಯ ಕಡಿಮೆಯಾಗುತ್ತಿದೆ. ಈ ನಿಟ್ಟಿನಲ್ಲಿ ಸಾವಿತ್ರಿಬಾಯಿ ಫುಲೆ ಅವರ ಜನ್ಮದಿನ ಅಂಗವಾಗಿ ಸಾವಿತ್ರಿಬಾಯಿ ಫುಲೆ ಅವರ ಜೀವನ ಕುರಿತ ಪುಸ್ತಕಗಳು ಹಾಗೂ ಕರಪತ್ರಗಳ ವಿತರಣೆ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. 15 ದಿನಗಳ ಕಾಲ ಕಾಲೇಜುಗಳು ಹಾಗೂ ನಗರದ ವಿವಿಧ ಬಡಾವಣೆಗಳು, ಉದ್ಯಾವನಗಳಲ್ಲಿ ವಿತರಣೆ ಹಾಗೂ ಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು. ಇದೇ ವೇಳೆ ಕುಕ್ಕರಹಳ್ಳಿ ಕೆರೆ ವಾಯುವಿಹಾರಕ್ಕೆ ಆಗಮಿಸುವವರಿಗೆ ಕರಪತ್ರಗಳು ಹಾಗೂ ಪುಸ್ತಕಗಳನ್ನು ವಿತರಣೆ ಮಾಡಲಾಯಿತು. ಸಂಘಟನೆ ಉಪಾಧ್ಯಕ್ಷೆ ಶೀಬಾ, ಸದಸ್ಯೆ ಸ್ನೇಹಾ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜ.9– ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಜ.10 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ನಾಡನಹಳ್ಳಿ, ವಸಂತನಗರ, ಪ್ರಕೃತಿ ಬಡಾವಣೆ, ಜೆ.ಎಸ್.ಎಸ್ ಬಡಾವಣೆ 2ನೇ ಹಂತ, ಪೊಲೀಸ್ ಬಡಾವಣೆ 3ನೇ ಹಂತ, ಯಾಂದಹಳ್ಳಿ, ಶಾಂತವೇರಿ ಗೋಪಾಲಗೌಡನಗರ, ಲಾಲ್ ಬಹದ್ದೂರ್ ಶಾಸ್ತ್ರಿನಗರ, ಬಿ.ವಿ.ಎಲ್ ಪ್ರೀಮಿಯೊ ಬಡಾವಣೆ, ಸಪ್ತಮಾತೃಕ ಬಡಾವಣೆ, ಸುಖದಾಯಿ ಬಡಾವಣೆ, ವಿ.ಟಿ.ಯು ಪ್ರಾದೇಶಿಕ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ಎಫ್.ಟಿ.ಎಸ್ ವಿದ್ಯುತ್ ವಿತರಣಾ ಕೇಂದ್ರದ ದೊಡ್ಡ ಒಕ್ಕಲಿಗರ ಬೀದಿ, ಇರ್ವಿನ್ ರಸ್ತೆ, ಗಾಂಧಿ ಸ್ಕ್ವೇರ್ ವೃತ್ತದ ಸುತ್ತ–ಮುತ್ತ, ಕೆ.ಟಿ ಸ್ಟ್ರೀಟ್, ಕೆ.ಆರ್ ಆಸ್ಪತ್ರೆ ರಸ್ತೆ, ಈದ್ಗಾ ಎಕ್ಸ್‌ಟೆನ್ಷನ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಬೆಂಗಳೂರಲ್ಲಿ ಜ.18-19ರಂದು ಬ್ರಾಹ್ಮಣ ಮಹಾ ಸಮ್ಮೇಳನ

ಮೈಸೂರು ಭಾಗದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿಪ್ರರು ಭಾಗವಹಿಸಲು ಸ್ಥಳೀಯ ಮುಖಂಡರ ಮನವಿ

ಸಮುದಾಯ ಪರ ಹಕ್ಕೊತ್ತಾಯ ಮಂಡಿಸಿ ಸರ್ಕಾರಗಳ ಗಮನ ಸೆಳೆಯಲು ಒಗ್ಗಟ್ಟು ಪ್ರದರ್ಶಿಸಲು ನಿರ್ಣಯ

ಮೈಸೂರು,ಜ.9(ಪಿಎಂ)– ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಜ.18 ಮತ್ತು 19ರಂದು ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವ ಮಹಾಸಭಾದ ಸುವರ್ಣ ಸಂಭ್ರಮ ಮತ್ತು ಬ್ರಾಹ್ಮಣ ಮಹಾ ಸಮ್ಮೇಳನದಲ್ಲಿ ವಿಪ್ರ ಸಮುದಾಯದ ಶ್ರೇಯೋಭಿವೃದ್ಧಿ ಸಂಬಂಧ ಹಕ್ಕೊತ್ತಾಯ ಮಂಡಿಸಿ ಸರ್ಕಾರಗಳ ಗಮನ ಸೆಳೆಯಲಾಗುತ್ತಿದ್ದು, ಹೀಗಾಗಿ ಸಮ್ಮೇಳನದಲ್ಲಿ ಮೈಸೂರು ಭಾಗದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿಪ್ರರು ಪಾಲ್ಗೊಳ್ಳಬೇಕೆಂದು ಸಮುದಾಯದ ಮುಖಂಡರು ಕೋರಿದರು.



ಪೂರ್ವಭಾವಿ ಸಭೆಯಲ್ಲಿ ವಿಪ್ರ ಮುಖಂಡರು ಬ್ರಾಹ್ಮಣ ಮಹಾ ಸಮ್ಮೇಳನದ ಪೋಸ್ಟರ್ ಪ್ರದರ್ಶಿಸಿದರು.

ಮೈಸೂರಿನ ಚಾಮುಂಡಿಪುರಂನ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಸಮ್ಮೇಳನದ ಪೂರ್ವಭಾವಿ ಸಭೆ ಮತ್ತು ವಿಪ್ರ ಸಂಘಟನಾ ಸಭೆಯಲ್ಲಿ ಮಾತನಾಡಿದ ಸಮುದಾಯದ ಮುಖಂಡರು, ಮೈಸೂರು ನಗರ ಮತ್ತು ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿಪ್ರರು ಸಮ್ಮೇಳನದಲ್ಲಿ ಭಾಗವಹಿಸಬೇಕೆಂದು ವಿನಂತಿಸಿದರು.

ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್‌ಪ್ರಸಾದ್ ಮಾತನಾಡಿ, ವಿಪ್ರರ ಶ್ರೇಯೋಭಿವೃದ್ಧಿಗೆ ಸರ್ಕಾರಗಳಿಂದ ಇನ್ನು ಸಾಕಷ್ಟು ಯೋಜನೆಗಳು ಜಾರಿಯಾಗಬೇಕಿದೆ. ಸಮುದಾಯದ ಬಹುತೇಕ ಯುವಜನರು ನಿರುದ್ಯೋಗ ಸಮಸ್ಯೆಯಲ್ಲಿ ಸಿಲುಕಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಸಂಖ್ಯೆಯೂ ಕಡಿಮೆ ಇಲ್ಲ. ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದವರಿಗೆ ನೀಡುವ ಶೇ.10ರಷ್ಟು ಮೀಸಲಾತಿ ಜಾರಿ ಸಮರ್ಪಕವಾಗಿ ಆಗುತ್ತಿಲ್ಲ. ಈ ಎಲ್ಲದರ ಹಿನ್ನೆಲೆಯಲ್ಲಿ ಹಲವು ಹಕ್ಕೊತ್ತಾಯಗಳನ್ನು ಸಮ್ಮೇಳನದಲ್ಲಿ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಸಮುದಾಯದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಯಾವುದೇ ಕೆಲಸ ಕಾರ್ಯಗಳು ಇದ್ದರೂ ಮುಂದೂಡಿ ಸಮ್ಮೇಳನದಲ್ಲಿ ಹಾಜರಿದ್ದು, ಸಮುದಾಯ ಒಗ್ಗಟ್ಟು ಮತ್ತು ಶಕ್ತಿ ಪ್ರದರ್ಶನ ಮಾಡಬೇಕು ಎಂದು ಕೋರಿದರು.

ಹೀಗಾಗಿ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಸಮುದಾಯದವರಲ್ಲಿ ಜಾಗೃತಿ ಮೂಡಿಸಬೇಕಿದೆ. ಇಂದು ದೇಶ ಮತ್ತು ರಾಜ್ಯದಲ್ಲಿ ಅನೇಕ ಜಾತಿಗಳು ಸಂಘಟನೆಗೊಂಡು ಸರ್ಕಾರಕ್ಕೆ ತಮ್ಮ ಹಕ್ಕೊತ್ತಾಯ ಮಂಡಿಸುತ್ತಿವೆ. ಅಂತೆಯೇ ನಮ್ಮ ಸಮುದಾಯವೂ ಸಂಘಟನೆಯಾಗಿ ಸರ್ಕಾರದ ಗಮನ ಸೆಳೆಯಬೇಕಿದೆ ಸಮ್ಮೇಳನಕ್ಕೆ ತೆರಳಲು ವಾಹನಗಳ ವ್ಯವಸ್ಥೆ ಮಾಡಲಾಗುತ್ತಿದೆ. ಸಮಾಜದವರು ಇದರ ಸದುಪಯೋಗ ಪಡೆಯಬೇಕೆಂದು ವಿನಂತಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷನು.ಶ್ರೀಕಂಠ ಕುಮಾರ್ ಮಾತನಾಡಿ, 1974ರಲ್ಲಿ ಮಹಾಸಭಾ ಸ್ಥಾಪನೆಯಾಯಿತು. ಇದೀಗ 50 ವರ್ಷಗಳನ್ನು ಪೂರೈಸಿರುವ ಸಂತಸದ ಘಟ್ಟದಲ್ಲಿದ್ದೇವೆ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಈಗಾಗಲೇ 10 ಸಮ್ಮೇಳನಗಳು ನಡೆದಿವೆ. ಆ ಮೂಲಕ ಸಮುದಾಯದ ಶ್ರೇಯೋಭಿವೃದ್ಧಿಗೆ ಮಹಾಸಭಾ ಆರಂಭದಿಂದಲೂ ಶ್ರಮಿಸಿದೆ ಮಹಾಸಭಾದ ಅಡಿಯಲ್ಲಿ 600ಕ್ಕೂ ಹೆಚ್ಚು ಅಂಗಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಮಹಾಸಭಾದಲ್ಲಿ 80 ಸಾವಿರ ಅಜೀವ ಸದಸ್ಯರು ಇದ್ದು, ಮೈಸೂರು ಜಿಲ್ಲೆಯಲ್ಲಿ 5 ಸಾವಿರ ಸದಸ್ಯರಿದ್ದಾರೆ. ಬೆಂಗಳೂರಿನಲ್ಲಿ ನಡೆಯುತ್ತಿರುವ ಸಮ್ಮೇಳನದಲ್ಲಿ ಮೈಸೂರಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿಪ್ರರು ಭಾಗವಹಿಸಬೇಕೆಂದು ಕೋರಿದರು.

ಮಹಾಸಭಾದ ಮತ್ತೊಬ್ಬ ರಾಜ್ಯ ಉಪಾಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ತನುಮನ ಧನ ಸಹಾಯದೊಂದಿಗೆ ಸಮುದಾಯ ಸಮ್ಮೇಳನದಲ್ಲಿ ಭಾಗಿಯಾಗಬೇಕು. ಸಮಾಜದ ಸಮ್ಮೇಳನ ಎಂಬ ಅಭಿಮಾನ ಹೊಂದಬೇಕು. ಕುಟುಂಬದಲ್ಲಿ ಕೇವಲ ಒಬ್ಬರು ಇಬ್ಬರಷ್ಟೇ ಪಾಲ್ಗೊಂಡರೆ ಸಾಲದು, ಇಡೀ ಕುಟುಂಬವೇ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಆದ್ಯತೆ ನೀಡಬೇಕು. ಆ ಮೂಲಕ ಸಮುದಾಯದ ಶಕ್ತಿ ಪ್ರದರ್ಶನವಾಗಬೇಕು. ರಾಷ್ಟ್ರಾದ್ಯಂತ ಇರುವ ನಮ್ಮ ಸಮುದಾಯದ ಜನಪ್ರತಿನಿಧಿಗಳನ್ನು ಸಮ್ಮೇಳನಕ್ಕೆ ಆಹ್ವಾನಿಸಲಾಗುತ್ತಿದೆ. ಸಣ್ಣಪುಟ್ಟ ಭಿನ್ನಾಭಿಪ್ರಾಯ ಬದಿಗೊತ್ತಿ ಇಡೀ ಸಮುದಾಯ ಒಗ್ಗಟ್ಟಿನಿಂದ ಸಮ್ಮೇಳನಕ್ಕೆ ಬರಬೇಕು ಎಂದರು.

ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್ ಮಾತನಾಡಿ, ಮಹಾಸಭಾದ ಸುವರ್ಣ ಸಂಭ್ರಮದಲ್ಲಿ ಭಾಗವಹಿಸಲು ಸುವರ್ಣಾವಕಾಶ ಬಂದಿದ್ದು, ಇದನ್ನು ಸಮುದಾಯದವರು ಮನಗಂಡು ಸಮ್ಮೇಳನದಲ್ಲಿ ಪಾಲ್ಗೊಳ್ಳಬೇಕು. ಆ ಮೂಲಕ ಸಮುದಾಯದ ತ್ರಿಮತಸ್ಥರ ಒಗ್ಗಟ್ಟು ಪ್ರದರ್ಶನಗೊಳ್ಳಬೇಕು ಎಂದು ಹೇಳಿದರು.

ಸಮುದಾಯದ ಮುಖಂಡ ಎನ್.ಎಂ. ನವೀನ್‌ಕುಮಾರ್ ಮಾತನಾಡಿ, ವಿಪ್ರರಲ್ಲಿ ಈಗ ಸಂಘಟನಾ ಮನೋಭಾವ ಬಂದಿದೆ. ಆದರೆ ಅದು ಇನ್ನಷ್ಟು ಆಗಬೇಕಿದೆ. ಆರ್ಥಿಕವಾಗಿ ಹಿಂದುಳಿದ ಸಮುದಾಯದ ಕುಟುಂಬಗಳನ್ನು ಮೇಲೆತ್ತುವ ಕೆಲಸ ಸಹ ಆಗಬೇಕಿದೆ. ವಿಶೇಷವಾಗಿ ಯುವ ಜನರಲ್ಲಿ ಸಮುದಾಯದ ಅಭಿಮಾನ ಮೂಡಬೇಕು. ಕೆಆರ್ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 70 ಸಾವಿರ ಜನಸಂಖ್ಯೆಯನ್ನು ಬ್ರಾಹ್ಮಣ ಸಮುದಾಯ ಹೊಂದಿದೆ. ಹಾಗಾಗಿ ಇಂತಹ ಸಂಘಟನಾ ಕಾರ್ಯಕ್ರಮಗಳಲ್ಲಿ ಇನ್ನು ಹೆಚ್ಚಿನ ಬಂಧುಗಳು ಪಾಲ್ಗೊಳ್ಳಬೇಕು ಎಂದು ತಿಳಿಸಿದರು.


ಮೇಲುಕೋಟೆಯ ವಂಗೀಪುರ ನಂಬಿ ಮಠದ ಇಳೈಆಳ್ವಾರ್ ಸ್ವಾಮೀಜಿ, ನಗರ ಪಾಲಿಕೆ ಮಾಜಿ ಸದಸ್ಯರಾದ ಸೌಭಾಗ್ಯ ಮೂರ್ತಿ, ಎಂ.ಡಿ.ಪಾರ್ಥಸಾರಥಿ, ಹಿರಿಯ ಸಾಹಿತಿ ಪುಷ್ಪ ಅಯ್ಯಂಗಾರ್, ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಕೆಆರ್‌ಎಸ್ ಗ್ರಾಪಂ ಸದಸ್ಯ ವಿಜಯಕುಮಾರ್, ಸಮುದಾಯದ ಇನ್ನಿತರ ಮುಖಂಡರಾದ ಕೆ.ಎನ್. ನಿಶಾಂತ್, ಕೃಷ್ಣಮೂರ್ತಿ, ಅಜಯ್‌ಶಾಸ್ತ್ರಿ, ಜಯಸಿಂಹ, ಚಕ್ರಪಾಣಿ, ಅರುಣ್, ಜಿ.ಕೆ.ಪುನೀತ್ ಮತ್ತಿತರರು ಹಾಜರಿದ್ದರು.

ರಸ್ತೆ ದಾಟುತ್ತಿದ್ದ ಜಿಂಕೆ ಕಾರು ಡಿಕ್ಕಿಯಾಗಿ ಸಾವು: ಚಾಲಕ ಬಂಧನ



ಚಾಮರಾಜನಗರ, ಜ.9– ಕಾರು ಡಿಕ್ಕಿ ಹೊಡೆದ ಪರಿಣಾಮ ರಸ್ತೆ ದಾಟುತ್ತಿದ್ದ ಜಿಂಕೆಯೊಂದು ಮೃತಪಟ್ಟಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಕೇರಳ ರಾಷ್ಟ್ರೀಯ ಹೆದ್ದಾರಿ–766ರ ಬಂಡೀಪುರ ಅಭಯಾರಣ್ಯ ವ್ಯಾಪ್ತಿಯ ಮದ್ದೂರು ವಲಯದ ಕಗ್ಗಳದಹುಂಡಿ ಸಮೀಪದಲ್ಲಿ ನಡೆದಿದ್ದು, ಕಾರು ಚಾಲಕನನ್ನು ಬಂಧಿಸಲಾಗಿದೆ. ಕೇರಳದ ವಯನಾಡಿನ ರುಫೀರ್(56) ಬಂಧಿತ ಆರೋಪಿ. ಈತ ಕೇರಳದಿಂದ ಗುಂಡ್ಲುಪೇಟೆ ಕಡೆಗೆ ಸ್ವಿಫ್ಟ್ (ಕೆ.ಎಲ್.72–313) ಕಾರನ್ನು ವೇಗವಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದ ವೇಳೆ ಕಗ್ಗಳದಹುಂಡಿ ಸಮೀಪದ ರಸ್ತೆ ದಾಟುತ್ತಿದ್ದ ಜಿಂಕೆಗೆ ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿ ರಭಸಕ್ಕೆ ಜಿಂಕೆ ರಸ್ತೆಯಲ್ಲೇ ಪ್ರಾಣ ಕಳೆದುಕೊಂಡಿದೆ. ನಂತರ ಅರಣ್ಯಾಧಿಕಾರಿಗಳು ದೌಡಾಯಿಸಿ ಚಾಲಕನನ್ನು ಬಂಧಿಸಿ, ಕಾರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಈ ಸಂಬಂಧ ಅರಣ್ಯ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮೇಲಾಧಿಕಾರಿಗಳ ಸೂಚನೆಯಂತೆ ಜಿಂಕೆ ಕಳೇಬರವನ್ನು ಸುಡಲಾಗುತ್ತದೆ ಎಂದು ಆರ್ ಎಫ್‌ಒ ಕೆ.ಪಿ.ಸತೀಶ್ ಕುಮಾರ್ ಮಾಹಿತಿ ನೀಡಿದ್ದಾರೆ.

'ಒಲವಿನ ಉಡುಗೊರೆ ಕೊಡಲೇನು' ಖ್ಯಾತಿಯ ಬಹುಭಾಷಾ ಹಿನ್ನೆಲೆ ಗಾಯಕ ಪಿ.ಜಯಚಂದ್ರನ್ ನಿಧನ



ಕೊಚ್ಚಿ, ಜ.9– ಕೇರಳಿಗರಿಂದ 'ಭಾವಗಾಯಕ' ಎಂದು ಪ್ರೀತಿಯಿಂದ ಕರೆಯಿಸಿಕೊಳ್ಳುತ್ತಿದ್ದ, ಕನ್ನಡದ 'ಒಲವಿನ ಉಡುಗೊರೆ ಕೊಡಲೇನು' ಖ್ಯಾತಿಯ ಬಹುಭಾಷಾ ಹಿನ್ನೆಲೆ ಗಾಯಕ ಪಿ. ಜಯಚಂದ್ರನ್ ಗುರುವಾರ ಸಂಜೆ ನಿಧನರಾಗಿದ್ದಾರೆ. ಅವರಿಗೆ 80 ವರ್ಷ ವಯಸ್ಸಾಗಿತ್ತು. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಪಿ.ಜಯಚಂದ್ರನ್ ಅವರು ತ್ರಿಶೂರ್ ಜಿಲ್ಲೆಯ ಅಮಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಜಯಚಂದ್ರನ್ ಅವರು ಮಲಯಾಳಂ, ತಮಿಳು, ತೆಲುಗು, ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ 16,000 ಕ್ಕೂ ಹೆಚ್ಚು ಹಾಡುಗಳಿಗೆ ತಮ್ಮ ಧ್ವನಿಯನ್ನು ನೀಡಿದ್ದರು. ಅತ್ಯುತ್ತಮ ಹಿನ್ನೆಲೆ ಗಾಯಕನಿಗೆ ನೀಡಲಾಗುವ ಪ್ರತಿಷ್ಠಿತ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ, ಐದು ಕೇರಳ ರಾಜ್ಯ ಚಲನಚಿತ್ರ ಪ್ರಶಸ್ತಿಗಳು, ಕೇರಳ ಸರ್ಕಾರದಿಂದ ಜೆ.ಸಿ. ಡೇನಿಯಲ್ ಪ್ರಶಸ್ತಿ ಮತ್ತು ತಮಿಳುನಾಡು ಸರ್ಕಾರದಿಂದ ಕಲೈಮಾಮಣಿ ಪ್ರಶಸ್ತಿ, ಜೊತೆಗೆ ನಾಲ್ಕು ತಮಿಳುನಾಡು ರಾಜ್ಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಜಯಚಂದ್ರನ್ ಅವರು ಪತ್ನಿ ಲಲಿತಾ, ಮಗಳು ಲಕ್ಷ್ಮಿ ಮತ್ತು ಮಗ ದೀನನಾಥನ್ ಅವರನ್ನು ಅಗಲಿದ್ದಾರೆ. ಜಯಚಂದ್ರನ್ ಅವರು ಕನ್ನಡದಲ್ಲಿ ಹಲವಾರು ಸೂಪರ್ ಹಿಟ್ ಹಾಡುಗಳನ್ನು ಹಾಡಿದ್ದಾರೆ.

ಮಾನವ ಬಂಧುತ್ವ ವೇದಿಕೆ ದಶಮಾನೋತ್ಸವ; ಫೆ.2ಕ್ಕೆ ದಾವಣಗೆರೆಯಲ್ಲಿ

'ಸಂವಿಧಾನ ಸಂಕಲ್ಪ ಸಮಾವೇಶ'

● ಸುಮಾರು 2 ಲಕ್ಷ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ● ಮೈಸೂರು, ಮಂಡ್ಯ, ಚಾ.ನಗರ ಜಿಲ್ಲೆಯಿಂದ ಬಾರೀ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಮನವಿ



ಮಾನವ ಬಂಧುತ್ವ ವೇದಿಕೆ ಹಮ್ಮಿಕೊಂಡಿರುವ 'ಸಂವಿಧಾನ ಸಂಕಲ್ಪ ಸಮಾವೇಶ'ದ ಕರಪತ್ರಗಳನ್ನು ಪ್ರದರ್ಶಿಸಲಾಯಿತು.

ಮೈಸೂರು, ಜ.9(ಎಂಕೆ)– ಮಾನವ ಬಂಧುತ್ವ ವೇದಿಕೆ ದಶಮಾನೋತ್ಸವದ ಅಂಗವಾಗಿ ಫೆ.2ರಂದು ದಾವಣಗೆರೆಯಲ್ಲಿ ಹಮ್ಮಿಕೊಂಡಿರುವ 'ಸಂವಿಧಾನ ಸಂಕಲ್ಪ ಸಮಾವೇಶ'ಕ್ಕೆ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ವೇದಿಕೆ ವತಿಯಿಂದ ಮನವಿ ಮಾಡಲಾಯಿತು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಸಮಾಜದಲ್ಲಿ ಮೌಢ್ಯತೆ ತೊಲಗಿಸಲು ಸಚಿವ ಸತೀಶ್ ಜಾರಕಿಹೊಳಿ ನೇತೃತ್ವದಲ್ಲಿ ಸ್ಥಾಪಿತವಾಗಿರುವ ಮಾನವ ಬಂಧುತ್ವ ವೇದಿಕೆಯ ಸಂವಿಧಾನ ಸಂಕಲ್ಪ ಸಮಾವೇಶಕ್ಕೆ ನಾಡಿನ ವಿವಿಧೆಡೆಗಳಿಂದ ದುಡಿಯುವ ಜನವರ್ಗದ ಸಂಘಟನೆಗಳು, ದಲಿತ, ದಮನಿತ, ಮಹಿಳಾ, ರೈತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಅಲ್ಪಸಂಖ್ಯಾತ, ಆದಿವಾಸಿ, ಅಲೆಮಾರಿ ಸೇರಿದಂತೆ ವಿವಿಧ ಸಂಘಟನೆಗಳಿಂದ ಸುಮಾರು 2 ಲಕ್ಷಕ್ಕೂ ಅಧಿಕ ಮಂದಿ ಭಾಗವಹಿಸಲಿದ್ದು, ಹಳೇ ಮೈಸೂರು ಭಾಗದಿಂದ ಸಂಪೂರ್ಣ ಬೆಂಬಲ ನೀಡುವಂತೆ ಕೋರಲಾಯಿತು.

ಮಾನವ ಬಂಧುತ್ವ ವೇದಿಕೆಯ ಮೈಸೂರು ಜಿಲ್ಲಾ ಸಂಚಾಲಕ, ಲೇಖಕಿ ಡಾ.ಲೀಲಾ ಸಂಪಿಗೆ ಮಾತನಾಡಿ, ಸ್ಮಶಾನದಲ್ಲಿ ಅಹೋರಾತ್ರಿ ಕಾರ್ಯಕ್ರಮಗಳ ಆಯೋಜನೆ ಮೂಲಕ ಆರಂಭವಾದ ಮಾನವ ಬಂಧುತ್ವ ವೇದಿಕೆಯು ಮೌಢ್ಯ ವಿರೋಧಿ ಕಾರ್ಯಚಟುವಟಿಕೆಗಳ ಮೂಲಕ ವೈಜ್ಞಾನಿಕವಾಗಿಯೂ ಜನರನ್ನು ಒಗ್ಗೂಡಿಸುವಲ್ಲಿ ಸಕ್ರಿಯವಾಗಿದೆ. ಪ್ರಸ್ತುತ ಭಾರತ ಸಂವಿಧಾನವನ್ನು ಉಳಿಸುವ ಹಾಗೂ ಸಂವಿಧಾನದ ಮಹತ್ವ ತಿಳಿಸುವ ನಿಟ್ಟಿನಲ್ಲಿ ಬೃಹತ್ ಸಂವಿಧಾನ ಸಂಕಲ್ಪ ಸಮಾವೇಶ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಸಮಾವೇಶಕ್ಕೆ ಪ್ರತೀ ವಿಧಾನಸಭಾ ಕ್ಷೇತ್ರದಿಂದ ಕನಿಷ್ಟ 2 ಬಸ್ ಸೌಲಭ್ಯ ಕಲ್ಪಿಸಲು ಚಿಂತಿಸಲಾಗಿದೆ. ಸಮಾವೇಶಕ್ಕೆ ಬರುವವರು ಸಂವಿಧಾನ ಕುರಿತು ಅರಿವುಳ್ಳವರಾಗಿರಬೇಕು. ಸಂವಿಧಾನದ ಆಶಯ ತಿಳಿದಿರಬೇಕು. ಇದಕ್ಕಾಗಿ ವಿವಿಧ ಜನಪರ ಸಂಘಟನೆಗಳನ್ನು ಒಗ್ಗೂಡಿಸಿಕೊಳ್ಳುವ ಅಗತ್ಯವಿದೆ. ಈಗಾಗಲೇ ರಾಜ್ಯಾದ್ಯಂತ ವೇದಿಕೆ ಪ್ರವಾಸ ಹಮ್ಮಿಕೊಂಡಿದ್ದು, ಸಂವಿಧಾನವನ್ನು ಕಿತ್ತುಹಾಕುವ ಯೋಚನೆ ಇರಲಿ... ಅದನ್ನು ಕೂಡ ಮುಟ್ಟಲು ಸಾಧ್ಯವಿಲ್ಲ ಎಂಬುದನ್ನು ಸಮಾವೇಶದ ಮೂಲಕ ಸಾಬೀತುಪಡಿಸಬೇಕಿದೆ ಎಂದು ಹೇಳಿದರು.

ಸಂವಿಧಾನವೇ ನಮ್ಮ ಉಸಿರು: ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಈ ಸಮಾವೇಶದ ಮೂಲಕ ನಮ್ಮೆಲ್ಲರ ಆಸೆ, ಗುರಿ ಒಂದೇ ಎಂಬುದನ್ನು ಸಾಬೀತುಪಡಿಸಬೇಕಿದೆ. ಸಂವಿಧಾನ ನಮ್ಮ ಉಸಿರು ಎಂಬುದನ್ನು ನಮ್ಮ ಮನದಲ್ಲಿ ಗಟ್ಟಿಗೊಳಿಸಬೇಕಿದೆ. ಸಂವಿಧಾನದ ಅಡಿಯಲ್ಲೇ ಸಂಘಟನೆಯ ಶಕ್ತಿಯನ್ನು ತೋರಿಸುವುದಲ್ಲದೆ ಇಂತಹ ಸಮಾವೇಶಗಳನ್ನು ಪ್ರತೀ ವರ್ಷವೂ ನಡೆಸಬೇಕಿದೆ. ಹಾಗಾಗಿ ವಿವಿಧ ಸಂಘಟನೆಗಳ ಎಲ್ಲಾ ಪದಾಧಿಕಾರಿಗಳು, ಪ್ರಜ್ಞಾವಂತರು, ವಿದ್ಯಾರ್ಥಿಗಳನ್ನು ಒಗ್ಗೂಡಿಸಬೇಕು. ಮಹಾತ್ಮರ ಸಂಸ್ಕೃತಿಯನ್ನು ಕೊನೆಗಾಣಿಸಿ, ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನೊಳಗೊಂಡ ಸಮ ಸಮಾಜದ ಸಂಸ್ಕೃತಿಯನ್ನು ಪಸರಿಸಬೇಕಿದೆ ಎಂದರು. ವಿಭಾಗೀಯ ಸಂಚಾಲಕ ಸತೀಶ್ ಕುಮಾರ್, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜು, ಜಿಲ್ಲಾ ಸಂಚಾಲಕರಾದ ದ್ಯಾಪಪ್ಪನಾಯಕ, ಸುಭಾಷ್ ಮಾಡ್ರಹಳ್ಳಿ, ದೇವರಾಜ್ ಕೊಪ್ಪ, ಮಂಜುನಾಥ್, ಬಂಡಳ್ಳಿ ಕುಮಾರ್, ಕುಮಾರ್ ಬಸ್ತೀಪುರ, ನಾಗೇಶರಾಜು ಮತ್ತಿತರರಿದ್ದರು.

ಹಿಂದುಳಿದ ವರ್ಗಗಳ ಅಭಿವೃದ್ಧಿ ಹರಿಕಾರ ಅರಸು ಪ್ರತಿಮೆ ಸ್ಥಾಪನೆ ಮತ್ತೆ ನೆನೆಗುದಿಗೆ


ಅರಸು ಅಭಿಮಾನಿಗಳ ತೀವ್ರ ಬೇಸರ

ಮೈಸೂರು, ಜ.9(ಎಸ್‌ಬಿಡಿ)– ಮೈಸೂರಲ್ಲಿ ದಿವಂಗತ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಪ್ರತಿಮೆ ಪ್ರತಿಷ್ಠಾಪನೆ ನೆನೆಗುದಿಗೆ ಬಿದ್ದಿದೆ.

ಪ್ರಸ್ತಾವನೆ ಸಲ್ಲಿಕೆಯಿಂದ ಈವರೆಗೆ ಮೂವರು ಮುಖ್ಯಮಂತ್ರಿಗಳಾದರೂ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಶ್ರಮಿಸಿದ ಡಿ.ದೇವರಾಜ ಅರಸು ಅವರ ಪ್ರತಿಮೆ ಪ್ರತಿಷ್ಠಾಪನೆ ಇನ್ನೂ ಸಾಕಾರಗೊಳ್ಳದಿರುವುದು ಅವರ ಅಭಿಮಾನಿಗಳು ಹಾಗೂ ಅನುಯಾಯಿಗಳ ಬೇಸರಕ್ಕೆ ಕಾರಣವಾಗಿದೆ.

ಮೈಸೂರಿನ ಸಿದ್ದಾರ್ಥನಗರದ ಡಿಸಿ ಕಚೇರಿಯನ್ನೂ ಒಳಗೊಂಡ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣ ಕಟ್ಟಡದ ಮುಂಭಾಗ ದಿವಂಗತ ಡಿ.ದೇವರಾಜ ಅರಸು ಅವರ ಪ್ರತಿಮೆ ಪ್ರತಿಷ್ಠಾಪನೆ ಪ್ರಕ್ರಿಯೆ ಆರಂಭವಾಗಿ 10 ತಿಂಗಳಾಯಿತು. ಇದಕ್ಕೂ ಹಿಂದೆ 92 ಲಕ್ಷ ರೂ. ಅಂದಾಜು ಮೊತ್ತದಲ್ಲಿ ಪ್ರತಿಮೆ ಸ್ಥಾಪನೆಗೆ ನಿರ್ಧರಿಸಲಾಗಿತ್ತು. ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ನಿಯೋಗದ ಮನವಿಗೆ ಸ್ಪಂದಿಸಿ, ದೇವರಾಜ ಅರಸು ಪ್ರತಿಮೆ ನಿರ್ಮಾಣ ಸಂಬಂಧ ಪ್ರಸ್ತಾವನೆ ಸಲ್ಲಿಸಲು ಸೂಚನೆ ನೀಡಲಾಗಿತ್ತು. ಅದರಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳು ಪ್ರಕ್ರಿಯೆ ಆರಂಭಿಸಿದ್ದರು. ಬಳಿಕ ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ 92 ಲಕ್ಷ ರೂ. ಅಂದಾಜು ಮೊತ್ತದ ಪ್ರಸ್ತಾವನೆ ಸಿದ್ಧಪಡಿಸಿದ್ದರು.

ನಂತರ ಜಿಲ್ಲಾಧಿಕಾರಿಗಳು ದೇವರಾಜ ಅರಸು ಪ್ರತಿಮೆ ನಿರ್ಮಾಣಕ್ಕೆ 92 ಲಕ್ಷ ರೂ. ಅನುದಾನವನ್ನು ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಗೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ನಂತರದ ರಾಜಕೀಯ ಬದಲಾವಣೆಯಿಂದ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದಾಗ ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅವರೂ ಪತ್ರ ಬರೆದು



ಅರಸು

ಸೂಕ್ತಕ್ರಮ ವಹಿಸಲು ಮನವಿ ಮಾಡಿದ್ದರು. ಬಳಿಕ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾದ ನಂತರವೂ ದೇವರಾಜ ಅರಸು ಪ್ರತಿಮೆ ನಿರ್ಮಾಣಕ್ಕೆ ನಿರಂತರವಾಗಿ ಆಗ್ರಹಿಸಲಾಗಿದೆ. ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನ ಸಮಿತಿಯು 2023ರ ಜುಲೈನಲ್ಲಿ ಪತ್ರ ಬರೆದು ಜಿಲ್ಲಾಧಿಕಾರಿಗಳ ಕೋರಿಕೆಯಂತೆ ಪ್ರತಿಮೆ ನಿರ್ಮಾಣಕ್ಕೆ ಪ್ರತ್ಯೇಕ ಲೆಕ್ಕಶೀರ್ಷಿಕೆಯಡಿ 92 ಲಕ್ಷ ಬಿಡುಗಡೆ ಮಾಡಿ, ಆಗಸ್ಟ್ 20ರಂದು ದೇವರಾಜ ಅರಸು ಜಯಂತಿಯಂದು ಶಂಕುಸ್ಥಾಪನೆ ನೆರವೇರಿಸಬೇಕೆಂದು ಕೋರಿತ್ತು. ಅಂತೂ ಇಂತೂ 2024ರ ಫೆಬ್ರವರಿ 19ರಂದು ಪ್ರತಿಮೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿತು. ಪೀಠ ಹಾಗೂ 12 ಅಡಿ ಎತ್ತರದ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನೆ ಕಾರ್ಯಕ್ಕೆ ಅಧಿಕೃತ ಚಾಲನೆ ದೊರಕಿತು. ಇದಾಗಿ 10 ತಿಂಗಳು ಕಳೆದಿವೆಯಾದರೂ ನಿರ್ಮಾಣ ಕಾಮಗಾರಿ ಆರಂಭವಾಗಿಲ್ಲ. ಪ್ರತಿಮೆ ನಿರ್ಮಾಣವಾಗುತ್ತಿದೆ, ಶೀಘ್ರದಲ್ಲೇ ಪ್ರತಿಷ್ಠಾಪನೆ ಮಾಡಲಾಗುವುದು ಎಂದಷ್ಟೇ ಹೇಳಲಾಗುತ್ತಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿ ಹರಿಕಾರನೆನಿಸಿದ ಡಿ.ದೇವರಾಜ ಅರಸು ಅವರ ಪ್ರತಿಮೆ ನಿರ್ಮಾಣಕ್ಕೆ ಇಷ್ಟೊಂದು ವಿಳಂಬ ಏಕೆಂಬುದೇ ತಿಳಿಯುತ್ತಿಲ್ಲ ಎಂದು ಅರಸು ಅವರ ಅಭಿಮಾನಿಗಳು ಅತೀವ ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರಲ್ಲಿ ರಸ್ತೆ ಸುರಕ್ಷತಾ ಮಾಸಾಚರಣೆ ಜಾಗೃತಿ ಜಾಥಾ



ಮೈಸೂರಿನ ದೇವರಾಜ ಸಂಚಾರ ಠಾಣೆ ಪೊಲೀಸರು ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ಜಾಗೃತಿ ಜಾಥಾ ನಡೆಸಿದರು.

ಮೈಸೂರು, ಜ.9(ಆರ್‌ಕೆ)– ಮೈಸೂರಿನ ದೇವರಾಜ ಸಂಚಾರ ಠಾಣೆ ಪೊಲೀಸರು ಇಂದು ರಾಷ್ಟ್ರೀಯ ರಸ್ತೆ ಸುರಕ್ಷರತಾ ಮಾಸಾಚರಣೆ ಅಂಗವಾಗಿ ಜನ ಜಾಗೃತಿ ಜಾಥಾ ನಡೆಸಿದರು.

ದೇವರಾಜ ಮೊಹಲ್ಲಾದಲ್ಲಿರುವ ದೇವರಾಜ ಸಂಚಾರ ಠಾಣೆಯಿಂದ ಆರಂಭವಾದ ಜಾಥಾವು ಜೆಎಲ್‌ಬಿ ರಸ್ತೆ, ದಿವಾನ್ಸ್ ರಸ್ತೆ, ಶಿವರಾಂಪೇಟೆ ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ ಮೂಲಕ ಸಾಗಿ ಮರಳಿ ದೇವರಾಜ ಸಂಚಾರ ಠಾಣೆ ಬಳಿ ಅಂತ್ಯಗೊಂಡಿತು. ಅತೀ ವೇಗ ಚಾಲನೆ ಮೃತ್ಯುವಿಗೆ ಆಹ್ವಾನ, ಸಂಚಾರ ನಿಯಮ ಪಾಲಿಸಿ ಅಮೂಲ್ಯ ಪ್ರಾಣ ರಕ್ಷಿಸಿ, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡದಿರಿ ಎಂಬಿತ್ಯಾದಿ ಘೋಷಣಾ ಫಲಕಗಳನ್ನು ಹಿಡಿದ ದೇವರಾಜ ಪಿಯು ಕಾಲೇಜು ವಿದ್ಯಾರ್ಥಿಗಳು ಸಂಚಾರ ಪೊಲೀಸರೊಂದಿಗೆ ಕಾಲ್ನಡಿಗೆ ಜಾಥಾ ನಡೆಸಿ, ರಸ್ತೆ ಸುರಕ್ಷತೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. ಈ ವೇಳೆ ದೇವರಾಜ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಮಮತಾ, ಸಬ್‌ಇನ್‌ಸ್ಪೆಕ್ಟರ್ ಶಿವಕುಮಾರ್, ಚಂದ್ರಶೇಖರ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಚುನಾವಣೆ: ಕೆ.ಉಮಾಶಂಕರ್ ನಾಮಪತ್ರ ಸಲ್ಲಿಕೆ



ಕೆ.ಉಮಾಶಂಕರ್ ನೇತೃತ್ವದ ತಂಡವು ಚುನಾವಣಾಧಿಕಾರಿ ರಾಜು ಅವರಿಗೆ ನಾಮಪತ್ರ ಸಲ್ಲಿಸಿತು.

ಮೈಸೂರು, ಜ. 9– ಜನವರಿ 19ರಂದು ನಡೆಯಲಿರುವ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿಯ ಚುನಾವಣೆ ಹಿನ್ನೆಲೆಯಲ್ಲಿ ಬ್ಯಾಂಕಿನ ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರಾದ ಕೆ.ಉಮಾಶಂಕರ್ ನೇತೃತ್ವದ ತಂಡವು ಚುನಾವಣಾಧಿಕಾರಿ ರಾಜು ಅವರಿಗೆ ನಾಮಪತ್ರ ಸಲ್ಲಿಸಿತು.

ಈ ವೇಳೆ ಸ್ಪರ್ಧಿಗಳಾದ ಪಿ.ರಾಜೇಶ್ವರಿ (ಮಹಿಳಾ ಮೀಸಲು), ಸವಿತಾ (ಮಹಿಳಾ ಮೀಸಲು), ಹೆಚ್ ಹರೀಶ್ ಕುಮಾರ್ (ಸಾಮಾನ್ಯ), ಎಂ ರಾಮಕೃಷ್ಣ (ಎಸ್‌ಟಿ), ಸಿ.ರೇವಣ್ಣ, (ಬಿ.ಸಿ.ಎ), ಕೆ.ಗಿರೀಶ್ (ಪ.ಜಾತಿ), ಎಂ.ಕುಮಾರ್ (ಸಾಮಾನ್ಯ) ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಕಲಾಸೌರಭ ಯಾನ, ನವರಸ ಗಾನ ಕಾರ್ಯಕ್ರಮ

ಮೈಸೂರು, ಜ. 9– ಮೈಸೂರಿನ 'ಕಲಾಸೌರಭ' ಗಾಯನ ತಂಡದವರು ಜನವರಿ 11ರಂದು (ಶನಿವಾರ) ಸಂಜೆ 5.30ಕ್ಕೆ ಮೈಸೂರಿನ ಜೆ.ಎಲ್.ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಕಲಾಸೌರಭ ಯಾನ, ನವರಸ ಗಾನದಲ್ಲಿ ಕಲಾಸೌರಭ ಗಾಯನ ತಂಡವು 20 ಹವ್ಯಾಸಿ ಗಾಯಕ, ಗಾಯಕಿಯರ ಜೊತೆಗೂಡಿ ಪ್ರೇಕ್ಷಕರನ್ನು ರಂಜಿಸಲಿದ್ದಾರೆ. ಇವರ ತಂಡವು ಹಳೆಯ ಚಿತ್ರಗೀತೆಗಳಿಂದ ಇಂದಿನ ಹೊಸ ಪೀಳಿಗೆ ಚಿತ್ರಗೀತೆಗಳವರೆಗೂ ಎಲ್ಲಾ ಬಗೆಯ ಹಾಡುಗಳನ್ನು ನವರಸಗಳನ್ನೂ ಪ್ರಸ್ತುತಪಡಿಸಲಿದ್ದಾರೆ. ಕಾರ್ಯಕ್ರಮಕ್ಕೆ ಪ್ರೇಕ್ಷಕರಿಗೆ ಉಚಿತ ಪ್ರವೇಶವಿದೆ.

ಬೋಗಾದಿ ಪ.ಪಂ.ನಲ್ಲಿ ಹೊಸ ವಾಹನಗಳಿಗೆ ಜಿಟಿಡಿ ಚಾಲನೆ

ಮೈಸೂರು, ಜ. 9–ಬೋಗಾದಿ ಪಟ್ಟಣ ಪಂಚಾಯಿತಿ ವತಿಯಿಂದ ಏಳು ಆಟೋ ಟಿಪ್ಪರ್, ಒಂದು ಜೆಸಿಬಿ ಹಾಗೂ ಒಂದು ಟ್ರಾಕ್ಟರ್ ಅನ್ನು 15ನೇ ಹಣಕಾಸು ಸಾಮಾನ್ಯ ನಿಧಿ ಅನುದಾನದಲ್ಲಿ ಖರೀದಿಸಿದ್ದು ಅವುಗಳಿಗೆ ಶಾಸಕ ಜಿ.ಟಿ.ದೇವೇಗೌಡ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಈ ವೇಳೆ ಬೋಗಾದಿ ಪಪಂ ಮುಖ್ಯ ಅಧಿಕಾರಿ ಬಸವರಾಜ್, ರೆವಿನ್ಯೂ ಅಧಿಕಾರಿ ವಿಜಯಕುಮಾರ್, ಸಹಾಯಕ ಅಭಿಯಂತರ ಹರ್ಷ, ಕಿರಿಯ ಆರೋಗ್ಯ ನಿರೀಕ್ಷಕ ಪುನೀತ್‌ಕುಮಾರ್ ಸೇರಿದಂತೆ ಮತ್ತಿತರರು ಹಾಜರಿದ್ದರು.



ಬೋಗಾದಿ ಪಟ್ಟಣ ಪಂಚಾಯಿತಿ ವತಿಯಿಂದ 15ನೇ ಹಣಕಾಸು ಸಾಮಾನ್ಯ ನಿಧಿ ಅನುದಾನದಲ್ಲಿ ಖರೀದಿಸಿದ ನೂತನ ವಾಹನಗಳಿಗೆ ಶಾಸಕ ಜಿ.ಟಿ.ದೇವೇಗೌಡರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಸಚಿವ ಭೈರತಿ ಸುರೇಶ್ ಪುತ್ರನ ವಿವಾಹ; ಮುಡಾ ಅಧಿಕಾರಿಗಳಿಗೆ ಆಹ್ವಾನ ಪತ್ರಿಕೆ ಹಂಚುವ ಉಪದ್ರ!

ಮೈಸೂರು, ಜ.9(ಆರ್‌ಕೆ)– ಅಧಿಕಾರಸ್ಥ ಜನಪ್ರತಿನಿಧಿಗಳು ಹೇಗೆ ಸರ್ಕಾರಿ ಅಧಿಕಾರಿಗಳನ್ನ ತಮ್ಮ ವೈಯಕ್ತಿಕ ವಿಚಾರಗಳಿಗೆ ಬಳಸಿಕೊಳ್ಳುತ್ತಾರೆ ಎಂಬುದಕ್ಕೆ ಇದೊಂದು ತಾಜಾ ನಿದರ್ಶನ!

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರಮಾಪ್ತ, ಪ್ರಭಾವಿ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ತಮ್ಮ ಪುತ್ರನ ವಿವಾಹ ಮಹೋತ್ಸವದ ದುಬಾರಿ ಆಹ್ವಾನ ಪತ್ರಿಕೆಯನ್ನು ಮುಡಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಮೂಲಕ ಹಂಚುವ ವ್ಯವಸ್ಥೆ ಮಾಡಿದ್ದಾರೆ. ಮೈಸೂರಿನ ಅಧಿಕಾರಿ ವರ್ಗ ಹಾಗೂ ಪ್ರಮುಖರಿಗೆ ಭರದಿಂದ ಆಹ್ವಾನ ಪತ್ರಿಕೆ ಹಂಚಲಾಗುತ್ತಿದೆ. ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಅತೀ ಪ್ರಭಾವಿ ಎನಿಸಿರುವ ಭೈರತಿ ಸುರೇಶ್ ಅವರ ಪುತ್ರನ ವಿವಾಹ ಆಹ್ವಾನ ಪತ್ರಿಕೆಗಳನ್ನು ಕೈಯ್ಯಲ್ಲಿಡಿದು, ಮುಡಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಇಂದು ಮಧ್ಯಾಹ್ನ ಮೈಸೂರು ಮಹಾನಗರಪಾಲಿಕೆ ಕಚೇರಿಯಲ್ಲಿ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಹಾಗೂ ಇತರರಿಗೆ ವಿತರಿಸುವಾಗ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ನಡೆಯುತ್ತಿದ್ದ ಬಜೆಟ್ ಪೂರ್ವಭಾವಿ ಸಭೆಯ ವೇಳೆ 'ಮೈಸೂರು ಮಿತ್ರ'ನ ಕಣ್ಣಿಗೆ ಬಿದ್ದರು.

> “ನಾವೇನ್ ಮಾಡೋದು ಸಾರ್, ಆಫೀಸರ್ ಹೇಳಿದಂಗೆ ಮಾಡಬೇಕಲ್ಲ. ಹಾಗಾಗಿ ಸಚಿವರ ಪುತ್ರನ ಇನ್ವಿಟೇಷನ್ ತಲುಪಿಸಲು ಬಂದಿದ್ದೇವೆ...

ಒಬ್ಬರು ಬ್ಯಾಗಿನಲ್ಲಿ ಆಹ್ವಾನ ಪತ್ರಿಕೆಗಳನ್ನು ತುಂಬಿಕೊಂಡಿದ್ದರೆ, ಮತ್ತೊಬ್ಬರು ಕೆಲವು ಆಹ್ವಾನ ಪತ್ರಿಕೆಗಳ ಕೈಯ್ಯಲ್ಲಿ ಹಿಡಿದುಕೊಂಡು, ಮೊದಲೇ ಮಾಡಿರುವ ಪಟ್ಟಿಯಲ್ಲಿದ್ದಂತೆ ಅಧಿಕಾರಿಗಳ ಹೆಸರು ಬರೆದು ತಲುಪಿಸುವಲ್ಲಿ ನಿರತರಾಗಿದ್ದರು. ಅದನ್ನು 'ಮೈಸೂರು ಮಿತ್ರ' ಪ್ರತಿನಿಧಿ ಪ್ರಶ್ನಿಸಿದಾಗ ಕಸಿವಿಸಿಗೊಂಡ ಅಧಿಕಾರಿಗಳು ಹಾಗೂ ಸಿಬ್ಬಂದಿ, ಸಬೂಬು ಹೇಳಿಕೊಂಡು ಜಾಗ ಖಾಲಿ ಮಾಡಲೆತ್ನಿಸಿದರು. ಬಿಡದೇ ಬೆನ್ನತ್ತಿದಾಗ 'ನಾವೇನ್ ಮಾಡೋದು ಸಾರ್, ಆಫೀಸರ್ ಹೇಳಿದಂಗೆ ಮಾಡಬೇಕಲ್ಲ. ಹಾಗಾಗಿ ಸಚಿವರ ಪುತ್ರನ ಇನ್ವಿಟೇಷನ್ ತಲುಪಿಸಲು ಬಂದಿದ್ದೇವೆ' ಎಂದು ಹೇಳಿ ಆಯುಕ್ತರು ಸಭೆಯಲ್ಲಿ ಪಾಲ್ಗೊಂಡಿದ್ದರಿಂದ ಆಹ್ವಾನ ಪತ್ರಿಕೆಯನ್ನು ಅವರ ಕಚೇರಿಯ ಟೇಬಲ್ ಮೇಲಿಟ್ಟು ಹೊರಟು ಹೋದರು.

ಕಚೇರಿಯಲ್ಲಿ ಕುಳಿತು ಕೆಲಸ ಮಾಡಬೇಕಾದ ಮುಡಾ ಅಧಿಕಾರಿಗಳು ಹಾಗೂ ಸಿಬ್ಬಂದಿ, ಬೆಂಗಳೂರಿನ ಅರಮನೆ ಮೈದಾನದ ತ್ರಿಪುರ ವಾಸಿನಿ ಸಭಾಂಗಣದಲ್ಲಿ 2025ರ ಫೆಬ್ರವರಿ 6 ಮತ್ತು 7ರಂದು ನಡೆಯಲಿರುವ ಸಚಿವ ಭೈರತಿ ಸುರೇಶ್ ಅವರ ಪುತ್ರ ಸಂಜಯ್ ಸುರೇಶ್ ಮತ್ತು ಅಪೂರ್ವ (ಶಾಸಕ ಎಸ್.ಆರ್.ವಿಶ್ವನಾಥ್ ಪುತ್ರಿ) ಅವರ ವಿವಾಹ ಮಹೋತ್ಸವದ ಆಹ್ವಾನ ಪತ್ರಿಕೆಗಳನ್ನು ಓಡಾಡಿಕೊಂಡು ಹಂಚುತ್ತಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ, ತಹಸೀಲ್ದಾರ್ ಕಚೇರಿ, ಉಪ ವಿಭಾಗಾಧಿಕಾರಿ ಕಚೇರಿ, ಜಿಲ್ಲಾ ಪಂಚಾಯತ್, ಮಹಾನಗರಪಾಲಿಕೆ ಸೇರಿದಂತೆ ಮೈಸೂರಿನಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರಿ ಕಚೇರಿಗಳ ಪ್ರಮುಖ ಅಧಿಕಾರಿಗಳಿಗೆ ಆಹ್ವಾನ ಪತ್ರಿಕೆಗಳನ್ನು ಹಂಚುವುದರಲ್ಲಿ ಪ್ರಾಧಿಕಾರದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ನಿರತರಾಗಿರುವುದರಿಂದ ಮುಡಾದಲ್ಲಿನ ಸಾರ್ವಜನಿಕ ಕೆಲಸ ಕಾರ್ಯ ಸ್ಥಗಿತವಾದಂತೆಯೆ!

ಇತ್ತೀಚೆಗಷ್ಟೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾವಿರಾರು ನಿವೇಶನಗಳನ್ನು ಕಾನೂನು ಉಲ್ಲಂಘಿಸಿ ಮಾರಾಟ ಇಲ್ಲವೇ ಅಕ್ರಮವಾಗಿ ಮಂಜೂರು ಮಾಡಿದ ಪ್ರಕರಣ ಸಂಬಂಧ ಕರ್ನಾಟಕ ಲೋಕಾಯುಕ್ತ, ಸರ್ಕಾರ ನೇಮಿಸಿರುವ ಪಿ.ಎನ್.ದೇಸಾಯಿ ಏಕಸದಸ್ಯ ಸಮಿತಿ ಹಾಗೂ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದ್ದು, ಪ್ರಕರಣದಲ್ಲಿ ಸಚಿವ ಭೈರತಿ ಸುರೇಶ್ ಅವರ ಪಾತ್ರವೂ ಇದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ವಿಪಕ್ಷಗಳು ಗಂಭೀರ ಆರೋಪವನ್ನೇ ಮಾಡಿವೆ. ಸಚಿವರು ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ ಇದೀಗ ಪ್ರಭಾವ ಬಳಸಿ, ತಮ್ಮ ಇಲಾಖೆ ಅಧೀನದಲ್ಲಿ ಬರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಕೌಟುಂಬಿಕ ಕಾರ್ಯಕ್ರಮದ ಆಹ್ವಾನ ಪತ್ರಿಕೆ ವಿತರಿಸಲು ನಿಯೋಜಿಸಿರುವುದು ಸಾರ್ವಜನಿಕ ವಲಯದಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ದೇಶ - ವಿದೇಶ

ಆರೋಗ್ಯವಂತ ಶಿಶುಗಳಿಗೆ ಜನ್ಮ ನೀಡುವ ವಿದ್ಯಾರ್ಥಿನಿಯರಿಗೆ 81,000 ರೂ ಆಫರ್

ರಷ್ಯಾ: ಜನನ ಪ್ರಮಾಣದಲ್ಲಿ ಕುಸಿತ ಕಂಡಿರುವುದರಿಂದ ತೀವ್ರ ಆತಂಕಕ್ಕೆ ತುತ್ತಾಗಿರುವ ಚೀನಾ ಮತ್ತು ಜಪಾನ್ ಸಾಲಿಗೆ ಇದೀಗ ರಷ್ಯಾ ಕೂಡ ಸೇರಿಕೊಂಡಿದೆ. ಜನನ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ರಷ್ಯಾ ಇದೀಗ ತನ್ನದೇ ಆದ ಹೊಸ ಕ್ರಮವೊಂದನ್ನು ಪರಿಚಯಿಸಿದೆ. ಆರೋಗ್ಯಕರ ಮಗುವಿಗೆ ಜನ್ಮ ನೀಡುವ 25 ವರ್ಷದೊಳಗಿನ ವಿದ್ಯಾರ್ಥಿನಿಯರಿಗೆ ರಷ್ಯಾ 100,000 ರೂಬಲ್‌ಗಳನ್ನು (ಅಂದಾಜು 81,000 ರೂ.) ನೀಡುತ್ತಿದೆ ಎಂದು ಮಾಸ್ಕೋ ಟೈಮ್ಸ್ ವರದಿ ಮಾಡಿದೆ.



ಈ ಯೋಜನೆಯ ಅರ್ಹತೆ ಪಡೆಯಲು, ಅರ್ಜಿದಾರರು 25 ವರ್ಷಕ್ಕಿಂತ ಕಡಿಮೆ ವಯಸ್ಸಿನ ಸ್ಥಳೀಯ ವಿವಿ ಅಥವಾ ಕಾಲೇಜಿನಲ್ಲಿ ಪೂರ್ಣ ಸಮಯದ ವಿದ್ಯಾರ್ಥಿಗಳಾಗಿರಬೇಕು ಮತ್ತು ಕರೇಲಿಯಾ ನಿವಾಸಿಗಳಾಗಿರಬೇಕು ಎಂದಿದೆ. ಸತ್ತ ಮಗುವಿಗೆ ಜನ್ಮ ನೀಡುವ ತಾಯಂದಿರಿಗೆ ಈ ಬೋನಸ್ ಲಭ್ಯವಿಲ್ಲ ಎಂದು ಕಾನೂನು ಸ್ಪಷ್ಟವಾಗಿ ಹೇಳಿದೆ. ಆದಾಗ್ಯೂ, ಎಸ್‌ಐಡಿಎಸ್‌ನಿಂದಾಗಿ ಮಗು ಮರಣಹೊಂದಿದರೆ ಈ ಹಣವನ್ನು ಹಿಂಪಡೆಯಲಾಗುತ್ತದೆಯೇ ಎಂಬುದು ಸ್ಪಷ್ಟವಾಗಿಲ್ಲ. ಮಗುವಿನ ಆರೈಕೆ ಮತ್ತು ಪ್ರಸವಾನಂತರದ ಚೇತರಿಕೆಯ ವೆಚ್ಚಗಳಿಗೆ ಸಹಾಯ ಮಾಡಲು ಹೆಚ್ಚುವರಿ ಬೋನಸ್ ನೀಡಲಾಗುತ್ತದೆಯೇ ಎಂಬ ಬಗ್ಗೆ ಹೇಳಲಾಗಿಲ್ಲ.

ಭೋಪಾಲ್ ಸೆಂಟ್ರಲ್ ಜೈಲಿನಲ್ಲಿ ಚೀನಾ ಡ್ರೋನ್ ಪತ್ತೆ




ಭೋಪಾಲ್: ಮಧ್ಯಪ್ರದೇಶದ ರಾಜಧಾನಿ ಭೋಪಾಲ್‌ನ ಕೇಂದ್ರ ಕಾರಾಗೃಹದಲ್ಲಿ ಚೀನಾದ ಡ್ರೋನ್ ಪತ್ತೆಯಾಗಿದೆ. ಈ ಸುದ್ದಿ ಭಾರಿ ಸಂಚಲನ ಸೃಷ್ಟಿಸಿದೆ. ಏಕೆಂದರೆ ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಬಂಧ ಹೊಂದಿರುವ 69 ಜನರು ಈ ಜೈಲಿನಲ್ಲಿದ್ದಾರೆ. ಈ ಡ್ರೋನ್ ಎಲ್ಲಿಂದ ಬಂತು ಮತ್ತು ಹೇಗೆ ಬಂತು ಎಂಬುದು ಇನ್ನೂ ಬಹಿರಂಗವಾಗಿಲ್ಲ. ಆದರೆ ಸದ್ಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಬುಧವಾರ ಮಧ್ಯಾಹ್ನ ಕೇಂದ್ರ ಕಾರಾಗೃಹದ ಸೆಕ್ಷನ್ 'ಬಿ' ಬಳಿ ಇರುವ ಹನುಮಾನ್ ದೇವಾಲಯದ ಹಿಂಭಾಗದ ಪ್ರದೇಶದಲ್ಲಿ ಡ್ರೋನ್ ಒಂದು ಏಕಾಏಕಿ ಕಾಣಿಸಿಕೊಂಡಿದೆ. ತಕ್ಷಣ ಇದನ್ನು ನೋಡಿದ ಜೈಲು ಸಿಬ್ಬಂದಿಯೊಬ್ಬರು ಜೈಲು ಆಡಳಿತಕ್ಕೆ ಮಾಹಿತಿ ನೀಡಿದರು. ಆ ಬಳಿಕ ಅದನ್ನು ಚೆಕ್ ಮಾಡಿದಾಗ ಡ್ರೋನ್‌ನಲ್ಲಿ ಸಂಪೂರ್ಣ ಚಾರ್ಜ್ ಇದ್ದ ಬ್ಯಾಟರಿ ಇದ್ದು, ಜೊತೆಗೆ ಕ್ಯಾಮೆರಾ ಇರುವುದು ತಿಳಿದುಬಂದಿದೆ. ಆದರೆ ಯಾವುದೇ ರೀತಿಯ ಅನುಮಾನಾಸ್ಪದ ವಸ್ತುಗಳು ಡ್ರೋನ್‌ನಲ್ಲಿ ಪತ್ತೆಯಾಗಿಲ್ಲ, ಆದರೆ ಪೊಲೀಸರು ತನಿಖೆ ಶುರು ಮಾಡಿದ್ದಾರೆ. ಭದ್ರತಾ ದೃಷ್ಟಿಯಿಂದ, ಭೋಪಾಲ್ ಸೆಂಟ್ರಲ್ ಜೈಲನ್ನು ಅತ್ಯಂತ ಸುರಕ್ಷಿತ ಜೈಲೆಂದು ಹೇಳಲಾಗುತ್ತಿದೆ.

ಲಾಸ್ ಏಂಜಲಿಸ್‌ನಲ್ಲಿ ಭೀಕರ ಕಾಡ್ಗಿಚ್ಚು; ಹಾಲಿವುಡ್‌ನಿಂದ ಜನರ ಸ್ಥಳಾಂತರ

ಲಾಸ್ ಏಂಜಲೀಸ್: ಅಮೆರಿಕದ ಲಾಸ್ ಏಂಜಲಿಸ್ ಪ್ರದೇಶದಲ್ಲಿ ಭೀಕರ ಕಾಡ್ಗಿಚ್ಚು ಕಾಣಿಸಿಕೊಂಡಿದ್ದು, ಸುತ್ತಲಿನ ಹಾಲಿವುಡ್ ಪ್ರದೇಶದಿಂದ ಜನರನ್ನು ಸ್ಥಳಾಂತರಿಸುವ ಕಾರ್ಯಕ್ಕೆ ರಕ್ಷಣಾ ಕಾರ್ಯಾಚರಣೆ ಸಿಬ್ಬಂದಿ ಚಾಲನೆ ನೀಡಿದ್ದಾರೆ. ದುರ್ಘಟನೆಯಲ್ಲಿ ಇದುವರೆಗೂ ಐವರು ಪ್ರಾಣ ಕಳೆದುಕೊಂಡಿದ್ದು, ಸುರಕ್ಷಿತ ಸ್ಥಳಗಳಿಗೆ ವಲಸೆ ಹೋಗುವಂತೆ ಸ್ಥಳೀಯ ಆಡಳಿತ ಜನರಲ್ಲಿ ಮನವಿ ಮಾಡಿದೆ. ಹಾಲಿವುಡ್ ಬೌಲೆವಾರ್ಡ್‌ನಿಂದ ಕೆಲವೇ ನೂರು ಮೀಟರ್ ದೂರದಲ್ಲಿ ಕಾಡ್ಗಿಚ್ಚು ವ್ಯಾಪಿಸಿದ್ದು, ಐತಿಹಾಸಿಕ ಹಾಲಿವುಡ್‌ನ ಹೃದಯ ಭಾಗದಲ್ಲಿ ವಾಸಿಸುವ ಜನರನ್ನು ಸ್ಥಳಾಂತರಿಸಲು ಆದೇಶ ನೀಡಲಾಗಿದೆ. ಕಾಡ್ಗಿಚ್ಚು ಹಬ್ಬಿರುವ ಪ್ರದೇಶವನ್ನು ಕಾನೂನುಬದ್ಧವಾಗಿ ಸಾರ್ವಜನಿಕ ಪ್ರವೇಶಕ್ಕೆ ಮುಚ್ಚಲಾಗಿದೆ ಎಂದು ಲಾಸ್ ಏಂಜಲಿಸ್ ಅಗ್ನಿಶಾಮಕ ಇಲಾಖೆ ತಿಳಿಸಿದೆ.



ಲಾಸ್ ಏಂಜಲಿಸ್‌ನಾದ್ಯಂತ ನಿಯಂತ್ರಣ ಮೀರಿದ ಕಾಡ್ಗಿಚ್ಚು ಉಲ್ಬಣಗೊಳ್ಳುತ್ತಿರುವುದರಿಂದ ಸನ್‌ಸೆಟ್ ಫೈರ್ ಎಂದು ಕರೆಯಲ್ಪಡುವ ಹೊಸ ಜ್ವಾಲೆಯು ಹಾಲಿವುಡ್ ಹಿಲ್ಸ್‌ನಲ್ಲಿ ಕಾಣಿಸಿಕೊಂಡಿದೆ. ಸನ್‌ಸೆಟ್ ಫೈರ್ ಸುಮಾರು 20 ಎಕರೆಗೂ ಹೆಚ್ಚಿನ ಪ್ರದೇಶಕ್ಕೆ ವ್ಯಾಪಿಸಿದ್ದು, ರನ್ಯಾನ್ ಕ್ಯಾನ್ಯನ್ ಮತ್ತು ವಾಟಲ್ಸ್ ಪಾರ್ಕ್ ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾಗಿದೆ.

ಓಂ ಶಕ್ತಿ ದೇವಾಲಯಕ್ಕೆ ತೆರಳಿದ್ದ ಬಸ್–ಕ್ಯಾಂಟರ್ ಡಿಕ್ಕಿ; ಐವರ ಸಾವು

ರಾಣಿಪೇಟೆ: ತಮಿಳುನಾಡಿನ ರಾಣಿಪೇಟೆ ಬಳಿ ಕೆಎಸ್ ಆರ್‌ಟಿಸಿ ಬಸ್ ಹಾಗೂ ಕರ್ನಾಟಕದ ಕ್ಯಾಂಟರ್ ನಡುವೆ ಭೀಕರ ಅಪಘಾತ ಸಂಭವಿಸಿದೆ. ಘಟನೆಯಲ್ಲಿ 5 ಮಂದಿ ಸಾವಿಗೀಡಾಗಿದ್ದಾರೆ. ಕೋಲಾರ ಜಿಲ್ಲೆ ಮುಳಬಾಗಿಲು ತಾಲೂಕು ನಲ್ಲೂರು ಗ್ರಾಮದಿಂದ ತಮಿಳುನಾಡಿನ ಮೇಲ್ಮರವತ್ತೂರು ಓಂ ಶಕ್ತಿ ದೇವಾಲಯಕ್ಕೆ 50 ಮಂದಿ ಗ್ರಾಮಸ್ಥರು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರವಾಸ ಹೋಗಿ ವಾಪಸ್ಸಾಗುತ್ತಿದ್ದರು. ಇತ್ತ ಶ್ರೀನಿವಾಸಪುರ ತಾಲೂಕು ಸೀಗೆಹಳ್ಳಿ ಗ್ರಾಮದಿಂದ ತರಕಾರಿ ತುಂಬಿಕೊಂಡು ಕ್ಯಾಂಟರ್ (ಟೆಂಪೋ) ಚೆನ್ನೈಗೆ ಹೊರಟಿತ್ತು. ತಮಿಳುನಾಡಿನ ರಾಣಿಪೇಟೆ ಬಳಿ ಮುಖಾಮುಖಿ ಡಿಕ್ಕಿಯಾಗಿದೆ. ಬಸ್ ಡಿಕ್ಕಿ ಹೊಡೆದ ರಭಸಕ್ಕೆ ಕ್ಯಾಂಟರ್‌ನಲ್ಲಿದ್ದ ಐದು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರು ಕ್ಯಾಂಟರ್ ಚಾಲಕ ಮಂಜುನಾಥ್, ಕ್ಲೀನರ್ ಶಂಕರ್, ಸಹಾಯಕ ಸೋಮಶೇಖರ್, ವೆಂಕಟೇಶ್ ನಗರ ಗ್ರಾಮದ ರೈತ ಕೃಷ್ಣಪ್ಪ ಹಾಗೂ ಮತ್ತೊಬ್ಬರು ಎಂದು ಗುರುತಿಸಲಾಗಿದೆ. ಇನ್ನು ಕೆಎಸ್‌ಆರ್‌ಟಿಸಿ ಬಸ್ ಚಾಲಕ ಮುಳಬಾಗಿಲು ತಾಲೂಕು ನೆರ್ನಹಳ್ಳಿ ಬಾಬು ಹಾಗೂ ಬಸ್‌ನಲ್ಲಿದ್ದ ಓರ್ವ ಮಹಿಳೆ ನಲ್ಲೂರು ಗ್ರಾಮದ ಸರಸ್ವತಮ್ಮ ಸ್ಥಿತಿ ಗಂಭೀರವಾಗಿದ್ದು, ವೇಲೂರು ಸಿಎಂಸಿ ಆಸ್ಪತ್ರೆ, ರತ್ನಗಿರಿ ಮೆಡಿಕಲ್ ಕಾಲೇಜಿನಲ್ಲಿ ದಾಖಲು ಮಾಡಿ ಚಿಕಿತ್ಸೆ ಕೊಡಿಸಲಾಗುತ್ತಿದೆ.



ಭಾರತ–ತಾಲಿಬಾನ್ ನಡುವೆ ದುಬೈನಲ್ಲಿ ಮಹತ್ವದ ಸಭೆ

ದುಬೈ: ಅಫ್ಘಾನಿಸ್ತಾನದ ತಾಲಿಬಾನ್ ನಾಯಕತ್ವ ಮತ್ತು ಭಾರತೀಯ ಹಿರಿಯ ಅಧಿಕಾರಿಗಳ ನಡುವೆ, ಸಂಯುಕ್ತ ಅರಬ್ ರಾಷ್ಟ್ರ(ಯುಎಇ)ದ ದುಬೈನಲ್ಲಿ ನಿನ್ನೆ (ಜ.8) ಉನ್ನತ ಮಟ್ಟದ ಸಭೆ ನಡೆದಿದೆ. ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಮತ್ತು ತಾಲಿಬಾನ್ ಸರ್ಕಾರದ ಹಂಗಾಮಿ ವಿದೇಶಾಂಗ ಸಚಿವ ಮೌಲಾವಿ ಅಮೀರ್ ಖಾನ್ ಮುತ್ತಕಿ ಸೇರಿದಂತೆ ಎರಡೂ ದೇಶಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಉಭಯ ದೇಶಗಳ ನಡುವಿನ ಸಹಕಾರವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹೊಸದಿಲ್ಲಿ ಮತ್ತು ಕಾಬೂಲ್ ನಡುವಿನ ಬಾಂಧವ್ಯವನ್ನು ಬೆಳೆಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಆಡಳಿತ ಜಾರಿಯಾದ ಬಳಿಕ ಆ ರಾಷ್ಟ್ರದೊಂದಿಗಿನ ಭಾರತದ ಸಂಬಂಧ ತುಸು ಜಟಿಲವಾಗಿದೆ. ಸಭೆಯ ಕಾರ್ಯಸೂಚಿಯು ಮಾನವೀಯ ನೆರವು, ಅಭಿವೃದ್ಧಿ ನೆರವು, ವ್ಯಾಪಾರ, ವಾಣಿಜ್ಯ, ಕ್ರೀಡೆ, ಸಾಂಸ್ಕೃತಿಕ ಸಂಬಂಧಗಳು, ಪ್ರಾದೇಶಿಕ ಭದ್ರತೆ ಮತ್ತು ಚಬಹಾರ್ ಬಂದರಿನಂತಹ ರಾಷ್ಟ್ರೀಯ ಹಿತಾಸಕ್ತಿಯ ಯೋಜನೆಗಳು ಸೇರಿ ವಿವಿಧ ಕ್ಷೇತ್ರಗಳಲ್ಲಿ ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧಗಳನ್ನು ಹೆಚ್ಚಿಸುವುದನ್ನು ಒಳಗೊಂಡಿತ್ತು.



ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಆಯೋಜಕರಾದ

ಕುಂಡ್ಯೋಳಂಡ ಕುಟುಂಬಕ್ಕೆ ಸಿಎಂ ಚೆಕ್ ವಿತರಣೆ

ಹಾಕಿ ಪಂದ್ಯಾವಳಿಗೆ ನೆರವು ನೀಡುವುದಾಗಿ ಸಿದ್ದರಾಮಯ್ಯ ಭರವಸೆ



ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಆಯೋಜಕ ಕುಂಡ್ಯೋಳಂಡ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚೆಕ್ ವಿತರಿಸಿದರು.

ಮಡಿಕೇರಿ, ಜ.9–ನಾಪೋಕ್ಲುವಿನಲ್ಲಿ ಕಳೆದ ಬಾರಿ ನಡೆದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಆಯೋಜಕರಾದ ಕುಂಡ್ಯೋಳಂಡ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ 1 ಕೋಟಿ ರೂ. ಚೆಕ್ ಅನ್ನು ಯುವ ಸಬಲೀಕರಣ ಇಲಾಖೆ ವತಿಯಿಂದ ವಿತರಿಸಿದರು.

ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರೊಂದಿಗೆ ಕುಂಡ್ಯೋಳಂಡ ಕುಟುಂಬಸ್ಥರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಹಾಕಿ ಪಂದ್ಯಾಟಕ್ಕೆ ಸಹಕಾರ ನೀಡಿದ್ದಕ್ಕೆ ಧನ್ಯವಾದ ಸಲ್ಲಿಸಿದರು.

ನಂತರ ಸಿಎಂ ಸಿದ್ದರಾಮಯ್ಯ ಮಾತನಾಡಿ, ಕುಂಡ್ಯೋಳಂಡ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯು ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಿಸಿರುವುದು ಹೆಮ್ಮೆಯ ಸಂಗತಿಯಾಗಿದೆ ಹಾಕಿ ಕೊಡವರ ಜನಪ್ರಿಯ ಕ್ರೀಡೆಯಾಗಿದ್ದು, ಕೊಡಗಿನಲ್ಲಿ ಪ್ರತಿ ವರ್ಷ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಆಯೋಜಿಸುತ್ತಿರುವುದು ಶ್ಲಾಘನೀಯ ಎಂದರು.

ಕಳೆದ ವರ್ಷ ಕೊಡವ ಹಾಕಿ ಕ್ರೀಡಾಕೂಟದಲ್ಲಿ 360 ತಂಡಗಳು, 4800 ಕ್ರೀಡಾಪಟುಗಳು ಭಾಗವಹಿಸಿದ್ದಾರೆ. ಇದು ಗಿನ್ನಿಸ್ ಬುಕ್‌ನಲ್ಲಿ ದಾಖಲಾಗಿದೆ ಹಾಕಿ ಪಂದ್ಯಾವಳಿಯನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲು ಎಲ್ಲಾ ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು.

ಹಾಕಿ ಹುಟ್ಟಿದ್ದು ಭಾರತದಲ್ಲಿ. ಧ್ಯಾನ ಚಂದ್ ಅವರಂತಹ ಹಾಕಿ ಮಾಂತ್ರಿಕ ಹುಟ್ಟಿದ ದೇಶ ನಮ್ಮದು. ಕ್ರಿಕೆಟ್ ಅಷ್ಟೇ ಅಲ್ಲ, ಹಾಕಿ ಕೂಡ ಅತ್ಯಂತ ಜನಪ್ರಿಯ ಕ್ರೀಡೆಯಾಗಿದೆ. ಮುಂದಿನ ದಿನಗಳಲ್ಲೂ ಈ ಪರಂಪರೆ ಮುಂದುವರೆಸಿಕೊಂಡು ಹೋಗಬೇಕೆಂದು ಹೇಳಿ ಶುಭ ಹಾರೈಸಿದರು.

ಕೊಡಗು ಜಿಲ್ಲೆಯಲ್ಲಿ ಕೊಡವ ಕುಟುಂಬಗಳು ಪ್ರತಿ ವರ್ಷ ಸಾಂಪ್ರದಾಯಿಕ ಕೌಟುಂಬಿಕ ಹಾಕಿ ಪಂದ್ಯಾವಳಿಯನ್ನು ಕಳೆದ 23 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು, ಬಹಳಷ್ಟು ಕೊಡವರು ರಾಷ್ಟ್ರೀಯ ಹಾಕಿ ತಂಡದಲ್ಲಿ ಆಟವಾಡಿದ್ದಾರೆ. ರಾಜ್ಯ ಸರ್ಕಾರ ಹಾಕಿ ಪಂದ್ಯಕ್ಕೆ ಎಲ್ಲಾ ಪ್ರೋತ್ಸಾಹ ನೀಡುತ್ತಾ ಬಂದಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಸಂಸದ ಅಜಯ್ ಮಾಕನ್, ಸಚಿವರಾದ ಡಾ.ಶರಣ ಪ್ರಕಾಶ್ ಪಾಟೀಲ್, ಭೈರತಿ ಸುರೇಶ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ಅಪ್ತ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಉಪಸ್ಥಿತರಿದ್ದರು.

ಕಾಡಾನೆಗಳ ದಾಳಿಗೆ ಕಾಫಿ ಗಿಡಗಳ ನಾಶ



ಬೆಟ್ಟತ್ತೂರು ಗ್ರಾಮದ ತೋಟವೊಂದರಲ್ಲಿ ಕಾಡಾನೆಗಳ ಹಿಂಡು ಕಾಫಿ ಗಿಡಗಳನ್ನು ನಾಶಗೊಳಿಸಿರುವುದು.

ಮಡಿಕೇರಿ: ತಾಲೂಕಿನ ಬೆಟ್ಟತ್ತೂರು ಗ್ರಾಮದ ತೋಟವೊಂದರ ಮೇಲೆ ದಾಳಿ ನಡೆಸಿರುವ ಕಾಡಾನೆಗಳ ಹಿಂಡು ಕಾಫಿ ಗಿಡ, ಅಡಿಕೆ, ಇತರ ಕೃಷಿ ಫಸಲನ್ನು ಧ್ವಂಸ ನಾಶಗೊಳಿಸಿವೆ.


ಗ್ರಾಮದ ರೈತ ಕೊಂಪುಳಿರ ರಾಮಚಂದ್ರ ಅವರ ತೋಟಕ್ಕೆ ಮರಿ ಆನೆಗಳ ಸಹಿತ ಒಟ್ಟು 16 ಕಾಡಾನೆಗಳು ಬುಧವಾರ ರಾತ್ರಿ ದಾಳಿ ನಡೆಸಿವೆ. ಫಸಲು ಭರಿತ 50ಕ್ಕೂ ಹೆಚ್ಚು ಕಾಫಿ ಗಿಡಗಳನ್ನು ತುಳಿದು, ಅಡಿಕೆ ಮರವನ್ನು ಬೀಳಿಸಿ ಅದರ ತಿರುಳನ್ನು ತಿಂದುಹಾಕಿವೆ.

ಬಾಳೆ, ಮರ ಗೆಣಸು ಫಸಲನ್ನು ಕೂಡ ನಾಶಗೊಳಿಸಿವೆ. ಇದರಿಂದ ಒಟ್ಟು 4 ಲಕ್ಷ ರೂ. ನಷ್ಟ ಸಂಭವಿಸಿದ್ದು, ಅರಣ್ಯ ಇಲಾಖೆ ತಕ್ಷಣ ಪರಿಹಾರ ನೀಡಬೇಕು ಎಂದು ರೈತ ರಾಮಚಂದ್ರ ಆಗ್ರಹಿಸಿದ್ದಾರೆ.

ಅರಣ್ಯ ಇಲಾಖೆಗೆ ಕಾಡಾನೆಗಳ ಮಾಹಿತಿ ನೀಡಿದರೆ, ಅರಣ್ಯ ಸಿಬ್ಬಂದಿ ಸ್ಥಳಕ್ಕಾಗಮಿಸಿ ಪಟಾಕಿ ಸಿಡಿಸಿ ಮರಳುತ್ತಾರೆ. ಆದರೆ, ಆನೆಗಳನ್ನು ಕಾಡಿಗಟ್ಟಲು ಮತ್ತು ಹಾವಳಿ ನಿಯಂತ್ರಿಸಲು ಯಾವುದೇ ಕ್ರಮಕ್ಕೆ ಮುಂದಾಗುತ್ತಿಲ್ಲ ಎಂದು ಈ ಭಾಗದ ಬೆಳೆಗಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸ್ಥಳಕ್ಕೆ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಪೆರ್ಪಣ ಪ್ರತ್ಯಕ್ಷ: ಮನೆಯವರಲ್ಲಿ ಆತಂಕ

ಸುಂಟಿಕೊಪ್ಪ, ಜ.9– ಮನೆಯ ಕೊಟ್ಟಿಗೆಯಲ್ಲಿ ಪೆರ್ಪಣ (ಚಿರತೆ ಹೋಲುವ) ಮರಿ ಪ್ರತ್ಯಕ್ಷವಾಗಿ ಮನೆಯವರಲ್ಲಿ ಆತಂಕ ಮೂಡಿಸಿದ ಘಟನೆ ಸುಂಟಿಕೊಪ್ಪದಲ್ಲಿ ಬುಧವಾರ ರಾತ್ರಿ ನಡೆದಿದೆ.



ಸುಂಟಿಕೊಪ್ಪದಲ್ಲಿ ಪ್ರತ್ಯಕ್ಷವಾದ ಪೆರ್ಪಣ.

ರಾತ್ರಿ 8.30ರಲ್ಲಿ ಪೆರ್ಪಣ ಸುಂಟಿಕೊಪ್ಪ ಗದ್ದೆಹಳ್ಳದ ನಿವಾಸಿ ಎಂ.ಎ.ಸತೀಶ್ ಅವರ ಮನೆ ಬಳಿಗೆ ಬಂದು ಸಾಕು ಬೆಕ್ಕಿನೊಂದಿಗೆ ಕಾದಾಟಕ್ಕಿಳಿದಿದೆ. ನಂತರ ಕೊಟ್ಟಿಗೆ ಒಳಗೆ ನುಸುಳಿ ಚೀರಾಟ ನಡೆಸಿದೆ. ಇದನ್ನು ಕಂಡ ಮನೆತವರು ಚಿರತೆ ಮರಿ ಎಂದು ಹೌಹಾರಿದ್ದಾರೆ. ಬಳಿಕ ಚಿರತೆ ಮರಿ ಅಲ್ಲ, ಪೆರ್ಪಣ ಎಂದು ತಿಳಿದು ನಿಟ್ಟುಸಿರು ಬಿಟ್ಟಿದ್ದಾರೆ.

ಸತೀಶ್ ಅವರ ಪತ್ನಿ ಸೆಲ್ವಿ ಪ್ರಾಣಿಪ್ರಿಯ ಪಿ.ಬಾಲಚಂದ್ರ ಅವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದು, ಸ್ಥಳಕ್ಕೆ ಬಂದ ಬಾಲಚಂದ್ರ ಪೆರ್ಪಣವನ್ನು ಸೆರೆ ಹಿಡಿದು ಸುರಕ್ಷಿತವಾಗಿ ಕುಶಾಲನಗರದ ಆನೆಕಾಡು ಅರಣ್ಯಕ್ಕೆ ಬಿಟ್ಟಿದ್ದಾರೆ.

ಬಾಮೈದನನ್ನೇ ಕೊಲೆ ಮಾಡಿದ ಬಾವ

ವಿರಾಜಪೇಟೆ, ಜ.9–ಕ್ಷುಲ್ಲಕ ವಿಚಾರಕ್ಕೆ ಬಾವ ತನ್ನ ಬಾಮೈದನನ್ನೇ ಕತ್ತಿಯಿಂದ ಕತ್ತು ಕಡಿದು ಕೊಲೆ ಮಾಡಿರುವ ಘಟನೆ ಸಮೀಪದ ಕೆದಮುಳ್ಳೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಂಜು ಆಲಿಯಾಸ್ ಕರಿಯ (22) ಕೊಲೆಯಾದ ಬಾಮೈದ. ಕೊಲೆ ಆರೋಪಿ ಬಾವ ಅಭಿಯನ್ನು ಬಂಧಿಸಲಾಗಿದೆ.

ಗ್ರಾಮದ ತೋಟವೊಂದರಲ್ಲಿ ಮಂಗಳವಾರ ಇಬ್ಬರೂ ಕೆಲಸ ಮಾಡುತ್ತಿದ್ದರು. ಈ ವೇಳೆ ಕ್ಷುಲ್ಲಕ ವಿಚಾರವಾಗಿ ಇಬ್ಬರ ನಡುವೆ ಕಲಹ ಉಂಟಾಗಿದೆ. ಈ ವೇಳೆ ಬಾವ ಅಭಿ ಕತ್ತಿಯಿಂದ ಬಾಮೈದ ಮಂಜುವಿನ ಕತ್ತು ಕಡಿದು ಕೊಲೆಗೈದು ಮೃತದೇಹವನ್ನು ಅಲ್ಲೇ ಇದ್ದ ಹುಲ್ಲಿನ ಬಣವೆಯಲ್ಲಿ ಬಚ್ಚಿಟ್ಟು ಮನೆಗೆ ಬಂದಿದ್ದಾನೆ.

ಆದರೆ, ಮಗ ಮಂಜು ಮನೆಗೆ ಬಾರದಿರುವುದರಿಂದ ಅನುಮಾನಗೊಂಡ ತಂದೆ ಬುಧವಾರ ವಿರಾಜಪೇಟೆ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಗುರುವಾರ ಪೊಲೀಸರು ಬಾವ ಅಭಿಯನ್ನು ಬಂಧಿಸಿ ವಿಚಾರಿಸಿದಾಗ ತಾನೇ ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡು, ಹುಲ್ಲಿನ ಬಣವೆಯಲ್ಲಿ ಶವವನ್ನು ಬಚ್ಚಿಟ್ಟಿರುವುದಾಗಿ ತಿಳಿಸಿದ್ದಾನೆ.

ಸ್ಥಳ ಪರಿಶೀಲಿಸಿದ ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿಯನನ್ನು ಬಂಧಿಸಿದ್ದಾರೆ.

ಪಟ್ಟಿಘಾಟ್ ಅರಣ್ಯದಲ್ಲಿ 2 ಕಡವೆಗಳ ಹತ್ಯೆ

ಮಡಿಕೇರಿ, ಜ.9–ಪಶ್ಚಿಮಘಟ್ಟದ ಪಟ್ಟಿಘಾಟ್ ಮೀಸಲು ಅರಣ್ಯದಲ್ಲಿ 2 ಕಡವೆಗಳನ್ನು ಬೇಟೆಯಾಡಿ ಹತ್ಯೆ ಮಾಡಿರುವ ಘಟನೆ ನಡೆದಿದೆ. ಬೇಟೆಗಾರರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಭಾಗಮಂಡಲ ವಲಯ ಅರಣ್ಯ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿಗಳ ಪತ್ತೆಗೆ ಮುಂದಾಗಿದ್ದಾರೆ. ಪಟ್ಟಿಘಾಟ್ ಅರಣ್ಯದ ಕೋಪಟ್ಟಿದಲ್ಲಿ 2 ಕಡವೆಗಳನ್ನು ಹತ್ಯೆ ಮಾಡಲಾಗಿದೆ.

ನಾಳೆ ಸೇತುವೆ ಕಾಮಗಾರಿಗೆ ಶಂಕುಸ್ಥಾಪನೆ

ಮಡಿಕೇರಿ: ವಿರಾಜಪೇಟೆ–ಬೈಂದೂರು ರಾಜ್ಯ ಹೆದ್ದಾರಿಯ ಐಗೂರು ಗ್ರಾಮದ ಬಳಿ ಸೇತುವೆ ನಿರ್ಮಾಣ ಕಾಮಗಾರಿಗೆ ಜ.11ರಂದು ಚಾಲನೆ ನೀಡಲಾಗುವುದು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಶಾಸಕರಾದ ಡಾ.ಮಂತರ್ ಗೌಡ, ಎ.ಎಸ್.ಪೊನ್ನಣ್ಣ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತಿತರು ಭಾಗವಹಿಸಲಿದ್ದಾರೆ.

ಓವರ್‌ಟೇಕ್ ಮಾಡುವಾಗ ದುರಂತ

ಬೈಕಿನಿಂದ ಬಿದ್ದ ಸವಾರನ ತಲೆ ಮೇಲೆ ಹರಿದ ಜೆಸಿಬಿ

ಶ್ರೀರಂಗಪಟ್ಟಣ: ಎರಡು ಬೈಕ್‌ಗಳ ನಡುವೆ ಡಿಕ್ಕಿಯಿಂದ ನೆಲಕ್ಕುರುಳಿದ ಬೈಕ್ ಸವಾರನ ತಲೆ ಮೇಲೆ ಜೆಸಿಬಿ ಹರಿದಿದ್ದು, ಘಟನೆಯಲ್ಲಿ ಮೂವರು ಗಾಯಗೊಂಡಿದ್ದಾರೆ.

ತಾಲೂಕಿನ ಅರಕೆರೆ ಗ್ರಾಮದಲ್ಲಿ ಸಂಭವಿಸಿದ್ದು, ತಾಲೂಕಿನ ತಡಗವಾಡಿ ಗ್ರಾಮದ ದೇವೇಗೌಡ, ಸರೋಜ ಹಾಗೂ ಗುಡ್ಡಪ್ಪ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಜೆಸಿಬಿಯ ಹಿಂದಿಕ್ಕುವ ವೇಳೆ ರಸ್ತೆಯಲ್ಲಿ ತಿರುವಿದ್ದರಿಂದ ಎದುರುಗಡೆಯಿಂದ ವೇಗವಾಗಿ ಬಂದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ನೆಲಕ್ಕುರುಳಿದ ದೇವೇಗೌಡನ ತಲೆ ಮೇಲೆ ಜೆಸಿಬಿ ಹರಿದಿರುವ ವೀಡಿಯೋ ಸಿಸಿ ಟಿವಿಯಲ್ಲಿ ಸೆರೆಯಾಗಿದೆ. ಅರಕೆರೆ ಠಾಣಾ ಪೊಲೀಸರು ಸ್ಥಳಕ್ಕಾಗಮಿಸಿ, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ಅರಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇಗುಲದಲ್ಲಿ ಕಳ್ಳತನ: ಆರೋಪಿ ಬಂಧನ



ಮಳವಳ್ಳಿ: ದೇವಸ್ಥಾನಗಳಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಿ ಆತನಿಂದ 5.50ಲಕ್ಷ ರೂ. ಮೌಲ್ಯದ ದೇವಸ್ಥಾನಗಳ ಆಭರಣಗಳನ್ನು ಮಳವಳ್ಳಿ ಗ್ರಾಮಾಂತರ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಗೌಡಗೆರೆ ಗ್ರಾಮದ ವಾಸಿ ಪ್ರದೀಪ್(35) ಬಂಧಿತ ಆರೋಪಿ. ತಾಲೂಕಿನ ಗೌಡಗೆರೆ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಮೂರು ಹಿತ್ತಾಳೆ ಮಂಟಪಗಳು, 18 ಹಿತ್ತಾಳೆ ಬಿರಡೆಗಳು, 3 ಹಿತ್ತಾಳೆ ಛತ್ರಿಗಳು, 1 ಹಿತ್ತಾಳೆಯ ರಥದ ಕಳಶ ಹಾಗೂ ಪೇಟೆ ಬೀದಿ ಮಂಚನಹಳ್ಳಿ ಗ್ರಾಮದ ಶ್ರೀ ಮೂಗದೇವಮ್ಮ ದೇವರ ದೇವಸ್ಥಾನದಲ್ಲಿದ್ದ ಅರಿಶಿನ ಕುಂಕುಮದ ಬಟ್ಟಲು, 1 ಜೊತೆ, 100 ಗ್ರಾಂ ಬೆಳ್ಳಿತಟ್ಟೆ ಒಂದು ಜೊತೆ, 80 ಗ್ರಾಂನ 1 ಬಟ್ಟಲು, 2 ಹಿತ್ತಾಳೆ ಬಿಂದಿಗೆ, 1 ಜೊತೆ ಹಿತ್ತಾಳೆ ದೀಪಾಲೆ ಕಂಬಗಳನ್ನು ಕಳ್ಳತನವಾಗಿದೆ ಎಂದು ಪ್ರತ್ಯೇಕ ದೂರು ದಾಖಲಾಗಿತ್ತು. ಪ್ರಕರಣ ದಾಖಲು ಮಾಡಿಕೊಂಡು ಡಿವೈಎಸ್‌ಪಿ ಕೃಷ್ಣಪ್ಪ ಮಾರ್ಗದರ್ಶನದಲ್ಲಿ ಗ್ರಾಮಾಂತರ ಇನ್ಸ್‌ಪೆಕ್ಟರ್ ಮಹೇಶ್ ಮತ್ತು ಸಬ್‌ಇನ್ಸ್‌ಪೆಕ್ಟರ್ ಶ್ರವಣ ದಾಸರೆಡ್ಡಿ ನೇತೃತ್ವದಲ್ಲಿ ಸಿಬ್ಬಂದಿ ತಂಡ ಕಾರ್ಯಾಚರಣೆ ಕೈಗೊಂಡು ಆರೋಪಿ ಪ್ರದೀಪ್‌ನನ್ನು ಬಂಧಿಸಿ ಆರೋಪಿಯಿಂದ 5.50 ಲಕ್ಷ ರೂ ಮೌಲ್ಯದ ಆಭರಣ ವಶಪಡಿಸಿಕೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಮಣಿಕಂಠ ಸ್ವಾಮಿ, ಶಿವಕುಮಾರ್, ನಾಗೇಂದ್ರ ಪರಮಾನಂದ, ಕೌಶಿಕ್, ಬಾನಪ್ಪ ರಾಥೋಡ್, ರವಿಕುಮಾರ್, ಲೋಕೇಶ್ ತಂಡವನ್ನು ಎಸ್ಪಿ ಪ್ರಶಂಸಿಸಿದ್ದಾರೆ.

ಅರಳಕುಪ್ಪೆ ಗ್ರಾಪಂ ಜೆಡಿಎಸ್ ತೆಕ್ಕೆಗೆ

ಅಧ್ಯಕ್ಷೆಯಾಗಿ ನಿರ್ಮಲಾ ನಾಗರಾಜು, ಉಪಾಧ್ಯಕ್ಷೆಯಾಗಿ ವಿನುತ ಸೋಮಾಚಾರಿ ಆಯ್ಕೆ



ಪಾಂಡವಪುರ ತಾಲೂಕಿನ ಅರಳಕುಪ್ಪೆ ಗ್ರಾಪಂನ ನೂತನ ಅಧ್ಯಕ್ಷೆಯಾಗಿ ಆಯ್ಕೆಯಾದ ಆರ್.ನಿರ್ಮಲಾ ನಾಗರಾಜು ಮತ್ತು ಉಪಾಧ್ಯಕ್ಷೆ ವಿ.ಎಸ್.ವಿನುತ ಸೋಮಾಚಾರಿ ಅವರನ್ನು ಎಲ್ಲಾ ಸದಸ್ಯರು, ಮುಖಂಡರು ಅಭಿನಂಧಿಸಿದರು.

ಪಾಂಡವಪುರ: ತಾಲೂಕಿನ ಅರಳಕುಪ್ಪೆ ಗ್ರಾಪಂಗೆ ಅಧ್ಯಕ್ಷೆಯಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಆರ್.ನಿರ್ಮಲಾ ನಾಗರಾಜು ಮತ್ತು ಉಪಾಧ್ಯಕ್ಷೆಯಾಗಿ ವಿ.ಎಸ್.ವಿನುತ ಸೋಮಾಚಾರಿ ಅವಿರೋಧವಾಗಿ ಆಯ್ಕೆಯಾದರು.

ಗ್ರಾಪಂನ ಹಿಂದಿನ ಅಧ್ಯಕ್ಷ ರಾಜು ಹಾಗೂ ಉಪಾಧ್ಯಕ್ಷ ಶಿವರಾಮು ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಸದಸ್ಯೆ ಆರ್.ನಿರ್ಮಲಾ ನಾಗರಾಜು ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ವಿ.ಎಸ್. ವಿನುತ ಸೋಮಾಚಾರಿ ನಾಮಪತ್ರ ಸಲ್ಲಿಸಿದರು. ಇವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರು ನಾಮಪತ್ರವನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿಯೂ ಆದ ತಾಪಂ ಇಓ ಲೋಕೇಶ್ ಮೂರ್ತಿ ಘೋಷಿಸಿದರು.

ಅಧ್ಯಕ್ಷೆಯಾಗಿ ಆರ್.ನಿರ್ಮಲಾನಾಗರಾಜು, ಉಪಾಧ್ಯಕ್ಷೆಯಾಗಿ ವಿ.ಎಸ್.ವಿನುತ ಸೋಮಾಚಾರಿ ಆಯ್ಕೆಯಾಗುತ್ತಿದ್ದಂತೆಯೇ ಬೆಂಬಲಿಗರು ಪಟಾಕಿಸಿಡಿಸಿ ಸಿಹಿಹಂಚಿ ಸಂಭ್ರಮಿಸಿದರು. ಎಲ್ಲಾ ಸದಸ್ಯರು, ಕಾರ್ಯಕರ್ತರು ಅಧ್ಯಕ್ಷೆ ಉಪಾಧ್ಯಕ್ಷೆಯನ್ನು ಅಭಿನಂಧಿಸಿದರು.

ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ರವಿಕುಮಾರ್, ಮಹೇಶ್, ಅಶೋಕ, ಉಮೇಶ್, ರಾಜು, ಶಿವರಾಮು, ರಾಜಮ್ಮ, ಸುನಂದಮ್ಮ, ಮಾಜಿ ಅಧ್ಯಕ್ಷರಾದ ಮಹದೇವು, ಸೀತಾಪುರವಿಶ್ವನಾಥ್, ಮುಖಂಡರಾದ ಕುಳ್ಳೇಗೌಡ, ಚಿದಾನಂದ, ನಾಗರಾಜು, ಕಾಂತರಾಜು, ಇಂದ್ರೇಶ್, ಎ.ಜೆ.ಕುಮಾರ್, ಸೋಮಾಚಾರಿ, ಸೊಸೈಟಿ ಪ್ರಕಾಶ್ ಸೇರಿದಂತೆ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ಇಂದು ಚಾಕನ ಕೆರೆಗೆ ಹೆಚ್ಡಿಕೆ ಬಾಗಿನ ಅರ್ಪಣೆ

ಮದ್ದೂರು, ಜ.9– ತಾಲೂಕಿನ ಆತಗೂರು ಹೋಬಳಿಯ ಚಾಕನಕೆರೆಗೆ ಜ.10 ರಂದು ಬೆಳಗ್ಗೆ 10 ಗಂಟೆಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಾಗಿನ ಅರ್ಪಸಲಿದ್ದು, ಪ್ರಗತಿಪರ ರೈತರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ತಿಳಿಸಿದರು. ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಚಾಕನಕೆರೆ ಹಲವಾರು ವರ್ಷಗಳ ನಂತರ ತುಂಬಿರುವ ಹಿನ್ನೆಲೆಯಲ್ಲಿ ಕೆರೆಗೆ ಎಚ್.ಡಿ.ಕುಮಾರಸ್ವಾಮಿ ಬಾಗಿನ ಅರ್ಪಿಸಲಿದ್ದಾರೆ ಹಾಗೂ ಮಲ್ಲನಕುಪ್ಪೆ ಗ್ರಾಮದಲ್ಲಿ ಪ್ರಗತಿಪರ ರೈತ ಮಹಿಳೆಗೆ ಹಾಗೂ ಪ್ರಗತಿಪರ ರೈತರಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಅಂದಾಜು 5 ಸಾವಿರ ಜನ ಸೇರುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸಂಸದರಾದ ನಂತರ ತಾಲೂಕಿನಲ್ಲಿ ಅವರದು ಇದೇ ಮೊದಲ ಕಾರ್ಯಕ್ರಮವಾಗಿರುವುದರಿಂದ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಹಾಗೂ ತಾಲೂಕಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಅಪ್ರಾಪ್ತ ಬಾಲಕಿ ಅಪಹರಿಸಿದ್ದ ಯುವಕನ ಬಂಧನ

ಶ್ರೀರಂಗಪಟ್ಟಣ: ಅಪ್ರಾಪ್ತ ಬಾಲಕಿ ಅಪಹರಿಸಿದ್ದ ಯುವಕನನ್ನು ಬಂಧಿಸಿ, ಆತನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಲಾಗಿದೆ.

ತಾಲೂಕಿನ ಕೆಆರ್‌ಎಸ್ ಗ್ರಾಮದ ಯೋಗೇಶ್ ಬಂಧಿತ ಯುವಕ. ಕಳೆದ 4 ದಿನಗಳ ಹಿಂದೆ ಈತ ಅದೇ ಗ್ರಾಮದ ಅಪ್ರಾಪ್ತೆಯನ್ನು ಅಪಹರಿಸಿದ್ದು, ಬಾಲಕಿ ತಾಯಿ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ಕೈಗೆತ್ತಿಕೊಂಡ ಪೊಲೀಸರು, ಬುಧವಾರ ಸಂಜೆ ಚನ್ನರಾಯಪಟ್ಟಣ ಬಳಿ ಬಾಲಕಿಯನ್ನು ರಕ್ಷಣೆ ಮಾಡಿ ನಂತರ ಗುರುವಾರ ಬೆಳಗ್ಗೆ ಚಿನಕುರಳಿ ಬಳಿ ಯುವಕನ್ನು ಬಂಧಿಸಿ, ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಂಡ್ಯದಲ್ಲಿ ಫೆ.7 ರಂದು ಉದ್ಯೋಗ ಮೇಳ

ಮಂಡ್ಯ, ಜ.9–ಜಿಲ್ಲಾಡಳಿತ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಮಂಡ್ಯ ಸರ್ಕಾರಿ ವಿಶ್ವವಿದ್ಯಾನಿಲಯ ಇವರ ಸಂಯುಕ್ತಾಶ್ರಯದಲ್ಲಿ ರೋಜ್‌ಗಾರ್/ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ,

ವಿವಿಧ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಯಾವುದೇ ಪದವಿ, ಮತ್ತು ಬಿಎಸ್ಸಿ(ನರ್ಸಿಂಗ್) ಉತ್ತೀರ್ಣರಾದ 18 ರಿಂದ 45 ವರ್ಷದೊಳಗಿನ ಅಭ್ಯರ್ಥಿಗಳು ಫೆಬ್ರವರಿ 7 ಬೆಳಗ್ಗೆ 9 ಗಂಟೆಗೆ ತಮ್ಮ ಎಲ್ಲಾ ಸ್ವ-ವಿವರ ಮತ್ತು ಆಧಾರ್ ಕಾರ್ಡ್ ನಕಲು ಪ್ರತಿಗಳೊಂದಿಗೆ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂ. 08232–295010/8073264498/9964181442 ಅನ್ನು ಸಂಪರ್ಕಿಸಬಹುದು ಹಾಗೂ https://bit.ly/4abg0I3 ಲಿಂಕ್ ಬಳಸಿ ನೋಂದಾಯಿಸಿಕೊಳ್ಳಬಹುದು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನರೇಂದ್ರಸ್ವಾಮಿಗೆ ಸಚಿವ ಸ್ಥಾನ ಸಿಗಲಿ ಎಂದ ನ್ಯಾಯಮೂರ್ತಿಗಳ ಹೇಳಿಕೆಗೆ ಖಂಡನೆ

ಮಂಡ್ಯ, ಜ.9– ಮಳವಳ್ಳಿ ತಾಲೂಕಿನ ನ್ಯಾಯಾಲಯದ ಆವರಣದಲ್ಲಿ ದಿನಚರಿ ಹಾಗೂ ಡೈರಿ ಬಿಡುಗಡೆ ವೇಳೆ ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ, ಪಿ.ಎಂ.ನರೇಂದ್ರಸ್ವಾಮಿಗೆ ಸಚಿವ ಸ್ಥಾನ ಸಿಗಲು ಹರಕೆ ಹೊತ್ತಿಕೊಂಡಿರುವುದಾಗಿ ಹೇಳಿದ್ದು, ಇದನ್ನು ಮಾಜಿ ಶಾಸಕ ಡಾ.ಕೆ. ಅನ್ನದಾನಿ ಪ್ರಶ್ನೆ ಮಾಡಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಸಾಮಾನ್ಯರಿಗೆ ನ್ಯಾಯ ಒದಗಿಸುವ ನ್ಯಾಯಾಧೀಶರು ಗೌಪ್ಯತೆ ಕಾಪಾಡುವ ಬದಲಿಗೆ ರಾಜಕಾರಣಿಯೋ, ರಾಜಕಾರಣಿಗಳ ಬೆಂಬಲಿಗರೋ ಎಂಬ ಅನುಮಾನ ಮೂಡುವಂತೆ ವರ್ತಿಸಿದ್ದಾರೆ ಎಂದು ಖಂಡಿಸಿದರು. ವೇದಿಕೆಯೊಂದರಲ್ಲಿ ಓರ್ವ ರಾಜಕಾರಣಿಗೆ ಸಚಿವ ಸ್ಥಾನ ಲಭಿಸಲಿ ಎಂದು ದೇವರಲ್ಲಿ ಹರಕೆ ಹೊತ್ತಿರುವುದಾಗಿ ಹೇಳಿ ರುವ ಅವರು, ಸಚಿವ ಚಲುವರಾಯಸ್ವಾಮಿ ಅವರಲ್ಲಿಯೂ ಮನವಿ ಮಾಡುವುದಾಗಿ ತಿಳಿಸಿದ್ದಾರೆ. ರಾಜಕಾರಣಿಗಳಿಗಿಂತ ಒಂದು ಕೈ ಹೆಚ್ಚಾಗಿ ಭಾಷಣ ಮಾಡಿರುವ ವಿಡಿಯೋ ಸಮೇತ ರಾಷ್ಟ್ರಪತಿಗಳು, ರಾಜ್ಯಪಾಲರು ಹಾಗೂ ಹೈಕೋರ್ಟ್ ಮುಖ್ಯ ನ್ಯಾಯ ಮೂರ್ತಿಗಳಿಗೆ ದೂರು ನೀಡಲಾಗುವುದು ಎಂದರು.

ಅಕ್ರಮ ಮಣ್ಣು ಸಾಗಣೆ; ಭೂ ವಿಜ್ಞಾನ ಇಲಾಖೆಯಿಂದ ದಂಡ!



ವಡಗೆರೆ ಗ್ರಾಮದ ಬಳಿ ಅಕ್ರಮವಾಗಿ ಮಣ್ಣು ಸಾಗಿಸುತ್ತಿದ್ದ ವೇಳೆ ಅಧಿಕಾರಿಗಳು ದಾಳಿ ನಡೆಸಿ ದಂಡ ವಿಧಿಸಿದರು.

ಯಳಂದೂರು: ತಾಲೂಕಿನ ವಡಗೆರೆ ಸಮೀಪದ ಗೌಡಹಳ್ಳಿ ಎಲ್ಲೆಗೆ ಸೇರಿದ ವ್ಯಕ್ತಿಯೊಬ್ಬರ ಜಮೀನಿನಿಂದ ಅಕ್ರಮವಾಗಿ ಮಣ್ಣು ಸಾಗಿಸುತ್ತಿದ್ದ ಟಿಪ್ಪರ್‌ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು 35,100 ರೂ. ದಂಡ ವಿಧಿಸಿದ್ದಾರೆ.

ಬಿಳಿಗಿರಿರಂಗನಬೆಟ್ಟದ ಚೆಕ್‌ಪೋಸ್ಟ್ ರಸ್ತೆ ಕಾಮಗಾರಿಗೆ ಶ್ರೀ ಅನ್ನಪೂರ್ಣೇಶ್ವರಿ ಕನ್‌ಸ್ಟ್ರಕ್ಷನ್‌ಗೆ ಸೇರಿದ ಟಿಪ್ಪರ್‌ನಲ್ಲಿ ಗುರುವಾರ ಅಕ್ರಮವಾಗಿ ಮಣ್ಣನ್ನು ಸಾಗಿಸಲಾಗುತ್ತಿತ್ತು. ಈ ವೇಳೆ ದಾಳಿ ನಡೆಸಿದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ, ದಂಡ ವಿಧಿಸಿದ್ದಾರೆ.

ದಾಳಿ ವೇಳೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ವಿಜ್ಞಾನಿ ಡಾ.ಮಾಲತಿ, ಅಗರ ರಾಜಸ್ವ ನಿರೀಕ್ಷಕ ರಮೇಶ್, ಕಸಬಾ ಹೋಬಳಿ ರಾಜಸ್ವ ನಿರೀಕ್ಷಕ ಯದುಗಿರಿ, ಗ್ರಾಮಲೆಕ್ಕಾಧಿಕಾರಿ ರಮ್ಯಶ್ರೀ, ಸುಹಾಸ್ ಇದ್ದರು.

ತಮಿಳುನಾಡು ಸರ್ಕಾರದ ವಿರುದ್ಧ ಪ್ರತಿಭಟನೆ...



ತಮಿಳುನಾಡು ವಿಧಾನಸಭೆಯಲ್ಲಿ ರಾಷ್ಟ್ರಗೀತೆ ಹಾಡಲು ನಿರಾಕರಣೆ ಮಾಡಲಾಗಿದೆ ಎಂದು ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಚಾಮರಾಜನಗರದ ಚಾಮರಾಜೇಶ್ವರ ಉದ್ಯಾನ ಎದುರು ಪ್ರತಿಭಟನೆ ನಡೆಸಿದರು. ಸೇನಾ ಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ಚಾ.ರಂ.ರಾಜಗೋಪಾಲ್, ನಿಜಧ್ವನಿ ಗೋವಿಂದರಾಜು, ಆಟೋ ಲಿಂಗರಾಜು, ತಾಂಡವಮೂರ್ತಿ, ವೀರಭದ್ರ, ರವಿಚಂದ್ರಪ್ರಸಾದ್ ಕಹಳೆ, ಆಟೋ ಸುರೇಶ್, ಪುಣಜನೂರು ಕನ್ನಡ ಸಂಘಟನೆ ಅಧ್ಯಕ್ಷ ಸುರೇಶ್, ಕುಮಾರ್, ರಂಗಸ್ವಾಮಿನಾಯಕ್, ನಾಗರಾಜು, ಚಂದ್ರಕುಮಾರ್, ಚಂದ್ರು, ರಾಚಪ್ಪ ಇದ್ದರು.

ಸ್ಮಶಾನಕ್ಕೆ ಆಗ್ರಹಿಸಿ ಡಿಎಸ್‌ಎಸ್‌ನಿಂದ ಅಣುಕು ಶವಯಾತ್ರೆ



ಸ್ಮಶಾನಕ್ಕೆ ಜಾಗ ಮಂಜೂರು ಮಾಡಬೇಕು ಎಂದು ಆಗ್ರಹಿಸಿ ದಸಂಸ ಕಾರ್ಯಕರ್ತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜ.9–ಜಿಲ್ಲೆಯಲ್ಲಿ ಮಾದಿಗ ಜನಾಂಗದ ಸ್ಮಶಾನಕ್ಕೆ ಜಾಗ ಮಂಜೂರು ಮಾಡುವುದು ಹಾಗೂ ಸ್ಮಶಾನಗಳಿಗೆ ಮೂಲಸೌಕರ್ಯ ಒದಗಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ (ಸ್ವಾಭಿಮನಿ ಪ್ರೊ.ಬಿ.ಕೃಷ್ಣಪ್ಪ ಬಣ) ವತಿಯಿಂದ ನಗರದಲ್ಲಿ ಜಿಲ್ಲಾಡಳಿತ ಎದುರು ಅಣಕು ಶವಯಾತ್ರೆ ಮೂಲಕ ಪ್ರತಿಭಟನೆ ನಡೆಸಲಾಯಿತು.

ಶ್ರೀ ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಸಮಿತಿ ಜಿಲ್ಲಾ ಸಂಚಾಲಕ ಬೆಳ್ಳಿಯಪ್ಪ ಹಾಗೂ ಅಂಬೇಡ್ಕರ್ ವಾದಿ ಅರಕಲವಾಡಿ ನಾಗೇಂದ್ರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಅಣಕು ಶವ ಹೊತ್ತು ಮೆರವಣಿಗೆ ನಡೆಸಿದರು. ಪಚ್ಚಪ್ಪ ವೃತ್ತದಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿದರು. ಬಳಿಕ ಪೊಲೀಸರು ಅಣಕು ಶವವನ್ನು ವಶಪಡಿಸಿಕೊಂಡರು.

ನಂತರ ಪ್ರತಿಭಟನಾಕಾರರು ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟನೆ ನಡೆಸಿದರು. ಜಿಲ್ಲಾಡಳಿತ ವಿರುದ್ಧ ಘೋಷಣೆ ಕೂಗಿದರು. ಬಳಿಕ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು.

ಗುಂಡ್ಲುಪೇಟೆ, ಚಾಮರಾಜನಗರ, ಹನೂರು, ಯಳಂದೂರು, ಕೊಳ್ಳೇಗಾಲ ತಾಲೂಕು ವ್ಯಾಪ್ತಿಯ ಹಲವು ಗ್ರಾಮಗಳ ಮಾದಿಗ ಜನಾಂಗಕ್ಕೆ ಸ್ಮಶಾನ ಇಲ್ಲ. ಅಲ್ಲದೇ ಇರುವ ಸ್ಮಶಾನಗಳಿಗೆ ಮೂಲ ಸೌಕರ್ಯಗಳಿಲ್ಲ. ಇದರಿಂದ ಶವಸಂಸ್ಕಾರಕ್ಕೆ ತೊಂದರೆಯಾಗುತ್ತಿದೆ. ಈ ಸಂಬಂಧ ಹಲವು ಬಾರಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಪ್ರತಿಭಟನಾಕಾರರು ದೂರಿದರು. ಸ್ಮಶಾನ ಹಾಗೂ ಮೂಲ ಸೌಕರ್ಯ ಒದಗಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸಬೇಕು. ಮಾದಿಗ ಜನಾಂಗದ ಗ್ರಾಮಗಳನ್ನು ಗುರುತಿಸಿ, ಸ್ಮಶಾನಕ್ಕೆ ಜಾಗ ನೀಡುವುದು ಹಾಗೂ ಈಗಾಗಲೇ ಇರುವ ಸ್ಮಶಾನಗಳನ್ನು ಅಭಿವೃದ್ಧಿಪಡಿಸಲು ಕ್ರಮ ವಹಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಆಲ್ ಇಂಡಿಯಾ ಬಹುಜನ ಸಮಾಜ ಪಕ್ಷದ ಜಿಲ್ಲಾಧ್ಯಕ್ಷ ರಾಜೇಂದ್ರ ಸಿದ್ಧಾರ್ಥ, ಮಂಜುನಾಥ್, ಪ್ರಸಾದ್, ಶಾಕ್ಯ ಸುಂದರ್, ದೇವರಾಜು, ಸಂತೋಷ, ಸುಂದರ್, ಶಾಗ್ಯ ಮಹೇಶ್, ದೊಡ್ಡಿಂದುವಾಡಿ ಸಿದ್ದರಾಜು, ವಕೀಲ ರಾವಣ, ರಾಚಪ್ಪ ಚಿತ್ರ ಮಂಜುಳಾ, ಪೊನ್ನಮ್ಮ ಮಹದೇವಸ್ವಾಮಿ, ರಾಚಪ್ಪ, ಮಾದೇಶ್ ಇತರರು ಭಾಗವಹಿಸಿದ್ದರು.

ಇಂದಿನಿಂದ ವಸತಿ ನಿಲಯ ಪ್ರವೇಶಕ್ಕೆ ಆಯ್ಕೆ

ಚಾಮರಾಜನಗರ: ಕ್ರೀಡಾ ವಸತಿ ಶಾಲೆ, ವಸತಿನಿಲಯ ಪ್ರವೇಶಕ್ಕೆ ಆಯ್ಕೆ ಪ್ರಕ್ರಿಯೆ ಜ.10 ರಿಂದ 28ರವರೆಗೆ ನಡೆಯಲಿದೆ.

ಜ.10ರಂದು ಗುಂಡ್ಲುಪೇಟೆ ಡಿ.ದೇವರಾಜ ಅರಸು ತಾಲೂಕು ಕ್ರೀಡಾಂಗಣ, 13ರಂದು ಯಳಂದೂರಿನ ಸರ್ಕಾರಿ ಪದವಿಪೂರ್ವ ಕಾಲೇಜು, 15ರಂದು ಕೊಳ್ಳೇಗಾಲ ಮಹದೇಶ್ವರ ಕಾಲೇಜು ಮೈದಾನ ಹಾಗೂ ತಾಲೂಕು ಕ್ರೀಡಾಂಗಣ, 16ರಂದು ಮಹದೇಶ್ವರ ಕ್ರೀಡಾಂಗಣ, 20 ಮತ್ತು 28ರಂದು ಚಾಮರಾಜನಗರ ಡಾ.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯ್ಕೆ ಮಾಡಲಾಗುವುದು.

ಮಾಹಿತಿಗೆ ಫುಟ್‌ಬಾಲ್ ತರಬೇತುದಾರ ಬಿ.ಕೆ. ಗೋಪಾಲ್(9945615695), ವಿ.ರಘು (78920 02795), ಪಿ.ವಿ.ವಿವೇಕ್(9809684102) ಅಥವಾ ದೂ.ಸಂ.08226–224932 ಅನ್ನು ಸಂಪರ್ಕಿಸಿ ಎಂದು ಕ್ರೀಡಾ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಮನೆ ಬಾಗಿಲು ಮುರಿದು ಲಕ್ಷಾಂತರ ಮೌಲ್ಯದ ಚಿನ್ನಾಭರಣ ಕಳವು

750 ಗ್ರಾಂ ಚಿನ್ನ, 15 ಕೆಜಿ ಬೆಳ್ಳಿ, 5.5 ಲಕ್ಷ ರೂ. ದೋಚಿದ ಖದೀಮರು



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಭೇಟಿ ನೀಡಿ ಪರಿಶೀಲಿಸಿ, ಮನೆಯವರಿಂದ ಮಾಹಿತಿ ಪಡೆದರು.

ಚಾಮರಾಜನಗರ, ಜ.9–ಮನೆಯಲ್ಲಿ ಯಾರು ಇಲ್ಲದನ್ನು ಗಮನಿಸಿದ ಖದೀಮರು ಮನೆ ಬಾಗಿಲು ಮುರಿದು ಲಕ್ಷಾಂತರ ರೂ. ನಗದು ಹಾಗೂ ಅಪಾರ ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ನಗರದ ಸಿದ್ಧಾರ್ಥ ಬಡಾವಣೆಯಲ್ಲಿ ಬುಧವಾರ ರಾತ್ರಿ ನಡೆದಿದೆ.

ನಿವೃತ್ತ ಪ್ರಾಂಶುಪಾಲ ಶ್ರೀನಿವಾಸ ಕುಮಾರ್ ಅವರ ಮನೆಯಲ್ಲಿ ಕಳ್ಳತನವಾಗಿದ್ದು, 5.5 ಲಕ್ಷ ನಗದು, 750 ಗ್ರಾಂ ಚಿನ್ನಾಭರಣ ಮತ್ತು 15 ಕೆಜಿ ಬೆಳ್ಳಿ ಸಾಮಗ್ರಿ, ಟ್ಯಾಬ್ ಮತ್ತು ಫೋನ್, ಸಾವಿರಾರು ರೂ.ಬೆಲೆಬಾಳುವ 40 ಸೀರೆಗಳನ್ನು ಕದ್ದೊಯ್ದಿದ್ದಾರೆ. ಮನೆಯಲ್ಲಿದ್ದ ಚಾಕೊಲೇಟ್‌ಗಳನ್ನು ತಿನ್ನುತ್ತಾ ಕಳ್ಳರು ಎಲ್ಲವನ್ನೂ ಹುಡುಕಾಡಿದ್ದಾರೆ. 250 ಗ್ರಾಂನಷ್ಟಿದ್ದ ಸಣ್ಣ ಒಡವೆಗಳು, ಮೂಗುತಿ, ಓಲೆಗಳನ್ನು ಅಲ್ಲೇ ಬಿಟ್ಟಿದ್ದಾರೆ.

ಎಸ್‌ಪಿ ಪರಿಶೀಲನೆ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ಮನೆಯವರಿಂದ ಮಾಹಿತಿ ಪಡೆದರು. ಶ್ವಾನ ದಳ, ಬೆರಳಚ್ಚು ತಂಡವದರು ಕಳ್ಳರ ಜಾಡು ಬೇಧಿಸಲು ಮುಂದಾಗಿದ್ದಾರೆ. ಈ ಸಂಬಂಧ ಚಾಮರಾಜನಗರ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಬ್ಬಾ ಪಟೇಲ್ ಕೈಯಲ್ಲಿ 'ರಾಮರಸ'



ಹೆಬ್ಬಾ ಪಟೇಲ್ ಭಾರತೀಯ ಚಿತ್ರರಂಗದ ಹೆಸರಾಂತ ನಟಿಯರಲ್ಲಿ ಒಬ್ಬರು. ಶರಣ್ ಅಭಿನಯದ ಅಧ್ಯಕ್ಷ ಚಿತ್ರದಿಂದ ನಟನೆಯನ್ನು ಶುರುಮಾಡಿದ ಅವರು ಮುಂದೆ ಹಲವಾರು ಭಾಷೆಯ ಸಿನಿಮಾಗಳಲ್ಲಿ ನಟಿಸುವ ಮೂಲಕ ಖ್ಯಾತಿ ಗಳಿಸಿದ್ದಾರೆ. ಅಧ್ಯಕ್ಷ ನಂತರ ತೆಲುಗಿನ ಕುಮಾರಿ 21ಎಫ್ ಎಂಬ ಚಿತ್ರ ಇವರಿಗೆ ದೊಡ್ಡಮಟ್ಟದ ಹೆಸರು, ಖ್ಯಾತಿಯನ್ನು ತಂದುಕೊಟ್ಟಿತು. ಸದ್ಯ ಇವರೀಗ ಗುರು ದೇಶಪಾಂಡೆ ಅವರ ಜಿ.ಸಿನಿಮಾಸ್ ಹಾಗೂ ಸೆವೆನ್‌ಸ್ಟಾರ್ ಸ್ಟುಡಿಯೋ ನಿರ್ಮಾಣದ, ಬಿ.ಎಂ.ಗಿರಿರಾಜ್ ಅವರ ನಿರ್ದೇಶನದ "ರಾಮರಸ" ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ. ಈಗಾಗಲೇ ಚಿತ್ರಿಕರಣ ಮುಗಿಸಿರುವ "ರಾಮರಸ" ಚಿತ್ರತಂಡ ಸದ್ಯ ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ.



'ಕುಚಿಕು' ಚಿತ್ರದಲ್ಲಿ ಅರ್ಜುನ್ ಚೋಹಾನ್, ಬಸವರಾಜ್ ಮತ್ತು ನಾಯಕಿ

ಸ್ನೇಹದ ಮಹತ್ವ ಸಾರುವ ಕುಚಿಕು ಫೆ.14ಕ್ಕೆ ತೆರೆಗೆ

ಸ್ನೇಹ ಹಾಗೂ ಪ್ರೀತಿಯ ಮಹತ್ವದ ಬಗ್ಗೆ ಕಥೆ ಹೊಂದಿದ, ಮೈಸೂರು ರಾಜು ಅವರ ನಿರ್ದೇಶನದ "ಕುಚಿಕು" ಚಿತ್ರದ ಟೀಸರ್ ಹಾಗೂ ಹಾಡುಗಳ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಫಿಲಂ ಚೇಂಬರ್ ಉಪಾಧ್ಯಕ್ಷ ಎಂ.ಎನ್. ಕುಮಾರ್, ನಿರ್ಮಾಪಕ ಎಂ.ಡಿ.ಪಾರ್ಥಸಾರಥಿ, ನೃತ್ಯ ನಿರ್ದೇಶಕ ಜಗ್ಗು ಮಾಸ್ಟರ್ ಸಮಾರಂಭದಲ್ಲಿ ಹಾಜರಿದ್ದರು. ಸ್ನೇಹ ಪ್ರೀತಿಯ ಸುತ್ತ ಸಾಗುವ ಈ ಚಿತ್ರ ಫೆ. 14ರ ಪ್ರೇಮಿಗಳ ದಿನದಂದು ಬಿಡುಗಡೆಯಾಗುತ್ತಿದೆ.

ನಿರ್ದೇಶಕ ಮೈಸೂರು ರಾಜು ಮಾತನಾಡುತ್ತ, ನಾನು ಕಳೆದ 26 ವರ್ಷಗಳಿಂದ ಡ್ಯಾನ್ಸ್ ಮಾಸ್ಟರ್ ಆಗಿ ಕೆಲಸ ಮಾಡಿದ್ದು, ಹಿಂದೆ ನೃತ್ಯಂ ಎಂಬ ಸಿನಿಮಾ ನಿರ್ದೇಶಿಸಿದ್ದೆ. ಇದು ನನ್ನ ಎರಡನೇ ಚಿತ್ರ. ಚಿತ್ರದಲ್ಲಿ ಸ್ನೇಹದ ಕುರಿತಾದ ಕಾನ್ಸೆಪ್ಟ್ ಜೊತೆಗೆ ಸೆಂಟಿಮೆಂಟ್ ಸನ್ನಿವೇಶಗಳು ಪ್ರೇಕ್ಷಕರ ಮನಸ್ಸಿಗೆ ಹತ್ತಿರವಾಗಲಿದೆ. ಮೈಸೂರು ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ ಎಂದು ಹೇಳಿದರು. ನಾಯಕ ಅರ್ಜುನ್ ಚೋಹಾನ್ ಮಾತನಾಡಿ, ಸ್ನೇಹಿತರ ಕುರಿತಾದ ಈ ಚಿತ್ರದಲ್ಲಿ ನಾನೂ ಒಬ್ಬ ಸ್ನೇಹಿತನಾಗಿ ಅಭಿನಯಿಸಿದ್ದೇನೆ ಎಂದು ಹೇಳಿದರು. ಮತ್ತೊಬ್ಬ ನಾಯಕ ಬಸವರಾಜ್ ಮಾತನಾಡಿ, ಗುಲ್ಬರ್ಗ ಮೂಲದವನಾದ ನಾನು ಮೂಲತಃ ರಂಗಭೂಮಿ ಕಲಾವಿದ. ಈ ಚಿತ್ರದಲ್ಲಿ ನಾನು ಹಾಗೂ ಅರ್ಜುನ್ "ಕುಚಿಕು" ಗೆಳೆಯರಾಗಿ ನಟಿಸಿದ್ದೇವೆ, ನಮ್ಮಿಬ್ಬರ ಮೇಲೆ ಬಹುತೇಕ ಕಥೆ ಸಾಗುತ್ತದೆ ಎಂದರು.

ಖಳನಟ ಶಿವಾಜಿ ಮಾತನಾಡುತ್ತ, ಈ ಚಿತ್ರದಲ್ಲಿರುವ ಬಹುತೇಕರು ಮೈಸೂರಿನವರು. ನಾನು ಕೂಡ ಮೈಸೂರಿನವನಾಗಿದ್ದು, ವಿಲನ್ ಪಾತ್ರ ನಿರ್ವಹಿಸಿದ್ದೇನೆ. ಇದರ ನಂತರ ಆರ್.ಚಂದ್ರು ಅವರ ಫಾದರ್ ಮತ್ತು ಸಿದ್ದೇಗೌಡರ ಕುಂಟೆಬಿಲ್ಲೆ ಮುಂತಾದ ಚಿತ್ರಗಳಲ್ಲಿ ನಟಿಸೋ ಅವಕಾಶ ಸಿಕ್ಕಿದೆ ಎಂದರು. ಒಂದು ಚಿತ್ರ ಗೆಲ್ಲಬೇಕು ಅಂದರೆ ನಿರ್ದೇಶಕ, ನಿರ್ಮಾಪಕರ ಜೊತೆಗೆ ಅಭಿನಯಿಸಿರುವ ಎಲ್ಲಾ ಕಲಾವಿದರು ಪ್ರಚಾರದಲ್ಲಿ ತೊಡಗಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವರು ಪ್ರಚಾರಕ್ಕೆ ಬರುವುದಿಲ್ಲ. ಶೂಟಿಂಗ್ ಇದೆ ಎಂದು ನೆಪವೊಡ್ಡಿ ಗೈರಾಗುತ್ತಾರೆ ಎಂಬ ಮಾತನ್ನು ಸಹ ಶಿವಾಜಿ ವೇದಿಕೆ ಮೇಲೆ ಹೇಳಿಕೊಂಡರು. ಆ ಸಂದರ್ಭದಲ್ಲಿ ಎಂ.ಎನ್.ಕುಮಾರ್ ಅವರು ಮಾತನಾಡಿ, ಚಿತ್ರೀಕರಣಕ್ಕೂ ಮುನ್ನ ನಿರ್ಮಾಪಕರು, ಕಲಾವಿದರೊಂದಿಗೆ ಪ್ರಚಾರದಲ್ಲಿ ಜೊತೆ ಬರಬೇಕೆಂದು ಅಗ್ರಿಮೆಂಟ್ ಮಾಡಿಕೊಳ್ಳುವುದು ಸೂಕ್ತ ಎಂದು ಸಲಹೆ ನೀಡಿದರು.

ಸಿನಿಮಾ ಮೇಲಿನ ಪ್ರೀತಿಯಿಂದ ಕಷ್ಟಪಟ್ಟು ಈ ಚಿತ್ರವನ್ನು ನಿರ್ಮಾಣ ಮಾಡಿರುವುದಾಗಿ ನಿರ್ಮಾಪಕಿ ನಾಗರತ್ನಮ್ಮ ಹೇಳಿದರು. ಚಿತ್ರದಲ್ಲಿ ಐದು ಹಾಡುಗಳಿದ್ದು ಎ.ಟಿ.ರವೀಶ್ ಅವರು ಮ್ಯೂಸಿಕ್ ಮಾಡಿದ್ದಾರೆ.

'ತುರ್ರಾ' ಮನದ ಕಡಲಿನಲ್ಲೊಂದು ಅರ್ಥವಾಗದ ಹಾಡು...



ಮುಂಗಾರು ಮಳೆ ನಿರ್ಮಾಪಕ ಈ.ಕೃಷ್ಣಪ್ಪ ಅವರ ನಿರ್ಮಾಣದ ಮತ್ತೊಂದು ಚಿತ್ರ 'ಮನದಕಡಲು' ಬಿಡುಗಡೆಗೆ ಸಿದ್ಧವಾಗಿದೆ. ಈ ಚಿತ್ರಕ್ಕೂ ಸಹ ಭಟ್ಟರದ್ದೇ ನಿರ್ದೇಶನವಿದ್ದು, ಈಗಾಗಲೇ ಚಿತ್ರದ ಎರಡು ಹಾಡುಗಳು ಬಿಡುಗಡೆಯಾಗಿ ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ಈಗ ಚಿತ್ರದ ಮತ್ತೊಂದು ಗೀತೆ "ತುರ್ರಾ" ಬಿಡುಗಡೆಯಾಗಿದೆ. ನೆಲಮಂಗಲದ ಬಳಿಯ ನಿರ್ಮಾಪಕರ ತೋಟದಲ್ಲಿ ನಡೆದ ಸಮಾರಂಭದಲ್ಲಿ ಹಾಡು ಬಿಡುಗಡೆಯಾಯಿತು. ಯೋಗರಾಜ್ ಭಟ್ ಅವರೆ ಬರೆದಿರುವ ಈ ಹಾಡಿಗೆ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ, ಸಂಜಿತ್ ಹೆಗ್ಡೆ ಹಾಗೂ ಪ್ರಾರ್ಥನಾ ದನಿಯಾಗಿದ್ದಾರೆ.

ಯೋಗರಾಜ ಭಟ್ ಮಾತನಾಡುತ್ತ, ನನ್ನ ಹಾಗೂ ವಿ.ಹರಿಕೃಷ್ಣ ಅವರ ಕಾಂಬಿನೇಶನ್‌ನಲ್ಲಿ ಬಂದಿರುವ ಅರ್ಥವಿರದ ಸಾಕಷ್ಟು ಹಾಡುಗಳು ಹಿಟ್ ಆಗಿವೆ. ಆ ಅನರ್ಥದ ಹಾಡುಗಳ ಪಟ್ಟಿಗೆ ಈಗ "ತುರ್ರಾ" ಸೇರ್ಪಡೆಯಾಗಿದೆ. ನಾನು ಚಿಕ್ಕವನಿದ್ದಾಗ ನಮ್ಮೂರಿನಲ್ಲಿ ಅಲಿಮಾ ಎಂಬ ಹುಚ್ಚನಿದ್ದ. ಆತನಿಗೆ ಮಕ್ಕಳೆಂದರೆ ಪ್ರೀತಿ. ನಾವೆಲ್ಲಾ ಆತನ ಹಿಂದೆ ಸುತ್ತುತ್ತಿದ್ದೆವು. ಆತ ಸದಾ 'ಬೊಂಬುವ್ವೆ ಟರ್‍ರವ್ವೆ' ಎಂಬ ಪದವನ್ನು ಬಳಸುತ್ತಿದ್ದ. ಆ ಪದವೇ ಈ ಹಾಡಿಗೆ ಸ್ಫೂರ್ತಿ. ಕೃಷ್ಣಪ್ಪ ಅವರ ತೋಟದಲ್ಲೇ ಚಿತ್ರೀಕರಣ ಆರಂಭವಾಗಿತ್ತು, ಈಗ ಇದೇ ಸ್ಥಳದಲ್ಲಿ ಶೂಟಿಂಗ್ ಮುಗಿಸಿ ಕುಂಬಳಕಾಯಿ ಒಡೆದಿದ್ದೇವೆ ಎಂದರು. ನಾನು ಸ್ಟುಡಿಯೋದಲ್ಲಿ ತುಂಬಾ ಹೊತ್ತು ಹಾಡಿರುವ ಹಾಡು ಇದೆ. ಲಿರಿಕಲ್ ಪೇಜ್ ಹಿಡಿದು ಹಾಡುವಾಗ ಪದಗಳನ್ನು ಹೇಳಲು ಬಹಳ ಹೊತ್ತಾಗುತ್ತಿತ್ತು. ಇಂತಹ ಕಷ್ಟದ ಹಾಗೂ ವಿರಳವಾದ ಪದಗಳನ್ನು ಬಳಸಿ ಯೋಗರಾಜ್ ಭಟ್ ಅವರು ಒಂದೊಳ್ಳೆ ಹಾಡು ಬರೆದಿದ್ದಾರೆ ಎಂದು ವಿ.ಹರಿಕೃಷ್ಣ ತಿಳಿಸಿದರು.

ನಿರ್ಮಾಪಕ ಈ.ಕೃಷ್ಣಪ್ಪ ಮಾತನಾಡುತ್ತ ನನಗೆ ಈ ಸಾಂಗ್‌ಲೈನ್ ಕೇಳಿದ ತಕ್ಷಣ ಇಷ್ಟವಾಯಿತು. ನಿರ್ದೇಶಕರಿಗೆ ಈ ಹಾಡೇ ಇರಲಿ ಎಂದೆ. ಹರಿಕೃಷ್ಣ, ಸಂಜಿತ್‌ಹೆಗ್ಡೆ ಹಾಗೂ ಪ್ರಾರ್ಥನಾ ಅದ್ಭುತವಾಗಿ ಹಾಡಿದ್ದಾರೆ. ಚಿತ್ರಕ್ಕೆ ಈ ಹಾಡು ಪ್ಲಸ್ ಆಗಲಿದೆ ಎಂದರು. ನಾಯಕ ಸುಮುಖ ಮಾತನಾಡುತ್ತ, ಯೋಗರಾಜ್ ಭಟ್ಟರು ಚಿತ್ರೀಕರಣದ ಸಮಯದಲ್ಲೂ ಇಂತಹ ಪದಗಳನ್ನು ಬಳಸುತ್ತಿರುತ್ತಾರೆ. ಈಗ ಆ ಪದಗಳನ್ನೇ ಬಳಸಿ ಹಾಡು ಬರೆದಿದ್ದಾರೆ. ಈ ಹಾಡು ತುಂಬಾ ಚೆನ್ನಾಗಿದೆ. ಈ ಜಾಗದಲ್ಲೇ ನಮ್ಮ ಚಿತ್ರ ಆರಂಭವಾಗಿದ್ದು, ಇದೇ ಜಾಗದಲ್ಲಿ ಹಾಡು ಬಿಡುಗಡೆಯಾಗುತ್ತಿರುವುದು ಖುಷಿಯಾಗಿದೆ ಎಂದರು.

ಇಂಥ ಅನರ್ಥದ ಹಾಡನ್ನು ಪ್ರೇಕ್ಷಕರಿಗೆ ಅರ್ಥ ಮಾಡಿಸಲು ಭಟ್ಟರೊಬ್ಬರಿಗೇ ಸಾಧ್ಯ ಎಂದು ಹಿರಿಯನಟ ದತ್ತಣ್ಣ ಹೇಳಿದರು. ನಾಯಕಿ ರಾಶಿಕಾ ಶೆಟ್ಟಿ, ಸಹ ನಿರ್ಮಾಪಕ ಜಿ.ಗಂಗಾಧರ್, ಕಾರ್ಯಕಾರಿ ನಿರ್ಮಾಪಕ ಪ್ರತಾಪ್ ಹಾಗೂ ಛಾಯಾಗ್ರಾಹಕ ಸಂತೋಷ್‌ರೈ ಪಾತಾಜೆ ಚಿತ್ರದ ಕುರಿತಂತೆ ಮಾತನಾಡಿದರು.

'ಕೋರ' ಪ್ರಕೃತಿಮಾತೆಯ ಮಕ್ಕಳ ಕಥೆ




ರಿಯಾಲಿಟಿ ಶೋ ಮೂಲಕ ಗುರುತಿಸಿಕೊಂಡಿದ್ದ ಪ್ರತಿಭೆ ಸುನಾಮಿ ಕಿಟ್ಟಿ ನಾಯಕನಾಗಿ ನಟಿಸಿರುವ "ಕೋರ" ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಫೆ.7ರಂದು ಈ ಚಿತ್ರ ಪ್ಯಾನ್ ಇಂಡಿಯಾ ಲೆವೆಲ್‌ನಲ್ಲಿ ತೆರೆಕಾಣುತ್ತಿದೆ. ಇದರ ಕನ್ನಡ ಟ್ರೇಲರನ್ನು ಮಹರ್ಷಿ ಆನಂದ ಗುರೂಜಿ ಹಾಗೂ ಪಾಲನಹಳ್ಳಿ ಗುರೂಜಿ ಅವರು ಬಿಡುಗಡೆ ಮಾಡಿದರೆ ತಮಿಳು ಟ್ರೇಲರನ್ನು ನಿರ್ದೇಶಕ ಆರ್.ಚಂದ್ರು ಹಾಗೂ ಬಹದ್ದೂರ್ ಚೇತನ್ ರಿಲೀಸ್ ಮಾಡಿದರು. ಫಿಲಂ ಚೇಂಬರ್ ಅಧ್ಯಕ್ಷ ನರಸಿಂಹಲು, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್, ಒರಟ ಪ್ರಶಾಂತ್, ನಿರ್ಮಾಪಕ ಸಂಜಯ್ ಗೌಡ, ತುಕಾಲಿ ಸಂತೋಷ್ ಸಮಾರಂಭದಲ್ಲಿ ಹಾಜರಿದ್ದರು. ನಿರ್ಮಾಪಕ ಪಿ. ಮೂರ್ತಿ ಮಾತನಾಡುತ್ತ, ಇದು ನಮ್ಮ ನೆಲದ, ಪ್ರಕೃತಿಮಾತೆಯ ಮಕ್ಕಳ ಕಥೆ. ಆದಿವಾಸಿ ಬುಡಕಟ್ಟು ಜನಾಂಗ ಹಾಗೂ ರಾಕ್ಷಸನೊಬ್ಬನ ನಡುವಿನ ಸಂಘರ್ಷದ ಕಥೆಯೂ ಹೌದು. ಹೆಚ್ಚಿನ ಭಾಗದ ಚಿತ್ರೀಕರಣ ಸಕಲೇಶಪುರ, ಶೃಂಗೇರಿ, ಉಡುಪಿ, ಮಂಗಳೂರು ಸುತ್ತಮುತ್ತಲ ಕಾಡಿನಲ್ಲೇ ನಡೆದಿದೆ. ನಿರ್ದೇಶಕರು ಒಂದೊಳ್ಳೆ ಕಥೆ ರೆಡಿ ಮಾಡಿದ್ದಾರೆ. ಮೊದಲ ಚಿತ್ರದಲ್ಲೇ ಸುನಾಮಿ ಕಿಟ್ಟಿ ಉತ್ತಮವಾಗಿ ನಟಿಸಿದ್ದಾರೆ. ನಾನು ಕೂಡ ಕಠೋರ ಎಂಬ ರಾಕ್ಷಕಸನ ಪಾತ್ರ ಮಾಡಿದ್ದೇನೆ. ಫೆಬ್ರವರಿ 7 ರಂದು ನಮ್ಮ ಚಿತ್ರ ಕನ್ನಡ, ತಮಿಳು ಹಾಗೂ ತೆಲುಗಿನಲ್ಲಿ ಬಿಡುಗಡೆಯಾಗಲಿದೆ ಎಂದರು.

ನಂತರ ಮಾತನಾಡಿದ ನಿರ್ದೇಶಕ ಶ್ರೀ, "ಕೋರ" ನಲವತ್ತು ವರ್ಷಗಳ ಹಿಂದಿನ ಕಥೆ. ಆ ಕಾಲದಲ್ಲಿ ಪ್ರಕೃತಿಯನ್ನು ದೇವರ ರೀತಿ ಆರಾಧಿಸುತ್ತಿದ್ದರು. ಈಗ ಒಂದು ಅಡಿ ಜಾಗಕ್ಕೂ ಹೊಡೆದಾಡುತ್ತಿದ್ದಾರೆ. ವಿಭಿನ್ನ ಕಂಟೆಂಟ್ ಹೊಂದಿರುವ ಕಮರ್ಷಿಯಲ್ ಚಿತ್ರವಿದು. ನಾವು ಮೊದಲು ಕನ್ನಡ ಚಿತ್ರ ಅಂತಲೇ ಪ್ರಾರಂಭಿಸಿದೆವು. ಸಿನಿಮಾ ನೋಡಿದ ಕೆಲವರು ಇದು ಎಲ್ಲಾ ಭಾಗಕ್ಕೂ ಹೊಂದುವ ಕಥೆ. ಹಾಗಾಗಿ ಎಲ್ಲಾ ಭಾಷೆಗಳಲ್ಲೂ ಬಿಡುಗಡೆ ಮಾಡಿ ಎಂದು ಸಲಹೆ ನೀಡಿದ್ದರಿಂದ ಪ್ಯಾನ್ ಇಂಡಿಯಾ ಸಿನಿಮಾ ಆಯಿತು ಎಂದರು. ಸಹ ನಿರ್ಮಾಪಕ ಚೆಲುವ ರಾಜು, ಸುನಾಮಿ ಕಿಟ್ಟಿ, ಚರಿಷ್ಮಾ, ಎಂ.ಕೆ.ಮಠ, ನೀನಾಸಂ ಅಶ್ವಥ್, ಯತಿರಾಜ್, ಸೌಜನ್ಯ, ಸಂಗೀತ ನಿರ್ದೇಶಕ ಹೇಮಂತ್ ಕುಮಾರ್, ಛಾಯಾಗ್ರಾಹಕ ಸೆಲ್ವಂ ಹಾಗೂ ತಮಿಳು ವಿತರಕ ಶಾನ್ ಹಾಗೂ ತೆಲುಗು ವಿತರಕ ಬಾಲಾಜಿ ಕೋರ ಚಿತ್ರದ ಕುರಿತಂತೆ ಮಾತನಾಡಿದರು.

ಸಿನಿಪದಬಂಧ-559



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ರಾಜ್‌ಕುಮಾರ್-ಶಂಕರ್‌ನಾಗ್ ಜೋಡಿಯ ಮಿಲನ 6
5."_ _ _ _ ಶಿವಗುಣ ಸಂಕೀರ್ತನಾ ನಿಜಪದ ಪಾವನಾ..... ", 4
7.ಡೈನಾಮಿಕ್ ದೇವರಾಜ್ ರಾಜರುಗಳ ಒಡೆಯ 4
8.ಲಂಯನ್ _ _ _ _ _ _ 9
11."ಶಕ್ತಿ"ಯ ಹಿಂದೆ ಜನರಿದ್ದಾರೆ 2
12.ಚಳಿ ಚಳಿ ತಾಳೆನು ಹಾಡಿನ ನಾಯಕಿ 3
14.ಇಲ್ಲೇ ಮೇಲಿನಿಂದ ಕೆಳಕ್ಕೆ "14"ರಲ್ಲಿ ಇದರ ಉತ್ತರಾರ್ಧವಿದೆ 3
17.ದುನಿಯಾ ವಿಜಯ್ ಗೊಲ್ಲನಾಗಲು ಯೋಗರಾಜ್ ಭಟ್ ನಿರ್ದೇಶಕ 5
18."ರಥ" ಎಳೆದ ಏಳನೇಯ ದಿವಸ 3
19.ಪ್ರಭಾಕರ್ ನ ಮಾತೃ ಭೂಮಿ 4

ಮೇಲಿನಿಂದ ಕೆಳಕ್ಕೆ

2.ಮುಂಗಾರು ಮಳೆ ಸುರಿಸಿದ ನಟಿ 4
3.ಶ್ರೀ ಮುರಳಿ ಕೊಬ್ಬಿದ ಆನೆ 4
4.ಅನಂತ್‌ನಾಗ್ ಅಭಿನಯಕ್ಕೆ ಪಿ.ಲಂಕೇಶ್ ನಿರ್ದೇಶನವಿದೆ 4
6." ರಘುಪತಿ ರಾಘವ ರಾಜಾರಾಮ್ _ _ _ _ _ _ ಸೀತಾರಾಮ್..... ", 6
7."ಹೃದಯವಂತ"ನ ಸಹೋದರಿ 6
9.ಪಿ.ಸಿ.ರಮೇಶ್ ನಿರ್ದೇಶನದಲ್ಲಿ ಸಹೋದರರು ಗೊಂದಲಕ್ಕೊಳಗಾಗಿದ್ದಾರೆ 7
10.ಶಿವರಾಜ್ ಕುಮಾರ್ "ಅಸುರ" 3
13.ನಿನಗಾಗಿ ಚಿತ್ರದ ನಾಯಕಿ 3
14.ಇಲ್ಲೇ ಎಡದಿಂದ ಬಲಕ್ಕೆ "14"ರಲ್ಲಿ ಇದರ ಪೂರ್ವಾರ್ಧವಿದೆ 3
15.ಸಂಜಯ್ - ಅರ್ಚನಾ ಅಭಿನಯಕ್ಕೆ ಮಾಲಾಶ್ರೀಯ ತೀರ್ಮಾನ 3
16.ಕಚ್ಚುವ ಹುಳುಗಳು ನಿರ್ಮಿಸಿದ ಪಂಜರ 4

ಸಿನಿ ಪದಬಂಧ 558ರ ಉತ್ತರ

ಮು	ಗಿ	ಲ	ಚುಂ	ಬ	ನ		ಜ			
	ರಿ				ವ		ರಾ	ಮ	ಚಾ	ರಿ
	ಬಾ		ಜಾ		ತಾ		ಘ			
ಅ	ಲೆ	ಮಾ	ರಿ		ರೆ	ಡಿ	ಮೇ	ಡ್	ಗಂ	ಡ
ವ್ಯ			ಬಿ			ಕ್ಕಿ			ಧ	
ತ	ರ್ಕ		ದ್ದ		ಮಾ	ಮಾ	ಶ್ರೀ		ರ್ವ	
ಘ			ಜಾ			ಧ		ಸಿ		
ಳಿ		ಅ	ಣ	ಕು		ವ		ತಾ		ಇಂ
ಗೆ		ತಿ		ಬೇ		ರಾ	ಜ	ರಾ	ಜೇಂ	ದ್ರ
		ರ		ರ		ವ್				ಜಿ
ಮ	ನ್ಮ	ಥ					ಅ	ಭಿ	ಜಿ	ತ್

ವಿಜೇತರು: ಎಸ್.ವೆಂಕಟೇಶ್, 1128/5, ಮೊದಲನೇ ಕ್ರಾಸ್, ಮಿಲ್ಕ್ ಸೆಂಟರ್ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು-08

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಜ.24ರಂದು ಕೆ.ಆರ್.ನಗರದಲ್ಲಿ ಬೃಹತ್ ಕಾರ್ಯಕ್ರಮ

ಮತದಾರರಿಗೆ ಕೇಂದ್ರ ಸಚಿವ ಕುಮಾರಸ್ವಾಮಿ ಕೃತಜ್ಞತೆ ಸಲ್ಲಿಕೆ


ಸಭೆಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿದರು.

ಕೆ.ಆರ್.ನಗರ, ಜ.9– ಪಟ್ಟಣದ ಪುರಸಭೆ ಬಯಲು ರಂಗ ಮಂದಿರದ ಆವರಣದಲ್ಲಿ ಜ.24ರಂದು ನಡೆಯುವ ಬೃಹತ್ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತದಾರರಿಗೆ ಕೃತಜ್ಞತೆ ಸಲ್ಲಿಸಲಿದ್ದಾರೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ನಡೆದ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕು ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಕೇಂದ್ರ ಸಚಿವರ ಜೊತೆಗೆ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಮೈಸೂರು ಕೊಡಗು ಕ್ಷೇತ್ರದ ಸಂಸದ ಯದುವೀರ ಕೃಷ್ಣದತ್ತ ಒಡೆಯರ್ ಸೇರಿದಂತೆ ಅನೇಕ ಮುಖಂಡರು ಭಾಗವಹಿಸುವರು ಎಂದರು.

ಕಾರ್ಯಕ್ರಮಕ್ಕೆ 2 ತಾಲೂಕುಗಳಿಂದ ಆಗಮಿಸುವ ಜೆಡಿಎಸ್ ಪಕ್ಷದ ಕಾರ್ಯಕರ್ತರು, ಮುಖಂಡರು ಮತ್ತು ಹೆಚ್.ಡಿ. ಕುಮಾರಸ್ವಾಮಿ ಅವರ ಅಭಿಮಾನಿಗಳಿಗೆ ವಾಹನದ ವ್ಯವಸ್ಥೆ ಮಾಡಲಾಗಿದ್ದು ಪಕ್ಷದ ನಾಯಕರು ಈಗಿನಿಂದಲೇ ವ್ಯಾಪಕ ಪ್ರಚಾರ ಮಾಡಿ ಮನೆ ಮನೆಗೆ ತೆರಳಿ ಎಲ್ಲರನ್ನು ಆಹ್ವಾನಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎರಡು ತಾಲೂಕುಗಳ ಜೆಡಿಎಸ್ ಪಕ್ಷದ ವತಿಯಿಂದ ಕೇಂದ್ರ ಸಚಿವರಿಗೆ ಸನ್ಮಾನ ಮಾಡಲಿದ್ದು, ಮತ್ತೊಮ್ಮೆ ಸಭೆ ನಡೆಸಿ ಪೂರ್ವ ಸಿದ್ಧತೆ ಕೈಗೊಳ್ಳುವುದಾಗಿ ಪ್ರಕಟಿಸಿದರು.

ಬಯಲು ರಂಗಮಂದಿರದಲ್ಲಿ ಕಾರ್ಯಕ್ರಮ ಮುಗಿದ ನಂತರ ಮಧ್ಯಾಹ್ನ 1 ಗಂಟೆಗೆ ಕೃಷ್ಣರಾಜೇಂದ್ರ ಕ್ರೀಡಾಂಗಣದಲ್ಲಿ 25 ಸಾವಿರ ಮಂದಿಗೆ ಮಾಂಸದೂಟ ಮತ್ತು 5 ಸಾವಿರ ಮಂದಿಗೆ ಸಸ್ಯಹಾರಿ ಭೋಜನದ ವ್ಯವಸ್ಥೆ ಮಾಡಲಾಗಿದ್ದು, ಎಲ್ಲವೂ ಸುಸುತ್ರವಾಗಿ ನಡೆಯಲು ಎಲ್ಲರೂ ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದು ನುಡಿದರು.

ಅಭಿವೃದ್ಧಿಗೆ ಆದ್ಯತೆ: ಪಟ್ಟಣದ ಹೊರ ವಲಯದಲ್ಲಿರುವ ಹಳೇ ರೈಲ್ವೆ ನಿಲ್ದಾಣದ ಬಳಿ ಖಾಲಿ ಇರುವ 22 ಎಕರೆ ಜಾಗದಲ್ಲಿ ರೈಲ್ವೆ ತರಬೇತಿ ಕೇಂದ್ರ ಆರಂಭಿಸುವಂತೆ ಸರ್ಕಾರಕ್ಕೆ ಈ ಹಿಂದೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಷ್ಠಾನಗೊಳಿಸುವಂತೆ ಕೇಂದ್ರ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ನಾನು ಮನವಿ ಸಲ್ಲಿಸಿದ್ದು ಇದಕ್ಕೆ ಸಚಿವರು ಪೂರಕವಾಗಿ ಸ್ಪಂದಿಸಿದ್ದು ತರಬೇತಿ ಕೇಂದ್ರ ಆರಂಭವಾಗುವುದು ನಿಶ್ಚಿತ ಎಂದರು.

ಕೆ.ಆರ್.ನಗರ ಹೊರ ವಲಯದಲ್ಲಿರುವ ಅರ್ಕೇಶ್ವರಸ್ವಾಮಿ ದೇವಾಲಯದಿಂದ ಚಂದಗಾಲು, ಚೀರ್ನಹಳ್ಳಿ, ಹೆಬ್ಬಾಳು, ಶ್ರೀರಾಂಪುರ, ಚುಂಚನಕಟ್ಟೆ, ಹೊಸೂರು, ಹಾಡ್ಯ ಗೇಟ್, ದೊಡ್ಡಹನಸೋಗೆ, ಕರ್ತಾಳು ಮೂಲಕ ಕೇರಳಾಪುರ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಹಾಗೂ ಮಂಚನಹಳ್ಳಿಯಿಂದ ಬಾಲೂರು, ಮಿರ್ಲೆ, ಅಂಕನಹಳ್ಳಿ ಮೂಲಕ ಸಾಲಿಗ್ರಾಮ ರಾಜ್ಯ ಹೆದ್ದಾರಿಗೆ ಹೋಗುವ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿಯವರಿಗೆ ಮನವಿ ಸಲ್ಲಿಸಲಾಗಿದ್ದು ಇದಕ್ಕೆ ಅವರು ಒಪ್ಪಿಗೆ ನೀಡಿದ್ದಾರೆ ಎಂದರು.

ಜ.19, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರ ಚುನಾವಣೆ

ಜೆಡಿಎಸ್ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಲು ಕರೆ

ಕೆ.ಆರ್.ನಗರ: ತಾಲೂಕು ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸ್ಥಾನಗಳಿಗೆ ಜ.19ರಂದು ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸುವ ಜೆಡಿಎಸ್ ಅಭ್ಯರ್ಥಿಗಳ ಗೆಲುವಿಗೆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಶ್ರಮಿಸಬೇಕು ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು ಪಕ್ಷ ಬೆಂಬಲ ನೀಡಿದವರನ್ನು ಎಲ್ಲರೂ ಬೆಂಬಲಿಸಬೇಕು ಎಂದರು. ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರದಿಂದ ಪುರಸಭೆ ಸದಸ್ಯ ಉಮೇಶ್, ಹೆಬ್ಬಾಳು ಕ್ಷೇತ್ರದಿಂದ ಹೆಚ್.ಆರ್. ದೀಪಕ್, ಅಂಕನಹಳ್ಳಿಯಿಂದ ಎಂ.ಆರ್.ಗಾಯಿತ್ರಮ್ಮ, ಕೆ.ಆರ್. ನಗರದಿಂದ ಎಲ್.ಎಸ್.ಮಹೇಶ್, ಹಾಡ್ಯ ಮಂಜುಳ, ಭೇರ್ಯ ದೊಡ್ಡಯ್ಯ, ತಿಪ್ಪೂರು ಮಹೇಶ್, ಸಾಲಿಗ್ರಾಮದಿಂದ ಎಸ್.ಎಂ.ಸೋಮಣ್ಣ, ಚೀರ್ನಹಳ್ಳಿಯಿಂದ ಮಹದೇವ ನಾಯಕ, ತಂದ್ರೆಯಿಂದ ಲೋಕೇಶ್ ಅವರಿಗೆ ಪಕ್ಷ ಬೆಂಬಲ ನೀಡಲಿದ್ದು, ಉಳಿದ ಮಿರ್ಲೆ, ಮಳಲಿ, ದೊಡ್ಡಕೊಪ್ಪಲು ಮತ್ತು ಮಂಚನಹಳ್ಳಿ ಕ್ಷೇತ್ರಗಳ ಅಭ್ಯರ್ಥಿಗಳನ್ನು ಶೀಘ್ರ ಪ್ರಕಟಿಸಲಾಗುವುದು ಎಂದರು.

ರಾಜ್ಯ ಜೆಡಿಎಸ್ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷ ಹೆಚ್.ಸಿ.ಕುಮಾರ್, ಸಾಲಿಗ್ರಾಮ ತಾಲೂಕು ಅಧ್ಯಕ್ಷ ರಾಜಣ್ಣ, ವಕ್ತಾರ ಕೆ.ಎಲ್.ರಮೇಶ್, ಜಿಲ್ಲಾ ಗ್ರಾಮಾಂತರ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ದಾಕ್ಷಾಯಿಣಿ, ತಾಲೂಕು ಅಧ್ಯಕ್ಷೆ ರಾಜಲಕ್ಷ್ಮಿ, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಹೊಸೂರು ಪಿಎಸಿಎಸ್ ಅಧ್ಯಕ್ಷ ಹೆಚ್.ಆರ್.ಕೃಷ್ಣಮೂರ್ತಿ, ನಿವೃತ್ತ ಶಿಕ್ಷಕ ಎ.ಕುಚೇಲ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್.ಎಂ.ಸೋಮಣ್ಣ, ಜೆಡಿಎಸ್ ಮುಖಂಡರಾದ ತಂದ್ರೆ ಮಂಜು ಪುಟ್ಟಸ್ವಾಮಿ, ಕಗ್ಗೆರೆ ಕುಚೇಲ, ಹನಸೋಗೆ ನಾಗರಾಜು, ಬಂಡಳ್ಳಿ ಕುಚೇಲ, ಸಿ.ಜೆ.ಆನಂದ, ಗ್ರಾಪಂ ಸದಸ್ಯ ಬಾಲಾಜಿಗಣೇಶ್, ಮಾಜಿ ಸದಸ್ಯ ಹೊಸಹಳ್ಳಿ ಪುಟ್ಟರಾಜು, ಭಾಗ್ಯಮ್ಮ, ರೂಪ ಸತೀಶ್, ಮೋಹನ್‌ಕುಮಾರಿ ಸೇರಿದಂತೆ ಜೆಡಿಎಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಹಾಜರಿದ್ದರು.

ರಾಷ್ಟ್ರಪ್ರೇಮ, ಶಿಸ್ತು ಬೆಳೆಸಲು ಸೇವಾದಳ ಸಹಕಾರಿ


ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ನಂಜನಗೂಡು, ಜ.9– ದೇಶದ ರಕ್ಷಣೆ, ದೇಶವನ್ನು ಸಮೃದ್ಧವಾಗಿ ಕಟ್ಟುವ ಮಹತ್ತರ ಜವಾಬ್ದಾರಿ ಮಕ್ಕಳ ಕೈಯಲ್ಲಿದೆ. ಆದ್ದರಿಂದ ಮಕ್ಕಳು ವಿದ್ಯಾರ್ಥಿ ದೆಸೆಯಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಿಳಿಸಿದರು.

ನಗರದ ನಂಜುಂಡೇಶ್ವರ ದೇವಸ್ಥಾನ ಸಮೀಪದ ಗಿರಿಜಾ ಕಲ್ಯಾಣ ಮಂಟಪದಲ್ಲಿ ಭಾರತ ಸೇವಾದಳದಿಂದ ಏರ್ಪಡಿಸಿದ್ದ 4 ದಿನಗಳ ನಾಯಕತ್ವ ತರಬೇತಿ ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ರಾಷ್ಟ್ರಪ್ರೇಮ, ದೇಶಭಕ್ತಿ, ನಾಯಕತ್ವ ಗುಣಗಳನ್ನು ಬೆಳೆಸಲು ಸೇವಾದಳ ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಮೈಸೂರು ಜಿಲ್ಲಾ ಸೇವಾದಳ ಉಪ ನಿರ್ದೇಶಕ ಜವರೇಗೌಡ ಮಾತನಾಡಿ, ನಮ್ಮ ನಾಡು, ನಮ್ಮ ಭಾಷೆ, ನಮ್ಮ ಶಾಲೆ ಸಾರ್ವಜನಿಕರ ಆಸ್ತಿಯನ್ನು ನಾವು ಕಾಪಾಡುವುದು ಹಾಗೂ ಉಳಿಸಿಕೊಳ್ಳುವ ಜವಾಬ್ದಾರಿ ಗುಣಗಳನ್ನು ಈ ಶಿಬಿರದಲ್ಲಿ ಮಕ್ಕಳು ಕಲಿಯಬಹುದು. ಸೇವಾದಳದ ಶಾಖೆಯನ್ನು ಪ್ರತಿ ಶಾಲೆಯಲ್ಲಿ ತೆರೆಯಲು ಆದೇಶ ಮಾಡುವುದಾಗಿ ತಿಳಿಸಿದರಲ್ಲದೆ ವಿದ್ಯಾರ್ಥಿಗಳು ತಮ್ಮ ದೈಹಿಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ಜಿಲ್ಲಾ ಸೇವಾದಳದ ಅಧ್ಯಕ್ಷ ಎನ್. ನರಸಿಂಹಸ್ವಾಮಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸೇವಾದಳ ಕಾರ್ಯದರ್ಶಿ ಬಸವಣ್ಣ, ತಾಲೂಕು ಅಧ್ಯಕ್ಷ ಕೃಷ್ಣಮೂರ್ತಿ, ಕಾರ್ಯದರ್ಶಿ ರವಿಕುಮಾರ್.ವೈ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸೋಮೇಗೌಡ, ತಾಲೂಕು ನೌಕರರ ಸಂಘದ ಅಧ್ಯಕ್ಷ ದೀಪು, ಪ್ರೌಢಶಾಲಾ ಸಹಶಿಕ್ಷಕರ ಅಧ್ಯಕ್ಷ ರಮೇಶ್, ಜಿಲ್ಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ರಾಜೇಂದ್ರ, ತಾಲೂಕು ಸಮಿತಿ ಹನುಮಂತರಾಜು, ಶೇಷಾಚಲ, ಈರಯ್ಯ, ಸತೀಶ್ ದಳವಾಯಿ, ರಮೇಶ್, ಶ್ರೀಪತಿ, ಅಧಿನಾಯಕ ನೀಲಿಸಿದ್ದು, ರೇಚಣ್ಣ, ವಿವಿಧ ತಾಲೂಕಿನ ಶಿಕ್ಷಕರು, 700 ಹೆಚ್ಚು ಸೇವಾದಳದ ಮಕ್ಕಳು ಹಾಗೂ ಗಣ್ಯರು ಇತರರಿದ್ದರು.

ತುಂಬಾಕು ಹರಾಜು ಮಾರುಕಟ್ಟೆ ಎದುರು

ಡಿ.ದೇವರಾಜ ಅರಸು ಪುತ್ಥಳಿ ನಿರ್ಮಾಣವಾಗಲಿ


ತಂಬಾಕು ಮಂಡಳಿ ಸಂಸ್ಥಾಪನಾ ದಿನೋತ್ಸವದಲ್ಲಿ ಮೋದೂರು ಶಿವಣ್ಣ ಮಾತನಾಡಿದರು.

ಹುಣಸೂರು, ಜ.9– ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಪುತ್ಥಳಿಯನ್ನು ತುಂಬಾಕು ಹರಾಜು ಮಾರುಕಟ್ಟೆ ಮುಂಭಾಗ ನಿರ್ಮಾಣ ಮಾಡಬೇಕು ಎಂದು ತುಬಾಕು ಬೆಳೆಗಾರರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಮೋದೂರು ಶಿವಣ್ಣ ತಿಳಿಸಿದರು.

ತಾಲೂಕಿನ ಕಟ್ಟೆಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆ ರೈತ ಭವನದಲ್ಲಿ ಹಮ್ಮಿಕೊಂಡಿದ್ದ ತಂಬಾಕು ಮಂಡಳಿ ಸಂಸ್ಥಾಪನಾ ದಿನೋತ್ಸವದಲ್ಲಿ ಮಾತನಾಡಿದ ಅವರು, ತಂಬಾಕು ಹರಾಜು ಮಾರುಕಟ್ಟೆ ನಿರ್ಮಾಣಕ್ಕೆ ಅರಸು ಅವರ ಕೊಡುಗೆ ಅಪಾರ. ಈ ತಾಲೂಕಿನ ಎಲ್ಲಾ ಸಮುದಾಯದವರು ಶ್ರೀಮಂತರಾಗಲು ಅರಸು ಕಾರಣರಾಗಿದ್ದು, ಅವರನ್ನು ಸ್ಮರಿಸುವುದು ನಮ್ಮ ಕರ್ತವ್ಯ. ಆದ್ದರಿಂದ ತಂಬಾಕು ಹರಾಜು ಮಾರುಕಟ್ಟೆ ಮುಂಭಾಗ ದೇವರಾಜ ಅರಸು ಪುತ್ಥಳಿ ನಿರ್ಮಿಸಿ ಅದರ ಮುಂದೆ ತಂಬಾಕು ಸಸಿ ಇಟ್ಟು ಸದಾ ದೀಪ ಉರಿಯುವ ವ್ಯವಸ್ಥೆ ಆಗಬೇಕು. ಈ ಬಗ್ಗೆ ಮಂಡಳಿಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಮಾತನಾಡಿ, ತಂಬಾಕು ಮಂಡಳಿ ರೈತರ ಹೊಗೆ ಸೊಪ್ಪು ಮಾರಾಟದಲ್ಲಿ ಯಾವುದೇ ಮೋಸ ಅನ್ಯಾಯವಾಗದ ಹಾಗೆ ಹಾಗೂ ಸಮಯಕ್ಕೆ ಸರಿಯಾಗಿ ಗೊಬ್ಬರ, ಹಣ ನೀಡುವ ಮೂಲಕ ಅಧಿಕಾರಿಗಳು ಹಾಗೂ ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ ಎಂದರು.

ಭಾರತ ದೇಶದಲ್ಲಿ ಅನೇಕ ಮಾರುಕಟ್ಟೆಗಳಿದ್ದರೂ ರಾಜ್ಯ ಹಾಗೂ ಕೇಂದ್ರ ಸರ್ಕಾರ ತಂಬಾಕು ಬೆಳೆಯನ್ನು ವಾಣಿಜ್ಯ ಬೆಳೆಯಾಗಿ ಪರಿಚಯಿಸುವ ಮೂಲಕ ರೈತರ ಸಹಾಯಕ್ಕೆ ಬಂದಿದೆ. ನಾವು ಕೂಡ ಅನೇಕ ಹೋರಾಟ ಮಾಡಿಕೊಂಡು ಬಂದಿದ್ದು ಲೈಸೆನ್ಸ್ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದೇವೆ. ಕೇಂದ್ರ ಸರ್ಕಾರ ತಂಬಾಕು ಬೆಳೆ ನಿಷೇಧ ಮಾಡಲು ನಿರ್ಧಾರ ಕೈಗೊಂಡಿತ್ತು. ಆದರೆ ಮತ್ತೆ 23 ವರ್ಷಗಳ ಕಾಲ ತಂಬಾಕು ಬೆಳೆ ವಿಸ್ತರಿಸುವ ಅವಕಾಶ ನೀಡಿದೆ ತುಬಾಕು ಮಂಡಳಿ ಖರೀದಿಸುವ ಕಂಪನಿಗಳು ಹಾಗೂ ರೈತರ ನಡುವೆ ಸೇತುವೆಯಾಗಿ ಕೆಲಸ ಮಾಡುವ ಮೂಲಕ ರೈತರಿಗೆ ಅನುಕೂಲ ಮಾಡಿ ಕೊಟ್ಟಿದೆ ಎಂದರು. ತಂಬಾಕು ಮಂಡಳಿ ಸದಸ್ಯ ವಿಕ್ರಮ್ ರಾಜ್ ಮಾತನಾಡಿ, ರೈತರಿಗೆ 3 ತಿಂಗಳಿಗೊಮ್ಮೆ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ತಂಬಾಕು ಬೆಳೆಗಾರರಿಗೆ ವರ್ಷಕೊಮ್ಮೆ ಕ್ರೀಡಾ ಸ್ಪರ್ಧೆಗಳು ನಡೆಸಬೇಕು. ರೈತರ ಮಕ್ಕಳಿಗೆ ಸ್ಕಾಲರ್‌ಶಿಪ್, ಮರಣ ನಿಧಿ ಹೆಚ್ಚಿಸಬೇಕು ಹಾಗೂ ತಂಬಾಕು ಹದ ಮಾಡಲು ಪ್ರಕೃತಿಗೆ ಹಾನಿಯಾಗದಂತೆ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು ಎಂದರು.

ಈ ವೇಳೆ ವಿಜ್ಞಾನಿ ರಾಮಕೃಷ್ಣ, ಮಂಡಳಿ ಸದಸ್ಯ ದಿನೇಶ್, ನಿಲುವಾಗಿಲು ಪ್ರಭಾಕರ್, ಅಶೋಕ, ರಾಜು, ಸತೀಶ, ಉಂಡವಾಡಿ ಚಂದ್ರೇಗೌಡ, ರಾಮೇಗೌಡ, ರೈತ ಸಂಘದ ಮಹಾದೇವ, ಆರ್.ಎಂ.ಓ.ಲಕ್ಷ್ಮಣ್, ಅಧಿಕಾರಿಗಳಾದ ಸಿದ್ದರಾಜು, ಮೀನಾ ಹಾಗೂ ಬ್ರಿಡ್ಜ್ ಭೂಷಣ್, ವಿಜಯ ಕುಮಾರ್ ಸೇರಿದಂತೆ 5 ಪ್ಲಾಟ್ ಫಾರಂನ ಅಧಿಕಾರಿಗಳು ಹಾಗೂ ರೈತರು ಇದ್ದರು.

ಇಂದು ಹುಣಸೂರಲ್ಲಿ ವೈಕುಂಠ ಏಕಾದಶಿ

ಹುಣಸೂರು, ಜ.9– ನಗರದ ಹಾಲಗೆರೆಯ ಶ್ರೀಲಕ್ಷ್ಮಿ ವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ಜ.10ರಂದು 2ನೇ ವರ್ಷದ ವೈಕುಂಠ ಏಕಾದಶಿ ಹಮ್ಮಿಕೊಳ್ಳಲಾಗಿದೆ.

ಏಕಾದಶಿ ಪ್ರಯುಕ್ತ ಶ್ರೀವಾರಿಗೆ ಬ್ರಾಹ್ಮಿ ಮುಹೂರ್ತದಲ್ಲಿ ಸುಪ್ರಭಾತ ಸೇವೆ, ಅಭಿಷೇಕ, ಕಲಾಕರ್ಷಣೆ, ಗೋಪೂಜೆ, ವೈಕುಂಠ ಪೂಜೆ, ಅಷ್ಟಬಲಿ ಪೂಜೆ, ಶ್ರೀವಾರಿಯವರ ಪ್ರಾಂಗಣ ಉತ್ಸವ, ಉಯ್ಯಾಲೆಯಲ್ಲಿ ಪ್ರತಿಷ್ಠಾಪಿಸಿ ಮಹಾಮಂಗಳಾರತಿ ನಂತರ ಭಕ್ತಾದಿಗಳಿಗೆ ವೈಕುಂಠ ದ್ವಾರ ಪ್ರವೇಶ ಪೂಜಾ ಕಾರ್ಯಕ್ರಮ ಏರ್ಪಡಿಸಿದ್ದು, ಭಕ್ತರಿಗೆ ಪ್ರಸಾದ ವಿನಿಯೋಗ ನಡೆಯಲಿದೆ.

ಮಧ್ಯಾಹ್ನ ಫಲಹಾರ ಸೇವಾ ಪೂಜೆ, ಸಂಜೆ 6.10ಕ್ಕೆ ಶ್ರೀವಾರಿಯವರ ಪ್ರಾಕಾರೋತ್ಸವ ನಂತರ ಶಯನೋತ್ಸವ ನೆರವೇರಿಸಿ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ಮಾಡಲಾಗುವುದು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ಕೃಪೆಗೆ ಪಾತ್ರರಾಗಬೇಕು ಎಂದು ದೇವಸ್ಥಾನದ ಧರ್ಮಾಧಿಕಾರಿ ಶ್ರೀಚಿಕ್ಕತಿಮ್ಮಪ್ಪ ತಿಳಿಸಿದ್ದಾರೆ.

ಸರಗೂರಲ್ಲಿ ಸ್ಮಾರ್ಟ್ ಐಸಿಯು ಉದ್ಘಾಟನೆ


ಕಾರ್ಯಕ್ರಮವನ್ನು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸಿ.ಎಸ್.ಕುಮಾರಸ್ವಾಮಿ ಉದ್ಘಾಟಿಸಿದರು.

ಸರಗೂರು, ಜ.9– ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ನಡೆದ ಸ್ಮಾರ್ಟ್ ಐಸಿಯು ಉದ್ಘಾಟನಾ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸಿ.ಎಸ್.ಕುಮಾರಸ್ವಾಮಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಮುದಾಯಕ್ಕೆ ಶೇ.55 ರಷ್ಟು ಸರ್ಕಾರದಿಂದ ಸಾಕಷ್ಟು ಸೌಲಭ್ಯಗಳು ತಲುಪುತ್ತಿವೆ. ಖಾಸಗಿ ಆಸ್ಪತ್ರೆಗಳಿಂದ ಆರೋಗ್ಯ ಸೇವೆ ಶೇ.45ರಷ್ಟು ದೊರೆಯುತ್ತದೆ. ವಿವೇಕಾನಂದರ ನುಡಿಯನ್ನು ಸ್ಮರಿಸುತ್ತಾ ನಮ್ಮಲ್ಲಿ ಒಂದು ಅಗಾಧವಾದ ಶಕ್ತಿ ಒಳಗಿದೆ. ಹೀಗಾಗಿ ನಾವು ದೇಶ ಹಾಗೂ ಸಮಾಜದ ಒಳಿತಿಗಾಗಿ ಶ್ರಮಿಸಿ ದರೇ ದೇಶದ ಆರೋಗ್ಯ ವೃದ್ಧಿಯಾಗುತ್ತದೆ. ಕೋವಿಡ್ ನಂತರದ ದಿನಗಳಲ್ಲಿ ನಮಗೆ ಐಸಿಯು ಮಹತ್ವದ ಬಗ್ಗೆ ತಿಳಿಯಿತು. ಮನುಷ್ಯ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕವಾಗಿ ಸದೃಢವಾಗಬೇಕಾದರೆ ನಮ್ಮ ಪರಿಶ್ರಮ ಬಹಳ ಮುಖ್ಯ ಎಂದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಆರೋಗ್ಯ ಕ್ಷೇತ್ರದ ಮುಖ್ಯಸ್ಥ ಡಾ.ಕುಮಾರ್ ಮಾತನಾಡಿದರು. ಸ್ಮಾರ್ಟ್ ಐಸಿಯು ತಜ್ಞ ಡಾ.ಪ್ರುಥ್ವಿ ದಾಸರಿ, ತಾಲೂಕು ಆರೋಗ್ಯಾಧಿಕಾರಿ ಟಿ.ರವಿ ಕುಮಾರ್, ವಿವೇಕಾನಂದ ಆಸ್ಪತ್ರೆ ನಿರ್ದೇಶಕ ಡಾ. ರವೀಂದ್ರನಾಥ್ ಶ್ರಾಫ್, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ.ಶಂಕರ್, ಡಾ.ಸೀತಾರಾಮ್, ಡಾ.ನಾಗೇಶ್, ಡಾ. ನರೇಂದ್ರ ರಾಮಕೃಷ್ಣ, ಡಾ.ಪ್ರಶಾಂತ್, ಡಾ.ಮನೋಹರ್, ಡಾ.ರನೀಷಾ, ಡಾ.ಮೇರಿನ್, ಡಾ.ಶರತ್ ಚಂದ್ರ, ಡಾ.ಅರುಣ್ ಕುಮಾರ್, ಡಾ.ವಿದ್ಯಾಶ್ರೀ, ಆಸ್ಪತ್ರೆ ವ್ಯವಸ್ಥಾಪಕಕಿ ಸಂಧ್ಯಾ ಸೇರಿದಂತೆ ಇನ್ನಿತರರಿದ್ದರು.

ಸಿರಿವಾರದಲ್ಲಿ ದಲಿತ ಯುವಕರ ಮೇಲೆ ಹಲ್ಲೆ

ಕಿಡಿಗೇಡಿಗಳ ಬಂಧನಕ್ಕೆ ದಸಂಸ ಆಗ್ರಹ


ಸುದ್ದಿಗೋಷ್ಠಿಯಲ್ಲಿ ಕನ್ನಹಳ್ಳಿ ಶಿವಕುಮಾರ್ ಮಾತನಾಡಿದರು.

ತಿ.ನರಸೀಪುರ, ಜ.9– ಅಂಬೇಡ್ಕರ್ ಗೀತೆ ಹಾಕಿದ್ದಕ್ಕೆ ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ ಸಿರಿವಾರದಲ್ಲಿ ದಲಿತ ಯುವಕರಿಬ್ಬರ ಮೇಲೆ ತೀವ್ರ ಹಲ್ಲೆ ಮಾಡಿರುವ ಕಿಡಿಗೇಡಿಗಳನ್ನು ಬಂಧಿಸಿ ಗಡಿಪಾರು ಮಾಡುವಂತೆ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ಯ ತಾಲೂಕು ಸಂಚಾಲಕ ಕನ್ನಹಳ್ಳಿ ಶಿವಕುಮಾರ್ ಆಗ್ರಹಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.4 ರಂದು ಹಾಲಿನ ವಾಹನದಲ್ಲಿ ಅಂಬೇಡ್ಕರ್ ಅವರ ಗೀತೆ ಹಾಕಿಕೊಂಡು ಹೋಗುತ್ತಿದ್ದರೆಂಬ ಕಾರಣಕ್ಕೆ ದಲಿತ ಯುವಕರಿಬ್ಬರ ಮೇಲೆ ಚಂದ್ರಶೇಖರ್ ಮತ್ತು ನರಸಿಂಹರಾಜು ಎಂಬುವರು ಹಲ್ಲೆ ನಡೆಸಿದ್ದು, ಅವರಿಬ್ಬರನ್ನು ಕೂಡಲೇ ಬಂಧಿಸಿ ಕಠಿಣ ಕಾನೂನು ಕ್ರಮ ತೆಗೆದುಕೊಂಡು ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ಮುಖಂಡ ಬನ್ನಹಳ್ಳಿ ಬಸವರಾಜು ಮಾತನಾಡಿ, ಬೀದರ್ ಜಿಲ್ಲೆಯಲ್ಲಿ ಬೇರೆ ಸಮುದಾಯದ ಬಾಲಕಿಯನ್ನು ಪ್ರೀತಿಸಿದ್ದಕ್ಕೆ ದಲಿತ ಯುವಕನೋರ್ವನ ಮೇಲೆ ಹಲ್ಲೆ ಮಾಡಿದ್ದರಿಂದ ಆತ ಸಾವನ್ನಪ್ಪಿದ್ದಾನೆ. ಇಂತಹ ದೌರ್ಜನ್ಯ ಘಟನೆಗಳು ರಾಜ್ಯದಲ್ಲಿ ನಡೆಯುತ್ತಿದ್ದರೂ ಸರ್ಕಾರ ದಲಿತರಿಗೆ ಯಾವುದೇ ರಕ್ಷಣೆ ನೀಡುತ್ತಿಲ್ಲ. ಸಚಿವ ಸಂಪುಟದಲ್ಲಿರುವ ದಲಿತ ಸಮುದಾಯದ ಸಚಿವರು ಮೌನವಾಗಿದ್ದಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ದಸಂಸ ಮುಖಂಡರಾದ ನಾಗರಾಜು ವಾಟಾಳ್, ಆರ್. ಶಂಕರಮೂರ್ತಿ, ಕನ್ನಹಳ್ಳಿ ಸೋಮಣ್ಣ ಹಾಗೂ ಉಮೇಶ್ ಮಾದಾಪುರ ಇದ್ದರು.

ಅಣ್ಣೂರು ಗ್ರಾಪಂಗೆ ಮಹೇಶ್ ಉಪಾಧ್ಯಕ್ಷ


ಹೆಚ್.ಡಿ.ಕೋಟೆ ತಾಲೂಕಿನ ಅಣ್ಣೂರು ಗ್ರಾಪಂ ಉಪಾಧ್ಯಕ್ಷರಾಗಿ ಮಹೇಶ್ ಎಡದೊರೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಅಧ್ಯಕ್ಷೆ ಜಯಮ್ಮ ಸುರೇಶ್, ಚುನಾವಣಾಧಿಕಾರಿ ಬಿಆರ್‌ಸಿ ಕೃಷ್ಣಯ್ಯ, ಪಿಡಿಓ ಸಂತೋಷ್ ನಾಗ್, ಶಿವಸ್ವಾಮಿಗೌಡ, ಮಹೇಶ್, ಜಯಮ್ಮ, ಸುಂದರಮಣಿ, ಚಿಕ್ಕಮ್ಮ, ಸಣ್ಣರಾಜು, ಶಶಿಕುಮಾರ್, ರಾಜೇಶ್, ಗುರುಸ್ವಾಮಿ, ಸರಸ್ವತಿ ಗೋವಿಂದೇಗೌಡ, ಸುಮಾ ಗಜೇಂದ್ರ ಸೇರಿದಂತೆ ಇನ್ನಿತರರಿದ್ದರು.

ಮ.ಬೆಟ್ಟದಲ್ಲಿ ಪತ್ರಕರ್ತರ ಸಂಘದ ಕ್ಯಾಲೆಂಡರ್ ಬಿಡುಗಡೆ



ಕ್ಯಾಲೆಂಡರ್ ಅನ್ನು ಗುರುಸ್ವಾಮೀಜಿ ಬಿಡುಗಡೆಗೊಳಿಸಿದರು.

ಹೆಚ್.ಡಿ.ಕೋಟೆ, ಜ.9– ಸಮಾಜವನ್ನು ಸರಿ ದಾರಿಯಲ್ಲಿ ತೆಗೆದುಕೊಂಡು ಹೋಗುವ ಜವಾಬ್ದಾರಿ ಪತ್ರಕರ್ತರ ಮೇಲಿದೆ ಎಂದು ಮಲೆಮಹದೇಶ್ವರಬೆಟ್ಟದ ಸಾಲೂರು ಬೃಹನ್ಮಠದ ಶ್ರೀಗುರುಸ್ವಾಮೀಜಿ ತಿಳಿಸಿದರು.

ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಪತ್ರಕರ್ತರ ಸಂಘ ಹೊರ ತಂದಿರುವ 2025ನೇ ಸಾಲಿನ ಕ್ಯಾಲೆಂಡರ್ ಅನ್ನು ಮ.ಬೆಟ್ಟದ ಸಾಲೂರು ಬೃಹನ್ಮಠದಲ್ಲಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ತಾಲೂಕು ಪತ್ರಕರ್ತರ ಸಂಘ ಸಮಾಜಮುಖಿ ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಚಾರ ಎಂದರು.

ಇದೇ ವೇಳೆ ಸಾಲೂರು ಬೃಹನ್ಮಠದ ಕಿರಿಯ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿದರು. ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಪ್ರಧಾನ ಕಾರ್ಯದರ್ಶಿ ಎಸ್.ಆರ್.ನಾಗರಾಮ, ಖಜಾಂಚಿ ಮಂಜು ಕೋಟೆ, ನಿರ್ದೇಶಕರಾದ ಬಿ.ನಾಗೇಶ್, ರಂಗರಾಜು, ಸದಸ್ಯರಾದ ಸಿ.ಎನ್.ರಘು, ಜಿ.ಶಮಾ, ವಾಸುಕಿ ನಾಗೇಶ್, ಚಿಕ್ಕಣ್ಣೇಗೌಡ, ಸುರೇಶ್, ಚಂದ್ರು, ದಾಸೇಗೌಡ, ಶ್ರೀನಿಧಿ ಇದ್ದರು.

ಟಿಬೆಟ್‌ನಲ್ಲಿ ಭೂಕಂಪ: ದಲೈಲಾಮ ವಿಶೇಷ ಪ್ರಾರ್ಥನೆ


ಬೈಲಕುಪ್ಪೆಯಲ್ಲಿ ದಲೈಲಾಮ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಬೈಲಕುಪ್ಪೆ, ಜ.9– ಪಶ್ಚಿಮ ಟಿಬೆಟ್‌ನಲ್ಲಿ ಸಂಭವಿಸಿದ ಭೂಕಂಪದ ಸಂತ್ರಸ್ತರಿಗಾಗಿ ಟಿಬೆಟಿಯನ್ನರ ಧಾರ್ಮಿಕ ಗುರು ದಲೈಲಾಮ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಭೂಕಂಪದಲ್ಲಿ ಸಾವನ್ನಪ್ಪಿದವರು ಹಾಗೂ ಸಮಸ್ಯೆಗೆ ಒಳಗಾದವರ ರಕ್ಷಣೆಗಾಗಿ ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆಯ ತಶೀಲಾಂಪು ದೇವಸ್ಥಾನದಲ್ಲಿ ಒಂದು ಗಂಟೆ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ 11 ಸಾವಿರಕ್ಕೂ ಹೆಚ್ಚು ಟಿಬೆಟಿಯನ್ ನಾಗರಿಕರು, ಬೌದ್ಧ ಬಿಕ್ಷುಗಳು ಭಾಗವಹಿಸಿದ್ದರು.

ದಲೈಲಾಮ ಮಾತನಾಡಿ, ಒಬ್ಬ ವ್ಯಕ್ತಿಗೆ ಸಾಧಾರಣ ಆಯಸ್ಸು 100ರಿಂದ 103 ಇರುತ್ತದೆ. ನಾನು ಅಲ್ಲಿವರೆಗೆ ಇರುವ ನಂಬಿಕೆ ಇದೆ. 15ನೇ ದಲೈಲಾಮ ಆಗಮಿಸಲು ಇನ್ನೂ 20 ವರ್ಷಗಳ ಕಾಲಾವಕಾಶ ಇದೆ. ಯಾರೂ ಹೆದರುವ ಅಗತ್ಯವಿಲ್ಲ ಎಂದು ಭರವಸೆ ನೀಡಿದರು. ಈ ವೇಳೆ ನೆರೆದಿದ್ದ ಟಿಬೆಟಿಯನ್ ನಾಗರಿಕರು ಹರ್ಷಚಿತ್ತರಾಗಿ, ಚಪ್ಪಾಳೆ ತಟ್ಟುವ ಮೂಲಕ ಗುರುವಂದನೆ ಸಲ್ಲಿಸಿದರು.

ಕೆಂಪಯ್ಯನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆ

ರಮೇಶ್ ಮುದ್ದೇಗೌಡ ಅಧ್ಯಕ್ಷ, ರವಿಕುಮಾರ್ ಉಪಾಧ್ಯಕ್ಷ


ಕೆಂಪಯ್ಯನಹುಂಡಿ ಡೈರಿ ಅಧ್ಯಕ್ಷರಾಗಿ ರಮೇಶ್ ಮುದ್ದೇಗೌಡ, ಉಪಾಧ್ಯಕ್ಷರಾಗಿ ರವಿಕುಮಾರ್ ಆಯ್ಕೆಯಾದರು.

ತಿ.ನರಸೀಪುರ, ಜ.9– ತಾಲೂಕಿನ ಕೆಂಪಯ್ಯನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರೂ ಆದ ರಮೇಶ್ ಮುದ್ದೇಗೌಡ ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಮೇಶ್ ಮುದ್ದೇಗೌಡ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರವಿಕುಮಾರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹಸೀನಾ ಘೋಷಿಸಿದರು.

ಚುನಾವಣೆ ಪ್ರಕ್ರಿಯೆಯಲ್ಲಿ ಸಂಘದ ನಿರ್ದೇಶಕರಾದ ರಮೇಶ್, ಕೆ.ರಘು, ಕೆ.ಪಿ.ಸುರೇಶ್, ಗಿರೀಶ್, ಗವಿಗೌಡ, ಹೊಂಬಾಳಮ್ಮ, ಸಣ್ಣಮ್ಮ, ವೆಂಕಟೇಶ್ ಹಾಜರಿದ್ದು ನೂತನ ಅಧ್ಯಕ್ಷ – ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ ಮಾತನಾಡಿ, ನಿರ್ದೇಶಕರು ಹಾಗೂ ಹಾಲು ಉತ್ಪಾದಕರ ಸಹಕಾರದಿಂದ ಡೈರಿ ಉತ್ತಮ ಸ್ಥಿತಿಯಲ್ಲಿ ನಡೆಯುತ್ತಿದೆ. ಹಾಲು ಸಂಗ್ರಹಣೆ, ಹಣ ಬಟವಾಡೆ ಪ್ರಕ್ರಿಯೆ ಯಾವುದೇ ಗೊಂದಲಗಳಿಲ್ಲದೇ ಸಾಗಿದೆ. ಸಂಘವು ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಿನ ಅಭಿವೃದ್ಧಿ ಹೊಂದಲು ನಿರ್ದೇಶಕರ ಸಹಕಾರ ಅಗತ್ಯ. ರೈತರು ಉತ್ತಮ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು. ಆ ಮೂಲಕ ಸಂಘದ ಬೆಳವಣಿಗೆಗೆ ಸಹಕಾರ ನೀಡಬೇಕು ಎಂದರು.

ನೂತನ ಅಧ್ಯಕ್ಷರು ಹಾಲು ಉತ್ಪಾದಕರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಬೇಕು. ಮೈಮುಲ್‌ನಿಂದ ಸಂಘಕ್ಕೆ ದೊರಕುವ ಸವಲತ್ತುಗಳನ್ನು ಪ್ರಾಮಾಣಿಕವಾಗಿ ರೈತರಿಗೆ ತಲುಪಿಸಲು ಮುಂದಾಗಬೇಕು. ಹೆಚ್ಚು ಸಾಲ ನೀಡುವ ಮೂಲಕ ಹೈನುಗಾರಿಕೆಗೆ ಪೂರಕವಾದ ವಾತಾವರಣ ಕಲ್ಪಿಸಿಕೊಡಬೇಕೆಂದು ಸಲಹೆ ನೀಡಿದರು.

> "ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ನಿರ್ದೇಶಕರು, ಮುಖಂಡರು ಹಾಗೂ ಗ್ರಾಮಸ್ಥರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರ, ಮಾರ್ಗದರ್ಶನದೊಂದಿಗೆ ಅಭಿವೃದ್ಧಿ ಕಾರ್ಯಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ.
> **- ರಮೇಶ್ ಮುದ್ದೇಗೌಡ, ನೂತನ ಅಧ್ಯಕ್ಷ.**

ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಆನಂದ್, ಗುತ್ತಿಗೆದಾರ ಮಾಧು, ನಾಗೇಗೌಡ, ಶಿವಮೂರ್ತಿ, ಗಿರೀಶ್, ಸಿದ್ದಪ್ಪ ಪುಟ್ಟಣ್ಣ ಲೋಕೇಶ್, ನಾಗೇಶ್, ಗಣೇಶ್, ಸಂದೀಪ್, ಅರುಣ್, ಮೂರ್ತಿ, ಗಂಗಾಧರ್, ಸುರೇಶ್, ಸಂಘದ ಕಾರ್ಯದರ್ಶಿ ಮಂಜುಳಾ, ಸಹಾಯಕ ವಿನಯ್ ಸೇರಿದಂತೆ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಸಣ್ಣಪ್ಪ ನಾಯಕ ನಿಧನ



ಹಿರೀಕ್ಯಾತನಹಳ್ಳಿ, ಜ.9– ಗ್ರಾಮದ ನಿವಾಸಿ ಸಣ್ಣಪ್ಪ ನಾಯಕ (82) ಗುರುವಾರ ಸಂಜೆ ನಿಧನರಾದರು. ಮೃತರು ಪತ್ನಿ, ವಕೀಲ ಶಿವು ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆಎಸ್ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣವನ್ನು ಮಣಿಪಾಲ್ ಆಸ್ಪತ್ರೆ ಬಳಿಗೆ; ಸಿಟಿ ಬಸ್ ನಿಲ್ದಾಣವನ್ನ ಸಬರ್ಬನ್ ಬಸ್ ಸ್ಟ್ಯಾಂಡ್‌ಗೆ ಸ್ಥಳಾಂತರಿಸಿ

● ಪಾಲಿಕೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮಾಜಿ ಮೇಯರ್‌ಗಳ ಸಲಹೆ ● ಹಣಕಾಸು ವಿಚಾರವೇ ಪ್ರಸ್ತಾಪವಿಲ್ಲ!

ಮೈಸೂರು, ಜ.9(ಆರ್‌ಕೆ)–ಮೈಸೂರಿನ ಹೃದಯ ಭಾಗದಲ್ಲಿರುವ ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣವನ್ನು ರಿಂಗ್ ರಸ್ತೆಯ ಸರ್ಕಾರಿ ಜಾಗಕ್ಕೆ ಹಾಗೂ ನಗರ ಸಾರಿಗೆ ಬಸ್ ನಿಲ್ದಾಣವನ್ನು ಸಬರ್ಬನ್ ಬಸ್ ಸ್ಟ್ಯಾಂಡ್‌ಗೆ ಸ್ಥಳಾಂತರಿಸುವಂತೆ ಕೆಲ ಮಾಜಿ ಮೇಯರ್‌ಗಳು ಸಲಹೆ ನೀಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಕಚೇರಿಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಇಂದು ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪಾಲಿಕೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡಿದ್ದ ಮಾಜಿ ಮೇಯರ್ ಆರ್.ಲಿಂಗಪ್ಪ, ಎಂ.ಶಿವಕುಮಾರ್, ಪುಷ್ಪಲತಾ ಜಗನ್ನಾಥ್ ಹಾಗೂ ಮೈಸೂರು ಕೈಗಾರಿಕೆಗಳ ಸಂಘದ ಕಾರ್ಯದರ್ಶಿ ಸುರೇಶ್ ಕುಮಾರ್, ಸಬರ್ಬನ್ ಬಸ್ ನಿಲ್ದಾಣವನ್ನು ಬನ್ನಿಮಂಟಪಕ್ಕೆ ಸ್ಥಳಾಂತರಿಸುವ ಬದಲು ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಮಣಿಪಾಲ್ ಆಸ್ಪತ್ರೆ ಸಮೀಪಕ್ಕೆ ಸ್ಥಳಾಂತರಿಸುವುದು ಸೂಕ್ತ ಎಂದರು.

ರಿಂಗ್ ರಸ್ತೆ ಮೂಲಕ ಮೈಸೂರಿನ ಸುತ್ತಮುತ್ತಲ ತಾಲೂಕುಗಳಿಗೆ ಸಾರಿಗೆ ಬಸ್ಸುಗಳು ಓಡಾಡಲು ಅನುಕೂಲವಾಗುತ್ತದೆಯಲ್ಲದೇ ಬಸ್ಸುಗಳು ನಗರ ಪ್ರವೇಶಿಸುವುದರಿಂದ ಉಂಟಾಗುವ ಸಂಚಾರ ಒತ್ತಡ ನಿವಾರಣೆಯಾಗಲಿದೆ ಹಾಗಾಗಿ ರಿಂಗ್ ರಸ್ತೆಯಲ್ಲಿ ಮುಡಾ, ಪಾಲಿಕೆ ಅಥವಾ ಕಂದಾಯ ಇಲಾಖೆಯ ಜಾಗ ಗುರ್ತಿಸಿ ಅಲ್ಲಿಗೆ ಸಬರ್ಬನ್ ಬಸ್ ಸ್ಟ್ಯಾಂಡ್ ಸ್ಥಳಾಂತರಿಸುವುದು ಸೂಕ್ತ ಎಂದು ಅವರು ಅಭಿಪ್ರಾಯಪಟ್ಟರು.

ತೆರವಾಗುವ ಸಬರ್ಬನ್ ಬಸ್ ನಿಲ್ದಾಣಕ್ಕೆ ನಗರ ಸಾರಿಗೆ ಬಸ್‌ಗಳನ್ನು ಸ್ಥಳಾಂತರಿಸಿದಲ್ಲಿ ಅರಮನೆ ಸುತ್ತಮುತ್ತಲಿನ ರಸ್ತೆ ಸಂಚಾರವೂ ಸುಗಮವಾಗಲಿದೆ ಎಂದ ಅವರು, ಈ ನಿಟ್ಟಿನಲ್ಲಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಅಗತ್ಯ ಕ್ರಮ ವಹಿಸುವಂತೆಯೂ ಸಲಹೆ ನೀಡಿದರು.

ಸ್ತ್ರೀಶಕ್ತಿ ಸಂಘಗಳಿಂದ ಕಂದಾಯ ವಸೂಲಿ: ಪಾಲಿಕೆಗೆ ಬರಬೇಕಾದ ಕಂದಾಯ, ವಿವಿಧ ತೆರಿಗೆ ಸಂಗ್ರಹ ಮಾಡಲು ಸ್ತ್ರೀ ಶಕ್ತಿ ಸಂಘಗಳ ಸದಸ್ಯರನ್ನು ಬಳಸಿಕೊಂಡಲ್ಲಿ ಆಸ್ತಿ, ಉದ್ದಿಮೆಗಳ ಮಾಲೀಕರು ಮರು ಮಾತನಾಡದೆ ತೆರಿಗೆ ಪಾವತಿಸುತ್ತಾರೆ ಎಂದು ಮಾಜಿ ಮೇಯರ್ ಶ್ರೀಕಂಠಯ್ಯ ತಿಳಿಸಿದರು.

ವಸೂಲಾದ ಕಂದಾಯದಲ್ಲಿ ಶೇ.5ರಷ್ಟು ಹಣವನ್ನು ಗೌರವ ಧನವಾಗಿ ಕೊಟ್ಟರೆ ಸ್ತ್ರೀ ಶಕ್ತಿ ಸಂಘಗಳ ಸದಸ್ಯರು ಖುಷಿಯಿಂದ ತೆರಿಗೆ ವಸೂಲಿ ಮಾಡುತ್ತಾರೆ. ಅಧಿಕಾರಿಗಳು ಅದರ ಮೇಲ್ವಿಚಾರಣೆ ಮಾಡಿದರೆ ಸಾಕು. ಅದರಿಂದ ಪಾಲಿಕೆಗೆ ಪೂರ್ಣ ಪ್ರಮಾಣದ ವರಮಾನ, ಸಂಪನ್ಮೂಲ ಕ್ರೋಢೀಕರಣ ವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಮೈಸೂರಲ್ಲಿ ಒಂದು ಕನ್ನಡಸೌಧ, ಒಂದು ವಿವಿಧೋದ್ದೇಶ ಮಹಿಳಾ ಭವನದಂತಹ ಶಾಶ್ವತ ಕೆಲಸಗಳನ್ನು ಮಾಡಬೇಕು. ಜನರಿಗೆ ಮೂಲ ಸೌಲಭ್ಯ ಕಲ್ಪಿಸುವ ಜೊತೆಗೆ ಸ್ವಚ್ಛತೆಗೆ ಆದ್ಯತೆ ನೀಡಿ ಎಂದು ಅವರು ಇದೇ ವೇಳೆ ಸಲಹೆ ನೀಡಿದರು.

ದೇವರಾಜ ಮಾರುಕಟ್ಟೆ ಲ್ಯಾನ್ಸ್‌ಡೌನ್ ಬಿಲ್ಡಿಂಗ್: ಶಿಥಿಲಾವಸ್ಥೆಯಲ್ಲಿರುವ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ದೇವರಾಜ ಮಾರುಕಟ್ಟೆ, ಪಾರಂಪರಿಕ ಕಟ್ಟಡಗಳ ವಿವಾದ ಪರಿಹರಿಸಿ, ಅಗತ್ಯ ಕ್ರಮ ಕೈಗೊಂಡು ಅವುಗಳ ಮಳಿಗೆಗಳಿಂದ ಬಾಡಿಗೆ ಬರುವಂತೆ ಮಾಡಿ ಎಂದು ಮಾಜಿ ಮೇಯರ್ ಲಿಂಗಪ್ಪ ಆಗ್ರಹಿಸಿದರು.

ಜನಸಾಮಾನ್ಯನ ಆಸ್ತಿ ತೆರಿಗೆ ಕಡಿಮೆ ಮಾಡಿ, ತೆರಿಗೆ ಬಾಕಿ ಉಳಿಸಿಕೊಂಡಿರುವವರಿಂದ ವಸೂಲಿ ಮಾಡಿದರೆ ಪಾಲಿಕೆಗೆ ವರಮಾನ ಬರುತ್ತದೆ. ಈಗಾಗಲೇ ಖಾತೆ ಇರುವ ಆಸ್ತಿಗಳಿಗೆ ಇ–ಖಾತೆ ಮಾಡಿಕೊಡಬೇಕು ಎಂದು ಅವರು ತಿಳಿಸಿದರು.

ಗ್ಯಾಸ್ ಪೈಪ್‌ಲೈನ್ ಅವಾಂತರ: ಮನೆ ಮನೆಗೆ ಗ್ಯಾಸ್ ಸಂಪರ್ಕ ನೀಡಲು ತೆಗೆಯುತ್ತಿರುವ ಗುಂಡಿಯಿಂದ ಈಗಾಗಲೇ ಹಾದು ಹೋಗಿರುವ ನೀರು ಪೂರೈಕೆ, ಇನ್ನಿತರ ಕೊಳವೆಗಳು ಡ್ಯಾಮೇಜ್ ಆಗುತ್ತಿರುವುದನ್ನು ತಪ್ಪಿಸಬೇಕು. ನಾಗರಿಕರ ಆಸ್ತಿಗಳಿಗೆ ಇ–ಖಾತಾ ಮಾಡಿ ಅನುಕೂಲ ಮಾಡಿಕೊಡಬೇಕೆಂದು ಪುಷ್ಪಲತಾ ಜಗನ್ನಾಥ್ ಒತ್ತಾಯಿಸಿದರು.

ಹಣವೇ ಇಲ್ಲದೆ ಬಜೆಟ್ ಮಾಡಿದರೇನು ಫಲ: ಪಾಲಿಕೆಯಲ್ಲಿ ಹಣವೇ ಇಲ್ಲದೇ ನಗರ ನಿರ್ವಹಣೆ, ಗುತ್ತಿಗೆದಾರರಿಗೆ ಬಿಲ್ ಪಾವತಿ, ಸಂಬಳ, ಸಾರಿಗೆಗೆ ಪರದಾಡುವಂತಾಗಿದೆ ಎಂಬ ಮಾಹಿತಿ ಇದೆ. ಆರ್ಥಿಕ ಸಂಕಷ್ಟ ಎದುರಿಸುತ್ತಿರುವಾಗ ಆಯ–ವ್ಯಯ ಮಂಡಿಸಿದರೆ, ಅದರ ಅನುಷ್ಠಾನವಾದರೂ ಹೇಗೆ ಆಗುತ್ತದೆ ಎಂದ ಮಾಜಿ ಮೇಯರ್ ಅಯೂಬ್ ಖಾನ್, ಯಾರೋ ಹೇಳಿದರೆಂದು ಅಭಿವೃದ್ಧಿಯಾಗದಿರುವ ಬಡಾವಣೆಗಳನ್ನು ಹಸ್ತಾಂತರಿಸಿಕೊಂಡು ನಂತರ ಅಭಿವೃದ್ಧಿಗೆ ಹಣ ಖರ್ಚು ಮಾಡಬೇಕಾಗುವುದರಿಂದ ಪಾಲಿಕೆಗೆ ನಷ್ಟವಾಗುತ್ತದೆ ಎಂದರು. ಅದಕ್ಕೆ ಮಾಜಿ ಮೇಯರ್ ಶಿವಕುಮಾರ್ ಧನಿಗೂಡಿಸಿದರು.

ಅಧಿಕಾರಿಗಳಿಗೆ ಚಾಟಿ ಬೀಸಿ: ಕಂದಾಯ ಬಡಾವಣೆಗಳ ವಿಚಾರದಲ್ಲಿ ಅಧಿಕಾರಿಗಳು, ಸಿಬ್ಬಂದಿಗಳು ಭಾರಿ ಭ್ರಷ್ಟಾಚಾರ ಮಾಡುತ್ತಿದ್ದು, ಲಂಚಾವತಾರ ತಾಂಡವವಾಡುತ್ತಿದೆ. ನೀರಿನ ಬಿಲ್, ಸ್ವಚ್ಛತೆಯಲ್ಲಿ ಲೋಪವೆಸಗುತ್ತಿರುವ ಅಧಿಕಾರಿಗಳಿಗೆ ಚಾಟಿ ಬೀಸಿ ಅವರನ್ನು ನಿಯಂತ್ರಿಸುವಂತೆ ಮಾಜಿ ಉಪ ಮೇಯರ್ ಮಹದೇವಪ್ಪ ಪಾಲಿಕೆ ಕಮಿಷ್ನರ್‌ಗೆ ಸಲಹೆ ನೀಡಿದರೆ, ಜನಪ್ರತಿನಿಧಿಗಳಿಲ್ಲದಿರುವುದರಿಂದ ಅಧಿಕಾರಿಗಳು ಹದ್ದು ಮೀರಿ ನಡೆದುಕೊಳ್ಳುತ್ತಿದ್ದಾರೆ ಎಂದು ಮಾಜಿ ಉಪ ಮೇಯರ್ ಕೃಷ್ಣ ಆರೋಪಿಸಿದರು.

ಸೆಸ್ ಹಣದಲ್ಲಿ ಶಾಲೆ ನಿರ್ಮಿಸಿ: ಪಾಲಿಕೆಯು ಸಾರ್ವಜನಿಕರಿಂದ ಸಂಗ್ರಹಿಸುತ್ತಿರುವ ಎಜುಕೇಷನ್ ಸೆಸ್ ಹಣದಿಂದ ಶಾಲಾ ಕಟ್ಟಡಗಳನ್ನು ನಿರ್ಮಿಸಿಕೊಟ್ಟರೆ ಶಿಕ್ಷಣ ಇಲಾಖೆಯಿಂದ ನಿರ್ವಹಣೆ ಮಾಡಲಾಗುವುದು ಎಂದು ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಶಿಕ್ಷಕ ಅರುಣ್ ಕುಮಾರ್ ಸಲಹೆ ನೀಡಿದರು.

41 ಅನಧಿಕೃತ ಬಡಾವಣೆಗಳು: ಮೈಸೂರು ನಗರದ 41 ಅನಧಿಕೃತ ಬಡಾವಣೆಗಳಿಂದ ಯಾವುದೇ ಆದಾಯ ಬರದಿದ್ದರೂ ಮೂಲ ಸೌಲಭ್ಯ ಒದಗಿಸುತ್ತಿರುವುದರಿಂದ ಪಾಲಿಕೆಗೆ ನಷ್ಟವಾಗುತ್ತಿದೆ. ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಿಂದ ಆದಾಯ ಬರುವಂತೆ ಮಾಡಿ, ಸಮರ್ಪಕವಾಗಿ ತೆರಿಗೆ ಸಂಗ್ರಹಿಸಿ ರೆವಿನ್ಯೂ ಬಡಾವಣೆಗಳಿಂದ ನೀರಿನ ತೆರಿಗೆ ವಸೂಲಿ ಮಾಡಿ ಸಂಪನ್ಮೂಲ ಕ್ರೋಢೀಕರಿಸುವಂತೆ ಮಾಜಿ ಮೇಯರ್‌ಗಳಾದ ದಕ್ಷಿಣಾಮೂರ್ತಿ, ಬಿ.ಎಲ್.ಭೈರಪ್ಪ ಸಲಹೆ ನೀಡಿದರು.

ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆಜೆಸಿಂಧೂ, ಉಪ ಆಯುಕ್ತರಾದ ದಾಸೇಗೌಡ, ಸೋಮಶೇಖರ್, ಅಡಿಷನಲ್ ಕಮಿಷ್ನರ್ ಕುಸುಮ ಕುಮಾರಿ, ಮುಖ್ಯ ಲೆಕ್ಕಾಧಿಕಾರಿ ಶ್ವೇತ, ಮಾಜಿ ಮೇಯರ್‌ಗಳಾದ ಪಿ.ವಿಶ್ವನಾಥ್, ರಾಜೇಶ್ವರಿ, ಎಂಜಿಪಿಯ ಭಾಮಿ ವಿ.ಶೆಣೈ ಹಾಗೂ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ಮಹಾನಗರ ಪಾಲಿಕೆ ಕಚೇರಿ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಗುರುವಾರ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಅಧ್ಯಕ್ಷತೆಯಲ್ಲಿ ಮಾಜಿ ಮೇಯರ್‌ಗಳು, ಅಧಿಕಾರಿಗಳೊಂದಿಗೆ ಬಜೆಟ್ ಪೂರ್ವಭಾವಿ ಸಭೆ ನಡೆಯಿತು.

ಬೀದಿನಾಯಿಗಳ ದಾಳಿ : 4 ಕುರಿಗಳ ಸಾವು

ಹಲವು ಕುರಿಗಳಿಗೆ ಗಾಯ, ಆತಂಕದಲ್ಲಿ ಗ್ರಾಮಸ್ಥರು

ಮೈಸೂರು, ಜ.9(ಜಿಎ)–ಬೀದಿ ನಾಯಿ ದಾಳಿಯಿಂದ ಕುರಿಗಳು ಸಾವನಪ್ಪಿರುವ ಘಟನೆ ಮೈಸೂರಿನ ಸುತ್ತೂರಿನ ಹಾರೋಪುರ ಗ್ರಾಮದಲ್ಲಿ ಸಂಭವಿಸಿದೆ. ತಾಯೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಹಾರೋಪುರ ಗ್ರಾಮದ ಮಹದೇವ ಶೆಟ್ಟಿ ಅವರಿಗೆ ಸೇರಿದ 12 ಕುರಿಗಳ ಮೇಲೆ ಬೀದಿನಾಯಿಗಳು ದಾಳಿ ಮಾಡಿವೆ. ಇವುಗಳಲ್ಲಿ 4 ಕುರಿಗಳು ಸಾವನ್ನಪ್ಪಿದ್ದು, 8 ಕುರಿಗಳು ತೀವ್ರವಾಗಿ ಗಾಯಗೊಂಡಿವೆ.



ಬೀದಿನಾಯಿಗಳ ಹಾವಳಿಗೆ ಬಲಿಯಾದ ಕುರಿಗಳು

ಕುರಿಗಳನ್ನು ಕಟ್ಟಿದ್ದ ಕೊಟ್ಟಿಗೆಗೆ ಬೀದಿ ನಾಯಿಗಳ ಹಿಂಡು ಏಕಾಏಕಿ ನುಗ್ಗಿ ಕುರಿಗಳ ಮೇಲೆ ದಾಳಿ ಮಾಡಿದೆ. ಇದನ್ನು ಕಂಡ ಮನೆಯವರು ತಕ್ಷಣ ವೈದ್ಯರಿಗೆ ಮಾಹಿತಿ ನೀಡಿದರು. ಸುದ್ದಿ ತಿಳಿದ ಕೂಡಲೇ ತಾಯೂರು ಪಶು ಚಿಕಿತ್ಸಾಲಯದ ಪಶು ವೈದ್ಯರಾದ ಅಕ್ಷತಾ ಹಾಗೂ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಕುರಿಗಳಿಗೆ ಪ್ರಥಮ ಚಿಕಿತ್ಸೆ ನೀಡಿ. ಅದರಲ್ಲಿ ಎರಡು ಕುರಿಗಳನ್ನು ಸಾವಿನಿಂದ ಪಾರು ಮಾಡಿದರು. ಇನ್ನುಳಿದ 10 ಕುರಿಗಳು ಸಾವು–ಬದುಕಿನ ನಡುವೆ ಹೋರಾಡುತ್ತಿವೆ.

ಈ ವೇಳೆ ಸ್ಥಳಕ್ಕೆ ಗ್ರಾಮ ಪಂಚಾಯತಿ ಸದಸ್ಯರಾದ ಹಾರೋಪುರ ಕುಮಾರ್, ಸುಧಾ ಮಂಜುನಾಥ್ ಭೇಟಿ ನೀಡಿ ಕುರಿ ಮಾಲೀಕರ ಕುಟುಂಬಕ್ಕೆ ಸಾಂತ್ವನ ಹೇಳಿ ಗ್ರಾಮ ಪಂಚಾಯತಿ ವತಿಯಿಂದ ಹಾಗೂ ಸರ್ಕಾರದ ವತಿಯಿಂದ ನಷ್ಟ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಗ್ರಾಮಸ್ಥರು ಗ್ರಾಮದಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗಿದ್ದು, ಶಾಲೆಗೆ ಹೋಗಲು ಮಕ್ಕಳು ಹಿಂಜರಿಯುತ್ತಿದ್ದಾರೆ. ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಬೀದಿ ನಾಯಿಗಳ ಹಾವಳಿ ತಪ್ಪಿಸಿ, ಜನ ಜಾನುವಾರುಗಳಿಗೆ ರಕ್ಷಣೆ ಕೊಡಬೇಕೆಂದು ಒತ್ತಾಯಿಸಿದರು.

ಪಕ್ಷ ವಿರೋಧಿ ಚಟುವಟಿಕೆ ಆರೋಪ; ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು, ಜ.9(ಬಿಎಲ್‌ಯು)– ಹಾಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಕೆಲಸ–ಕಾರ್ಯಗಳಿಗೆ ಪರೋಕ್ಷವಾಗಿ ಅಡ್ಡಿಪಡಿಸಿ, ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಪರಿಶಿಷ್ಟ ಪಂಗಡಗಳ ಮೋರ್ಚಾ ನಿಕಟಪೂರ್ವ ಅಧ್ಯಕ್ಷ ಮೈ.ಕಾ.ಪ್ರೇಮ್ ಕುಮಾರ್ ಹಾಗೂ ಚಾಮರಾಜ ಕ್ಷೇತ್ರದ ನಿಕಟಪೂರ್ವ ಉಪಾಧ್ಯಕ್ಷ ಕುಮಾರ್ ಗೌಡ ಬಿಜೆಪಿ ವರಿಷ್ಠರನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ ಅವರಿಗೆ ಲಿಖಿತ ದೂರು ಸಲ್ಲಿಸಿರುವ ಅವರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ರಾಷ್ಟ್ರೀಯ ಹೆದ್ದಾರಿ ವಿಷಯವಾಗಿ ಪ್ರತಾಪ್ ಸಿಂಹ ಕೇಂದ್ರ ಮಂತ್ರಿಗಳು ಹಾಗೂ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. ಆ ಮೂಲಕ ಹಾಲಿ ಸಂಸದ ಯದುವೀರ್ ಅವರನ್ನು ಮುಜುಗರಕ್ಕೀಡು ಮಾಡಿದ್ದಾರೆ.

ಮೈಸೂರಿನ ಕೆಆರ್‌ಎಸ್ ರಸ್ತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರಿಡಲು ಬೆಂಬಲಿಸಿದ್ದು, ಅವರ ಪಕ್ಷ ವಿರೋಧಿ ಚಟುವಟಿಕೆಗೆ ಮತ್ತೊಂದು ನಿದರ್ಶನ. ವಕ್ಫ್ ಬೋರ್ಡ್ ವಿರುದ್ಧ ಪಕ್ಷದ ಬ್ಯಾನರ್‌ನಡಿ ಹೋರಾಟ ಮಾಡದೆ ಪ್ರತ್ಯೇಕ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ. ಈ ಮೂಲಕ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೂ ಮುಜುಗರ ಉಂಟು ಮಾಡುತ್ತಿದ್ದಾರೆ ಎಂದು ಪ್ರೇಮ್ ಕುಮಾರ್ ಆಪಾದಿಸಿದ್ದಾರೆ.

ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಪದೇ ಪದೇ ಭೇಟಿ ಮಾಡುತ್ತಿದ್ದಾರೆ. ಜೊತೆಗೆ ತಮಗೆ ಸಂಬಂಧಪಡದ ಕ್ಷೇತ್ರದ ಕೆಲಸ ಕಾರ್ಯಗಳಲ್ಲಿ ಮೂಗು ತೂರಿಸುತ್ತಿದ್ದಾರೆ. ಈ ಮೂಲಕ ಮಾಜಿ ಸಂಸದನಾದರೂ ತಾನು ಪ್ರಭಾವಿ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಇದರಿಂದ ಯದುವೀರ್ ಅವರ ಕೆಲಸ–ಕಾರ್ಯಗಳಿಗೆ ಅಡ್ಡಿ ಮಾಡಿ, ಅವಮಾನಿಸುತ್ತಿದ್ದಾರೆ ಎಂದು ದೂರಿದ್ದಾರೆ.

ಸಂಸತ್ ಅಧಿವೇಶನದಲ್ಲಿ ಸ್ಮೋಕ್ ಬಾಂಬ್ ಸಿಡಿಸುವವರಿಗೆ ಪೂರ್ವಾಪರ ಯೋಚನೆ ಮಾಡದೆ ಪಾಸ್ ನೀಡಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ವರುಣ ಕ್ಷೇತ್ರದಲ್ಲಿ ಮಾತ್ರ ಪ್ರಚಾರ ನಡೆಸಿ, ಉಳಿದ ಕ್ಷೇತ್ರಗಳನ್ನು ಕಡೆಗಣಿಸಿದ್ದಾರೆ. ವಿಧಾನಪರಿಷತ್ ಚುನಾವಣೆ ವೇಳೆ ನ್ಯಾಯವಾದಿಗಳ ವಿರುದ್ಧ ಹೇಳಿಕೆ ನೀಡಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಸೋಲಿಗೆ ಕಾರಣರಾಗಿದ್ದಾರೆ. ಭಿನ್ನಾಭಿಪ್ರಾಯಗಳನ್ನು ಪಕ್ಷದ ವೇದಿಕೆಯಲ್ಲಿ ಚರ್ಚಿಸದೆ ಮಾಧ್ಯಮಗಳ ಮುಂದೆ ಹೇಳಿ ಪಕ್ಷಕ್ಕೆ ಮುಜುಗರ ಉಂಟು ಮಾಡಿದ್ದಾರೆ. ಹೀಗೆ ಹಲವು ರೀತಿಯಲ್ಲಿ ಪ್ರತಾಪ್ ಸಿಂಹ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆ ಎಂದು ಆಪಾದಿಸಿದ್ದಾರೆ.



ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿಗೆ ಪ್ರೇಮ್ ಕುಮಾರ್, ಕುಮಾರಗೌಡ ಶುಕ್ರವಾರ ದೂರು ಸಲ್ಲಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಮೈಸೂರು, ಜ.9– ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಕೃಷಿಕ್ ಸರ್ವೋದಯ ಫೌಂಡೇಷನ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಜ.15ರಿಂದ ತರಬೇತಿ ಹಮ್ಮಿಕೊಳ್ಳಲಾಗಿದೆ ತರಬೇತಿಯು ಆಫ್‌ಲೈನ್‌ನಲ್ಲಿ ಪ್ರಾರಂಭಿಸಲಾಗುತ್ತಿದೆ. ಆಸಕ್ತ ಅಭ್ಯರ್ಥಿಗಳು ಜ.14ರೊಳಗೆ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8296031570, 9448050584 ಸಂಪರ್ಕಿಸಬಹುದು.

ಮಹಿಳೆಯರ ಸ್ವಾವಲಂಬನೆ ವಿವಿಧ ಯೋಜನೆಯಡಿ ಸಾಲ ನೀಡಲು ಬ್ಯಾಂಕ್‌ಗಳು ಸತಾಯಿಸಬಾರದು

● ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸಲಹೆ ● ಮಹಿಳೆಯರ ಸ್ವಯಂ ಉದ್ಯೋಗಕ್ಕೆ ನಾನಾ ಯೋಜನೆ

ಮೈಸೂರು, ಜ.9(ಎಂಟಿವೈ)– ಗ್ರಾಮೀಣ ಪ್ರದೇಶದ ಮಹಿಳೆಯರು ಸ್ವ–ಉದ್ಯಮ ಸ್ಥಾಪಿಸಿ, ಅವರು ಆರ್ಥಿಕವಾಗಿ ಸಬಲರಾಗಲು ಸರ್ಕಾರದ ವಿವಿಧ ಯೋಜನೆಯಡಿ ಬ್ಯಾಂಕ್‌ಗಳು ಸಾಲ ಸೌಲಭ್ಯ ನೀಡಲು ಸತಾಯಿಸಬಾರದು ಎಂದು ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸಲಹೆ ನೀಡಿದ್ದಾರೆ.

ಮೈಸೂರಿನ ಜಿಪಂ ಸಭಾಂಗಣದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಜಿಲ್ಲಾ ಪಂಚಾಯಿತಿ ಸಹಯೋಗದಲ್ಲಿ ಗುರುವಾರ 'ಮಹಿಳಾ ಸಂಘದ ಸದಸ್ಯರು ನಡೆಸುವ ಬ್ಯಾಂಕ್ ವ್ಯವಹಾರ, ಉದ್ದಿಮೆ ಹಣಕಾಸು, ಆರ್ಥಿಕ ಸೇರ್ಪಡೆ, ಸಾಲ ಸಂಪರ್ಕ ಮತ್ತು ಉದ್ಯಮ ಹಣಕಾಸು' ವಿಷಯ ಕುರಿತ ಜಿಲ್ಲಾ ಮಟ್ಟದ ಬ್ಯಾಂಕ್ ವ್ಯವಸ್ಥಾಪಕರುಗಳಿಗಾಗಿ ಆಯೋಜಿಸಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶ ಮಹಿಳೆಯರ ಸ್ವಯಂ ಉದ್ಯೋಗಕ್ಕೆ ಸರ್ಕಾರ ವಿವಿಧ ಯೋಜನೆ ಪ್ರಕಟಿಸಿದೆ. ಆ ಯೋಜನೆಯ ಸೌಲಭ್ಯ ಪಡೆದುಕೊಳ್ಳಲು ಅರ್ಹ ಫಲಾನುಭವಿಗಳು ಬ್ಯಾಂಕ್‌ಗಳಿಗೆ ಸಾಲ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿದರೆ, ಅಂತಹವರ ಸಂಕಷ್ಟಕ್ಕೆ ಬ್ಯಾಂಕ್ ಸಿಬ್ಬಂದಿ ನೆರವಾಗಬೇಕು. ಗ್ರಾಮೀಣ ಪ್ರದೇಶದ ಮಹಿಳೆಯರು ಹೆಚ್ಚಿನ ಶಿಕ್ಷಣ ಪಡೆದಿಲ್ಲದ ಕಾರಣ, ಬ್ಯಾಂಕ್ ಸಿಬ್ಬಂದಿ ಅರ್ಜಿ ಸಲ್ಲಿಸಿದ ಫಲಾನುಭವಿಗಳಿಗೆ ಅರ್ಥವಾಗುವಂತೆ ನಡೆದುಕೊಳ್ಳಬೇಕು. ಕನ್ನಡ ಭಾಷೆಯಲ್ಲಿಯೇ ವ್ಯವಹರಿಸಿ, ಅರ್ಜಿ ಸಲ್ಲಿಕೆಯಲ್ಲಿ ಏನಾದರೂ ಲೋಪವಾಗಿದ್ದರೆ, ಅದನ್ನು ಮನವರಿಕೆ ಮಾಡಿಕೊಡಬೇಕು ಎಂದು ಸೂಚಿಸಿದರು.



ಮೈಸೂರಿನ ಜಿಪಂ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಬ್ಯಾಂಕ್ ಅಧಿಕಾರಿಗಳಿಗಾಗಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಮಾತನಾಡಿದರು.

ಬ್ಯಾಂಕ್‌ಗಳು ನಿಗದಿತ ಅವಧಿಯಲ್ಲಿ ಸಾಲ ಮಂಜೂರು ಮಾಡಿದರೆ, ಸರ್ಕಾರದ ವತಿಯಿಂದ ಸಿಗುವ ಸಬ್ಸಿಡಿಯನ್ನು ಬಳಸಿಕೊಂಡು ಫಲಾನುಭವಿಗಳು ಉದ್ಯಮ ಸ್ಥಾಪಿಸಲು ನೆರವಾಗುತ್ತದೆ ಇದರಿಂದ ಮಹಿಳೆಯರು ಉದ್ಯಮದಲ್ಲಿ ಏಳಿಗೆ ಸಾಧಿಸಲು ಸಾಧ್ಯವಾಗುತ್ತದೆ. ಸಂಜೀವಿನಿ ಯೋಜನೆ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಆದ್ಯತೆ ನೀಡುತ್ತದೆ. ಮಹಿಳೆಯರನ್ನು ಮನೆಯ ಕೆಲಸಕ್ಕೆ ಸೀಮಿತ ಮಾಡದೆ ಸ್ವಂತ ಶಕ್ತಿಯ ಮೇಲೆ ನಿಲ್ಲಲು ಪ್ರೋತ್ಸಾಹ ನೀಡಬೇಕು.

ಕೊರೊನಾ ಸಂದರ್ಭದಲ್ಲಿ ಮನೆಯ ಬಳಿ ದೊರೆತ ಕಚ್ಚಾವಸ್ತುಗಳನ್ನು ಬಳಸಿಕೊಂಡು ಆಹಾರ ವಸ್ತುಗಳನ್ನು ತಯಾರಿಸಿ ಸಾವಿರಾರು ಜನರು ತಮ್ಮ ಬದುಕು ಕಟ್ಟಿಕೊಂಡಿದ್ದಾರೆ. ಆಹಾರ ಮತ್ತು ತಿಂಡಿ ಪದಾರ್ಥಗಳನ್ನು ತಯಾರಿಸುವ ಗುಂಪುಗಳಿಗೆ ಸಾಲ ನೀಡಬೇಕು. ಮಾರುಕಟ್ಟೆ ಒದಗಿಸುವ ಮಟ್ಟಿಗೆ ನೆರವಾದರೆ ಒಂದಿಷ್ಟು ಜನರಿಗೆ ಉದ್ಯೋಗ ದೊರೆಯಲಿದೆ ಎಂದು ನುಡಿದರು.

ಜಿ.ಪಂ ಮುಖ್ಯ ಯೋಜನಾಧಿಕಾರಿ ಕೆ.ಬಿ.ಪ್ರಭುಸ್ವಾಮಿ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ 11,755 ಸ್ವ–ಸಹಾಯ ಸಂಘಗಳಿದ್ದು, 1,38,231 ಸದಸ್ಯರಿದ್ದಾರೆ. ಈ ಸಂಘಗಳಿಗೆ ಸರ್ಕಾರದ ವತಿಯಿಂದ ಈ ಹಿಂದೆ 58.93 ಕೋಟಿ ರೂ. ಸಾಲ ಸೌಲಭ್ಯ ನೀಡಲಾಗಿತ್ತು. ಸಾಲ ಪಡೆದ ಮೊತ್ತವನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸ್ವ-ಸಹಾಯ ಸಂಘಗಳು 283 ಕೋಟಿ ರೂ. ವಹಿವಾಟು ನಡೆಸಿವೆ. ಸ್ವ–ಸಹಾಯ ಸಂಘಗಳ ಸದಸ್ಯರೊಂದಿಗೆ ಕುಟುಂಬದ ಸದಸ್ಯರ ಆರ್ಥಿಕ ಪರಿಸ್ಥಿತಿಯೂ ಸುಧಾರಿಸುತ್ತದೆ. ಬ್ಯಾಂಕ್ ವ್ಯವಹಾರಗಳಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳ ನಿವಾರಣೆಗಾಗಿ ಕಾರ್ಯಾಗಾರ ಆಯೋಜಿಸಲಾಗಿದೆ. ಕೇಂದ್ರ ಸರ್ಕಾರದ 65 ಪುರಸ್ಕೃತ ಯೋಜನೆಗಳು, ರಾಜ್ಯವಲಯದ ಯೋಜನೆಗಳು ಸೇರಿದಂತೆ ನೂರು ಯೋಜನೆಗಳ ಅನುಷ್ಠಾನಗೊಳಿಸಲಾಗಿದೆ. ಇದರಲ್ಲಿ ಬಹುತೇಕ ಮಹಿಳಾ ಸಬಲೀಕರಣಕ್ಕೆ ಪೂರಕವಾದ ಯೋಜನೆಗಳಾಗಿವೆ ಎಂದು ಹೇಳಿದರು.

ಲೀಡ್ ಬ್ಯಾಂಕ್ ಮ್ಯಾನೇಜರ್ ನಾಗೇಶ್ ಮಾತನಾಡಿ, ಸರ್ಕಾರಿ ಯೋಜನೆಗಳ ಬಗ್ಗೆ ಬಹುತೇಕ ಬ್ಯಾಂಕ್‌ಗಳ ಮ್ಯಾನೇಜರ್‌ಗಳಿಗೆ ಪೂರ್ಣ ಪ್ರಮಾಣದ ಮಾಹಿತಿ ದೊರೆಯುವುದಿಲ್ಲ, ತಿಳಿದಿರುವುದಿಲ್ಲ. ಎನ್‌ಆರ್‌ಎಲ್‌ಎಂ ನೋಡೆಲ್ ಅಧಿಕಾರಿಗಳೊಂದಿಗೆ ಸಂಪರ್ಕ ಇಟ್ಟುಕೊಂಡು ಸರ್ಕಾರಿ ಯೋಜನೆಗಳ ಬಗ್ಗೆ ಗಮನಹರಿಸಬೇಕು. ಕೃಷಿ ಅವಲಂಬಿತ ಚಟುವಟಿಕೆಗಳು, ಉದ್ಯಮ ಸ್ಥಾಪಿಸುವವರಿಗೆ ಪ್ರೋತ್ಸಾಹ ನೀಡಬೇಕು ಎಂದು ಹೇಳಿದರು.

ಸಮುದಾಯ ಕಾರ್ಯಕ್ರಮಗಳಿಗೆ ಒತ್ತು ನೀಡಿದರೆ ಬ್ಯಾಂಕ್ ವ್ಯವಹಾರ ಜಾಸ್ತಿಯಾಗಲಿದೆ. ಖಾತೆ ಇಲ್ಲದ ಮಹಿಳೆಯರನ್ನು ಗುರುತಿಸಿ ಖಾತೆ ತೆರೆಯಬೇಕು. ಉಳಿತಾಯ ಮಾಡಿಸಿ ನಂತರ ಸಾಲ ಕೊಟ್ಟರೆ ಅನುಕೂಲವಾಗಲಿದೆ ಎಂದರು.

ಬಳಿಕ, ಕೆನರಾ ಬ್ಯಾಂಕ್ ರಾಜ್ಯ ಸಂಪನ್ಮೂಲ ವ್ಯಕ್ತಿ ರಾಮಕೃಷ್ಣ ಮಾನೆ, ಸ್ವಸಹಾಯ ಸಂಘದ ಸದಸ್ಯರು ನಡೆಸುವ ಬ್ಯಾಂಕ್ ವ್ಯವಹಾರ, ಉದ್ಯಮ ಹಣಕಾಸು ಕುರಿತು, ಜಿಪಂ ಮುಖ್ಯ ಯೋಜನಾಧಿಕಾರಿ ರಾಜ್ಯ, ಕೇಂದ್ರಸರ್ಕಾರಗಳ ಅನುದಾನದ ಮೂಲ ಮತ್ತು ಪ್ರಮುಖ ಯೋಜನೆಗಳ ಕುರಿತು ಕಾರ್ಯಾಗಾರದಲ್ಲಿ ವಿಷಯ ಮಂಡನೆ ಮಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗೇಮ್ ಚೇಂಜರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗೇಮ್ ಚೇಂಜರ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫತೇ(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೂ ಮಂತರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಗೇಮ್ ಚೇಂಜರ್(ತೆ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಭೂ ಮಂತರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗೇಮ್ ಚೇಂಜರ್ (ಹಿ)	4 ಪ್ರದರ್ಶನಗಳು
ಪ್ರಭಾ	
ಟೆಡ್ಡಿ ಬಿಯರ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೊ (ಹಿಂ): ರಾ.7ಕ್ಕೆ, ಮಾರ್ಕೊ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

INOX LIVE THE MOVIE — ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

MVC — ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

PVR CINEMAS — ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಎಂಎಸ್‌ಪಿ ಖಾತ್ರಿ ಕಾನೂನು ಜಾರಿಗೆ ಆಗ್ರಹಿಸಿ ರೈತ ಸಂಘದಿಂದ ಪ್ರತಿಭಟನೆ

ಜನವರಿ 13ರಂದು ನರೇಂದ್ರ ಮೋದಿ, ಶಿವರಾಜ್ ಸಿಂಗ್ ಚೌಹಾಣ್ ಪ್ರತಿಕೃತಿ ದಹನ



ಮೈಸೂರು, ಜ.9(ಬಿಎಲ್‌ಯು)– ಎಂಎಸ್‌ಪಿ ಖಾತ್ರಿ ಕಾನೂನು ಜಾರಿಗೆ ಆಗ್ರಹಿಸಿ ಜನವರಿ 13ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರ ಪ್ರತಿಕೃತಿ ದಹನ ಮಾಡಲಾಗುವುದು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.

ಮೈಸೂರಿನ ನಜರ್‌ಬಾದ್‌ನ ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜನವರಿ 14ರಿಂದ 16ರವರೆಗೆ ಹಳ್ಳಿ ಹಾಗೂ ತಾಲೂಕು ಕೇಂದ್ರಗಳಲ್ಲಿ ಪಂಜಿನ ಮೆರವಣಿಗೆ ನಡೆಸಲಾಗುವುದು ಎಂದು ತಿಳಿಸಿದರು.

ಜೊತೆಗೆ ಜನವರಿ 26ರಂದು ರಾಜ್ಯದ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಟ್ರ್ಯಾಕ್ಟರ್ ಮೆರವಣಿಗೆ ಕೂಡ ನಡೆಸಲಾಗುವುದು ಎಂದು ಹೇಳಿದರು.

ದೆಹಲಿ ಗಡಿ ಕನೂರಿನಲ್ಲಿ ಪಂಜಾಬ್‌ನ ಸಂಯುಕ್ತ ಕಿಸಾನ್ ಮೋರ್ಚಾ ಸಂಘಟನೆಯ ರಾಷ್ಟ್ರೀಯ ಸಂಚಾಲಕ ಜಗಜಿತ್ ಸಿಂಗ್ ಧಲೇವಾಲ ಕಳೆದ 45 ದಿನಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಆದರೆ ಕೇಂದ್ರ ಸರ್ಕಾರ ರೈತರ ಬೇಡಿಕೆಗೆ ಸ್ಪಂದಿಸದೆ ನಿರ್ಲಕ್ಷ್ಯ ತೋರಿದೆ ಎಂದು ಆರೋಪಿಸಿದರು.

31 ಸಂಸದರ ಸಂಸದೀಯ ಮಂಡಳಿ ನವೆಂಬರ್ 18ರಂದು ಎಂಎಸ್‌ಪಿ ಕಾನೂನು ಜಾರಿ ಅವಶ್ಯವೆಂದು ವರದಿ ನೀಡಿದೆ. ಅದೇ ರೀತಿ ಸರ್ವೋಚ್ಚ ನ್ಯಾಯಾಲಯ ನೇಮಕ ಮಾಡಿದ್ದ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ನವಾಬ್ಸಿಂಗ್ ಸಮಿತಿ ನವೆಂಬರ್ 22ರಂದು ವರದಿ ನೀಡಿ, ಇದೇ ಅಭಿಪ್ರಾಯ ವ್ಯಕ್ತಪಡಿಸಿದೆ. ಈ ಮೂಲಕ ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ ಖಾತ್ರಿ ಕಾನೂನು ಅವಶ್ಯ ಎಂದು ಹೇಳಿದೆ. ಆದರೂ ಈ ತನಕ ಕೇಂದ್ರ ಸರ್ಕಾರ ರೈತರ ಬೇಡಿಕೆ ಈಡೇರಿಸಲು ಒಲವು ತೋರಿಲ್ಲ ಎಂದು ಆರೋಪಿಸಿದರು.

ಈ ಹಿನ್ನೆಲೆ ರೈತರ ಹಲವು ಬೇಡಿಕೆ ಈಡೇರಿಕೆಗೆ ಹಲವು ಹಂತಗಳಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಕುರುಬೂರು ಶಾಂತಕುಮಾರ್ ತಿಳಿಸಿದರು. ರೈತ ಮುಖಂಡರಾದ ಹತ್ತಳ್ಳಿ ದೇವರಾಜ್, ಪಿ.ಸೋಮಶೇಖರ್, ಕಿರಗಸೂರ್ ಶಂಕರ್, ಬರಡನಪುರ ನಾಗರಾಜ್, ಎಂ.ಬಿ.ಚೇತನ್, ಮಾರ್ಬಳ್ಳಿ ನೀಲಕಂಠಪ್ಪ, ಉಡಿಗಾಲ ರೇವಣ್ಣ, ಮುಡ್ಲುಪುರ ಶಿವಮೂರ್ತಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಶ್ರೀ ಸುಬ್ರಹ್ಮಣ್ಯ ಸ್ವಾಮಿ ಅಸೋಸಿಯೆಟ್ಸ್ ಮಾಲೀಕರಾದ
ಆನಂದ್ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಇವರಿಗೆ ತಾಯಿ ಚಾಮುಂಡೇಶ್ವರಿ ಆಯುಷ್ಯ-ಆರೋಗ್ಯ ಕೊಟ್ಟು ಕಾಪಾಡಲಿ
ಶುಭಕೋರುವವರು
ಆನಂದ್ ಸ್ನೇಹ ಬಳಗ



ದಿ-ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿ.
ಮುಖ್ಯ ಕಛೇರಿ : 0821-2521631 ಶಾಖಾ ಕಛೇರಿ : ಸಯ್ಯಾಜಿರಾವ್ ರಸ್ತೆ : 0821-256851

ಬ್ಯಾಂಕಿನ ಅಭಿವೃದ್ಧಿಯೇ ನನ್ನ ಗುರಿ

ಆಡಳಿತ ಮಂಡಳಿ ಚುನಾವಣೆ 2025–2030
ನಾಡಿನ ಸಮಸ್ತ ಜನತೆಗೆ ಹಾಗು ಶೇರುದಾರರಿಗೆ ಹೊಸ ವರ್ಷ ಹಾಗು ಸಂಕ್ರಾಂತಿ ಹಬ್ಬದ ಶುಭಾಶಯಗಳು
ಮಾನ್ಯ ಶೇರುದಾರರಾದ ಮತದಾರ ಬಂಧುಗಳೇ ಗುರು ಹಿರಿಯರೇ, ಹಿತೈಷಿಗಳೇ, ಸ್ನೇಹಿತರೇ ಹಾಗೂ ಬಂಧುಗಳೇ ನೀವೆಲ್ಲರೂ ಸೇರಿ ದಿನಾಂಕ : 19-01-2025 ನೇ ಭಾನುವಾರ ನಡೆಯಲಿರುವ ಆಡಳಿತ ಮಂಡಳಿಯ 'ಸಾಮಾನ್ಯ' ವರ್ಗದಿಂದ ನಿರ್ದೇಶಕರ.
ಚುನಾವಣೆಗೆ ಸ್ಪರ್ಧಿಸುತ್ತಿರುವ ನನ್ನನ್ನು ಮತ್ತೊಮ್ಮೆ ಗೆಲ್ಲಿಸಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿ ಹಾಗೂ ಏಳಿಗೆಗಾಗಿ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಕೋರಿಕೊಳ್ಳುತ್ತಿದ್ದೇನೆ
ಮತಚಲಾಯಿಸುವವರು ಕಡ್ಡಾಯವಾಗಿ ಗುರುತಿನ ಚೀಟಿಯನ್ನು(Identity card) ತರಬೇಕು ಗುರುತಿನ ಚೀಟಿ ಇಲ್ಲದವರು ಬ್ಯಾಂಕಿನಲ್ಲಿ ಪಡೆಯ ತಕ್ಕದ್ದು

ತಮ್ಮ ಸೇವಾಕಾಂಕ್ಷಿ :
ಜೆ.ಯೋಗೇಶ್ (ಪಡುವಾರಹಳ್ಳಿ)
ಹಾಲಿ ನಿರ್ದೇಶಕರು, ಮಾಜಿ ಉಪಾಧ್ಯಕ್ಷರು.
ಮೊ : 9900501066

ಚುನಾವಣೆ ನಡೆಯುವ ಸ್ಥಳ:
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಆವರಣ ದೊಡ್ಡಕೆರೆ ಮೈದಾನ, ಮೈಸೂರು
ಸಮಯ : ಬೆಳಗ್ಗೆ 09:00 ರಿಂದ ಸಂಜೆ 04:00

ನಿಸರ್ಗ ಇಕೋ ಪ್ಯಾರಡೈಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
HP HIGHLAND PROPERTIES DTCP APPROVAL
ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಕೇವಲ ₹650/ ಪ್ರತಿ ಚದರ ಅಡಿ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
95133 01854
88840 71010

ದೊರೆಯುತ್ತದೆ
ಒರಿಜಿನಲ್ ಇಂಡಿಯನ್ ಟೀಕ್‌ವುಡ್ ತುಂಡುಗಳು ಮತ್ತು ಕಟ್‌ಸೈಜ್‌ಗಳು ರಿಯಾಯಿತಿ ದರದಲ್ಲಿ ದೊರೆಯುತ್ತದೆ
ಸಂಪರ್ಕಿಸಿ:
9448379993
ದಿ ಶರೀಫ್ ಇಂಡಸ್ಟ್ರೀಸ್ & ಸಾಮಿಲ್
#33, ನ್ಯೂ ಬಂಬೂ ಬಜಾರ್, ಮೈಸೂರು

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 20,000
9164946160

ಬ್ಯಾಂಗಲ್ ಮತ್ತು ಬ್ರೇಸ್ಲೆಟ್ ಮೇಳ
ಸಂಕ್ರಾಂತಿ ಕೊಡುಗೆ
9 ರಿಂದ 15 ಜನವರಿ, 2025
ಪ್ರತಿ ರೂ. 25,000 ಖರೀದಿಗೆ ಚಿನ್ನದ ನಾಣ್ಯ ಉಚಿತ*



ಹಳೆಯ ಚಿನ್ನದ ಎಕ್ಸ್‌ಚೇಂಜ್‌ಗೆ ಮಾರಾಟದ ಬೆಲೆಗಿಂತ ಪ್ರತಿ ಗ್ರಾಂ ಗೆ ರೂ. 75/– ಅಧಿಕ ಪಡೆಯಿರಿ
ಈ ನಿಮ್ಮ ಸುಂದರವಾದ ಕೈಗಳನ್ನು ವಿಶೇಷ ಶ್ರೇಣಿಯ ಬಳೆಗಳೊಂದಿಗೆ ಅಲಂಕರಿಸಿ
SINCE 1925
A. SHANKARA CHETTY & SONS
FOUNDER - A. GOPALA CHETTY
PLATINUM DIAMOND GOLD SILVER JEWELLERS
ಕೆ ಆರ್ ಸರ್ಕಲ್, ಮೈಸೂರು | ಫೋನ್ : 88808 66661
ವ್ಯಾಲೆಟ್ ಪಾರ್ಕಿಂಗ್ ಲಭ್ಯವಿದೆ | ಸಮಯ: ಬೆಳಿಗ್ಗೆ 11 ರಿಂದ ರಾತ್ರಿ 8 ರವರೆಗೆ

Hurry Few Seats Available !!!

Courses	Seats
• BPT	2
• MIT	2
• MLT	3
• AT & OT	1

for academic year 2024-25 in Para-Medical Courses
Last Date for admission: 24-01-2025
www: heritagecitycollege.in
Call: + 91- 8050445888
+ 91- 8296516212
Heritage City College
Opp. Apollo Hospital, Mysore

2.5 BHK HOME INTERIORS @ ₹ 2.5 Lakh*
Home Space Mart
*T&C Apply
✆91089 23123

Aquaguard & Kent Water Purifier
Sales & Service
9901200444
#319, Near Mega Medical Store, Kuvempunagar

ವಾಣಿಜ್ಯ ಆಸ್ತಿ ಬಾಡಿಗೆ/ಮಾರಾಟಕ್ಕೆ ಇದೆ
ಕೊಡಗಿನ ಗೋಣಿಕೊಪ್ಪದಲ್ಲಿ
ಈ ಜಾಗವು ಪ್ರಮುಖ ಸ್ಥಳದಲ್ಲಿದ್ದು, ಹೆಚ್ಚು ಗೋಚರಿಸುತ್ತದೆ ಹಾಗೂ ಮುಖ್ಯ ರಸ್ತೆ ಗೋಜಲುಗಳಿಂದ ದೂರವಿದೆ ಮತ್ತು ಸುಲಭವಾಗಿ ತಲುಪುವಂತಿದೆ. 13500 ಚದರ ಅಡಿಯಲ್ಲಿ 3 ಮಹಡಿ 60 ಸೆಂಟ್ಸ್ ವಾಣಿಜ್ಯ ಭೂಮಿ ಮತ್ತು ಸಾಕಷ್ಟು ಪಾರ್ಕಿಂಗ್ ವ್ಯವಸ್ಥೆಯಿದೆ. ಶೋರೂಮ್, ಬ್ಯಾಂಕ್, ರೆಸ್ಟೋರೆಂಟ್ ಮತ್ತು ಇತರ ಸಂಸ್ಥೆಗಳು ಸೇರಿದಂತೆ ವಿವಿಧ ವಾಣಿಜ್ಯ ಉದ್ಯಮಗಳಿಗೆ ಸೂಕ್ತವಾಗಿದೆ. ಸಂಪರ್ಕಿಸಿ :
9448346284 | 8197787280


LAVANYA CONSTRUCTIONS
BUILD YOUR FUTURE HOME
Offer Price 1990/Sq.ft. including GST & Design Charges.
• Red Bricks • Modular Kitchen
• Wardrobes • Ultratech Cement
• Turbo Steel • Teak Wood Doors
Call : 97420 92190

FOR RENT - 3 BHK
Brand new apartment
1st floor, East facing
30 K rent per month, near KEB junction, Dattagalli.
MOB: 8123802102
Commission applicable.

ಮಕರ ಸಂಕ್ರಾಂತಿ ಸಾಮಗ್ರಿಗಳು ದೊರೆಯುತದೆ
ಆಯ್ದ, ಅತ್ಯುತ್ತಮ ಗುಣಮಟ್ಟದ ಕೆಳಕಂಡ ಸಂಕ್ರಾಂತಿ ಹಬ್ಬದ ಸಾಮಾಗ್ರಿಗಳು ನಮ್ಮಲ್ಲಿ ಲಭ್ಯವಿದೆ.
ಹುರಿದ ನೈಲಾನ್ ಎಳ್ಳು, ಬೆಲ್ಲದ ಚೂರು, ಕೊಬ್ಬರಿ ಚೂರು, ಹುರಿದ ಕಡಲೆಕಾಯಿ ಬೀಜ, ಹುರಿಗಡಲೆ, ಸಕ್ಕರೆ ಅಚ್ಚು ದೊರೆಯುತ್ತದೆ.
ಮೋಹನ್ ಭಂಡಾರ್®
ಸೂಪರ್ ಮಾರ್ಕೆಟ್ 1963 ಅನೆಕ್ಸ್
ಬಲ್ಲಾಳ್ ಸರ್ಕಲ್ ಹತ್ತಿರ, ಮೈಸೂರು
ವಿಳಾಸ : ನಂ.1217, ನ್ಯೂ ಕಾಂತರಾಜ ಅರಸ್ ರಸ್ತೆ, ಕೃಷ್ಣಮೂರ್ತಿಪುರಂ.
ಉಚಿತ ಹೋಮ್ ಡೆಲಿವರಿಗಾಗಿ ಸಂಪರ್ಕಿಸಿ*
63628 55583 / 0821-4851436

NEW YEAR SALE
BUY 2 GET 1 FREE 2+1 OFFER *T&C Apply
ON GENTS & LADIES FOOTWEAR
OFFER TILL 21ST JAN* ON ALL IN-HOUSE BRANDS
RUSH PICK THE BEST FOR YOUR FEET
SHOE WORLD™ ESTD.1998
Best Brands at Your Feet...
Only At
• RAMASWAMY CIRCLE, 100 FT RD, MYSORE
PH: 0821-2424252

FOR ADVERTISEMENT
STAR OF MYSORE 47 — Please Call: 0821-2496522 / 23 Email: ad@starofmysore.com
ಮೈಸೂರು ಮಿತ್ರ 45 — Please Call: 0821-2496522 / 23 Email: ad@mysurumithra.com



ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರ
ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ
ದತ್ತನಗರ, ಊಟಿ ರಸ್ತೆ, ಮೈಸೂರು
ವೈಕುಂಠ ಏಕಾದಶಿ
ಶುಕ್ರವಾರ, 10.1.2025
"ಉತ್ತರ ದ್ವಾರ ದರ್ಶನ"
ಸಮಯ: ಬೆಳಗ್ಗೆ 6 ರಿಂದ ಮಧ್ಯಾಹ್ನ 2.30ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 9 ರವರೆಗೆ
ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಯ ದೇವಾಲಯಕ್ಕೆ ಪ್ರವೇಶವನ್ನು ಆಶ್ರಮದ ಮುಖ್ಯ ದ್ವಾರದಿಂದ ಏರ್ಪಡಿಸಲಾಗಿದೆ
ಎಲ್ಲರಿಗೂ ಸುಸ್ವಾಗತ

PASSIONATE EDUCATORS - WANTED!
PURNA CHETANA
THE 21ST CENTURY BHARATIYA SCHOOL
Walk-In Interview - 11-Jan-2025 | 10 AM - 2 PM
SUBJECTS / POSITIONS
- English
- Science/EVS
- Mathematics
- Sanskrit
- Social Science
- Computer Science
- Hindi
- Art & Craft
- PE Trainer
- Librarian
- Admin Executive

Send Your CV To 72048 36513
Teach. Lead. Inspire.

ಬೇಕಾಗಿದ್ದಾರೆ
ದೋಸ ಮಾಸ್ಟರ್, ಕ್ಯಾಶಿಯರ್ ಮತ್ತು ವೈಟರ್ಸ್.
ಸಂಪರ್ಕಿಸಿ
Mob: 8277175836

PUBLIC NOTICE
NOTICE is hereby given that, my clients Sri Channe Gowda.R S/o. Sri. Ramachandraiah.N., R/at: # 39, B Block, 18th Cross, Near Puttaswamy School, J.P. Nagar, Mysore intends to entered into the purchase the schedule property from Sri S.Suresh S/o Sri R.Soundara Pandian, R/at: No. J405, TVS Emerald Green Acres Phase II. Gandhi Road, Kolapakkam, Kancheepuram, Tamil Nadu.

Sri S. Suresh has loss the allotment Letter dated 26.12.1984 hence I am issuing this notice to the general public and any persons claiming right, title or interest in the said properties or any part thereof by way of sale, gift, lease, inheritance, exchange, mortgage, charge, lien, trust, possession, easement, attachment or otherwise how-so-ever are hereby required to make the same known to the undersigned at his office within 7 days from the date hereof, falling which, the said transactions will be completed, without any reference to such claim and the same, if any shall be considered as waived.

SCHEDULE

All the piece and parcel of the property bearing No. 39 with PID No.25161, Constructed ground floor building thereon East to West 60 feet and North to South 45 feet situated at 18th Cross, 'B' Block, 1st Stage, Nachanahalli (J.P.Nagar), Fort Mohalla, Mysore and bounded by: East By: Road ; West By: Property No.30 ; North By: Property No. 38 ; South By: Property No. 40.

Sd/- Abhinandan. H., Advocate
Office Address: 990, First Floor, 'E' & 'F' Block, Panchamanthra Road, Kuvempunagar, Mysuru-570023.
Phone No.9964426903: E-Mail: advabhinandan@gmail.com
Date: 9-12-2024

ಭಾನವಿ ಪ್ಯಾಲೆಸ್ ಮೈಸೂರು
ಶುಕ್ರವಾರ, 10-01-2025 | ಉದ್ಘಾಟನಾ ಸಮಾರಂಭ | ಸಂಜೆ 5.00 ಗಂಟೆಗೆ

ಉದ್ಘಾಟಕರು
ಸನ್ಮಾನ್ಯ ಶ್ರೀ ಸಿದ್ದರಾಮಯ್ಯ
ಮುಖ್ಯ ಮಂತ್ರಿಗಳು, ಕರ್ನಾಟಕ ರಾಜ್ಯ ಸರ್ಕಾರ

ಮುಖ್ಯ ಅತಿಥಿಗಳು
ಮಾನ್ಯ ಶ್ರೀ ಕೆ ವೆಂಕಟೇಶ್ — ಪಶುಸಂಗೋಪನೆ ಮತ್ತು ರೇಷ್ಮೆ ಹಾಗೂ ಚಾಮರಾಜನಗರ ಜಿಲ್ಲೆ ಉಸ್ತುವಾರಿ ಸಚಿವರು
ಮಾನ್ಯ ಡಾ॥ ಹೆಚ್ ಸಿ ಮಹದೇವಪ್ಪ — ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲೆ ಉಸ್ತುವಾರಿ ಸಚಿವರು
ಮಾನ್ಯ ಶ್ರೀ ಜಿ ಟಿ ದೇವೇಗೌಡ — ಶಾಸಕರು- ಚಾಮುಂಡೇಶ್ವರಿ ಕ್ಷೇತ್ರ ಹಾಗೂ ಮಾಜಿ ಸಚಿವರು
ಮಾನ್ಯ ಶ್ರೀ ಕೆ ಹರೀಶ್ ಗೌಡ — ಶಾಸಕರು- ಚಾಮರಾಜ ಕ್ಷೇತ್ರ
ಮಾನ್ಯ ಡಾ॥ ಯತೀಂದ್ರ ಸಿದ್ದರಾಮಯ್ಯ — ವಿಧಾನ ಪರಿಷತ್ ಸದಸ್ಯರು

ಸ್ವಾಗತ ಬಯಸುವವರು
ಶ್ರೀ ಸಿ ನರಸೇಗೌಡ — ಅಧ್ಯಕ್ಷರು, ಭಾನವಿ ಚಾರಿಟಬಲ್ ಟ್ರಸ್ಟ್ ಮತ್ತು ಕುಟುಂಬಸ್ಥರು
ಡಾ. ಎನ್ ವಿಜಯ್ ಚೆಲುವರಾಜ್ — ವೈದ್ಯಕೀಯ ನಿರ್ದೇಶಕರು, ಭಾನವಿ ಆಸ್ಪತ್ರೆ, ಮೈಸೂರು



0821-2476166, 7975293334 | # 14, ಲಲಿತಾದ್ರಿನಗರ ದಕ್ಷಿಣ, ಮೈಸೂರು 570028 | www.bhanavipalace.com

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು